ಲಿಖಿತ ಮೂಲಕ ಉತ್ತರಿಸುವ
ಪ್ರಶ್ನೆಗಳ ಪಟ್ಟಿ

ಒಟ್ಟು ಪ್ರಶ್ನೆಗಳು – ೧೩೩

ಪಟ್ಟಿ – ೧೦

# ಕರ್ನಾಟಕ ವಿಧಾನ ಪರಿಷತ್ತು

ನೂರ ಇಪ್ಪತ್ತೇಳನೇ ಅಧಿವೇಶನ

ಮುಂದುವರೆದ ಉಪವೇಶನ

**ಸೋಮವಾರ, ದಿನಾಂಕ : ೧೬ನೇ ಮಾರ್ಚ್, ೨೦೧೫**

---

## ಸಮೂಹ – I

೧. ಯೋಜನೆ ಮತ್ತು ಸಾಂಖ್ಯಿಕ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಮತ್ತು ವಿಜ್ಞಾನ ಹಾಗೂ ತಂತ್ರಜ್ಞಾನ ಸಚಿವರು

೨. ಸಾರಿಗೆ ಸಚಿವರು

೩. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು

೪. ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು

೫. ಆಹಾರ ಮತ್ತು ನಾಗರೀಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ರಾಜ್ಯ ಸಚಿವರು

೬. ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು

---

F-1-B/B

## ಬೆಂಗಳೂರು ನಗರದಲ್ಲಿ ಬಸ್ ನಿಲ್ದಾಣಗಳ ಬದಲಾವಣೆ

**ಶ್ರೀ ಬಿ. ರಾಮಕೃಷ್ಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) ಶ್ರೀ ರಾಮಚಂದ್ರಗೌಡ (ಪದವೀದರರ ಕ್ಷೇತ್ರ) ಹಾಗೂ ಶ್ರೀ ಎಂ. ಶ್ರೀನಿವಾಸ್ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೧೩೫ (೧೩೩೮+೧೩೦೬+೧೫೦೬) ಮಾನ್ಯ ಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರಿನ ಮೆಜೆಸ್ಟಿಕ್‌ನಲ್ಲಿ ಬಸ್‌ಗಳ ಸಂಚಾರ ಒತ್ತಡ ನಿವಾರಿಸುವ ಸಲುವಾಗಿ ನಗರದ ಯಾವ ಯಾವ ಭಾಗಗಳಲ್ಲಿ ಬಸ್ ನಿಲ್ದಾಣಗಳನ್ನು ಸ್ಥಾಪಿಸಲಾಗಿದೆ ; ಅವುಗಳನ್ನು ನಿರ್ಮಿಸಿದ್ದು ಯಾವಾಗ ; ನಿರ್ಮಾಣಕ್ಕೆ ತಗುಲಿದ ವೆಚ್ಚ ಎಷ್ಟು ;

(ಆ) ಈ ನಿಲ್ದಾಣಗಳ ಪ್ರಾರಂಭದಿಂದಾಗಿ ಸರ್ಕಾರಕ್ಕೆ ಆದ ಆರ್ಥಿಕ ಲಾಭ ಮತ್ತು ಪ್ರಯಾಣಿಕರಿಗೆ ಆದ ಅನುಕೂಲತೆಗಳೇನು ; (ಸಂಪೂರ್ಣ ಮಾಹಿತಿ ಒದಗಿಸುವುದು)

(ಇ) ಈ ನಿಟ್ಟಿನಲ್ಲಿ, ಉತ್ತರ ಕರ್ನಾಟಕ ಭಾಗಕ್ಕೆ ಹೋಗುವ ಬಸ್‌ಗಳಿಗಾಗಿ ಪೀಣ್ಯದಲ್ಲಿ ನಿರ್ಮಿಸಲಾದ ಬಸವೇಶ್ವರ ಕೆ.ಎಸ್.ಆರ್.ಟಿ.ಸಿ. ಬಸ್ ನಿಲ್ದಾಣವನ್ನು ಪುನಃ ಮೆಜೆಸ್ಟಿಕ್ ನಿಲ್ದಾಣಕ್ಕೆ ಸ್ಥಳಾಂತರಿಸುತ್ತಿರುವುದು ನಿಜವೇ ; ಇದಕ್ಕೆ ಕಾರಣವೇನು ; ಇದರಿಂದ ಸಂಸ್ಥೆಗೆ ಉಂಟಾಗುವ ನಷ್ಟವೆಷ್ಟು ; ಬಸ್ ನಿಲ್ದಾಣದಲ್ಲಿ ಮಳಿಗೆಗಳು ಹಾಗೂ ಹೊಟೇಲ್ ಉದ್ಯಮದಾರರಿಗೆ ಆಗುವ ನಷ್ಟವನ್ನು ಸಂಸ್ಥೆಯು ಭರಿಸುವುದೇ ;

(ಈ) ಪೀಣ್ಯ ನಿಲ್ದಾಣದ ವಿಸ್ತೀರ್ಣ ಎಷ್ಟು ; ಎಷ್ಟು ಸಂಖ್ಯೆಯ ಬಸ್ಸುಗಳ ನಿಲ್ದಾಣಕ್ಕೆ ವ್ಯವಸ್ಥೆ ಕಲ್ಪಿಸಲಾಗಿತ್ತು ; ಸದರಿ ನಿಲ್ದಾಣವನ್ನು ಸ್ಥಳಾಂತರಿಸಿದ ಮೇಲೆ ಪೀಣ್ಯಾ ನಿಲ್ದಾಣವನ್ನು ಯಾವ ರೀತಿಯಲ್ಲಿ ಉಪಯೋಗಿಸಿಕೊಳ್ಳಲಾಗುವುದು ;

(ಉ) ಪೀಣ್ಯ ಬಸ್ ನಿಲ್ದಾಣವನ್ನು ಪುನಃ ಮೆಜೆಸ್ಟಿಕ್ ಬಸ್ ನಿಲ್ದಾಣಕ್ಕೆ ಸ್ಥಳಾಂತರಿಸುತ್ತಿರುವುದರ ಹಿಂದೆ ಮೆಜೆಸ್ಟಿಕ್‌ನ ಖಾಸಗಿ ಬಸ್ ಮಾಲೀಕರ ಕೈವಾಡವಿದೆಯೇ ; ಇದ್ದಲ್ಲಿ, ಸಂಬಂಧಪಟ್ಟವರ ಮೇಲೆ ಕಾನೂನು ಕ್ರಮ ತೆಗೆದುಕೊಳ್ಳಲಾಗುವುದೇ ;

(ಊ) ಪದೇ ಪದೇ ಬಸ್ ನಿಲ್ದಾಣಗಳನ್ನು ಸ್ಥಳಾಂತರಿಸುವುದು ಹಾಗೂ ಸ್ಥಳಾಂತರಿಸಿದ ನಿಲ್ದಾಣಗಳನ್ನು ರದ್ದುಪಡಿಸುವುದರಿಂದ ಸಾರ್ವಜನಿಕರಿಗೆ ಆಗುವ ಅನಾನುಕೂಲತೆಗಳ ಬಗ್ಗೆ ಸರ್ಕಾರ ಗಂಭೀರವಾಗಿ ಪರಿಗಣಿಸಿದೆಯೇ ?

## ಮಂಡ್ಯ ನಗರದಲ್ಲಿ ಡಾ॥ ಬಿ.ಆರ್. ಅಂಬೇಡ್ಕರ್ ಭವನ ನಿರ್ಮಾಣ

**ಶ್ರೀ ಬಿ. ರಾಮಕೃಷ್ಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೧೩೬ (೧೩೦೪) ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮಂಡ್ಯ ನಗರದಲ್ಲಿ ನಿರ್ಮಾಣ ಹಂತದಲ್ಲಿರುವ ಡಾ॥ ಬಿ.ಆರ್. ಅಂಬೇಡ್ಕರ್ ಭವನ ನಿರ್ಮಾಣಕ್ಕೆ ಸರ್ಕಾರ ನಿಗದಿಪಡಿಸಿರುವ, ಬಿಡುಗಡೆಯಾಗಿರುವ ಮತ್ತು ವೆಚ್ಚ ಮಾಡಲಾಗಿರುವ ಹಣವೆಷ್ಟು ; (ವಿವರ ನೀಡುವುದು)

(ಆ) ಈ ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಗಿದೆ ಹಾಗೂ ಇದಕ್ಕೆ ಕಾಲಮಿತಿಯನ್ನೇನಾದರೂ ನೀಡಲಾಗಿದೆಯೇ ; ಇದುವರೆಗೂ ಕಾಮಗಾರಿಯನ್ನು ಪೂರ್ಣಗೊಳಿಸದಿರಲು ಕಾರಣಗಳೇನು ;

(ಇ) ಯಾವ ಸಂಸ್ಥೆಗೆ ಈ ನಿರ್ಮಾಣ ಕಾಮಗಾರಿಯನ್ನು ಎಷ್ಟು ವರ್ಷಗಳ ಗುತ್ತಿಗೆಗೆ ವಹಿಸಲಾಗಿದೆ ?

## ವಸತಿ ನಿಲಯಗಳಲ್ಲಿ ಅಡುಗೆ ಕೆಲಸ ನಿರ್ವಹಿಸುತ್ತಿರುವವರಿಗೆ ಮುಂಬಡ್ತಿ ನೀಡುವ ಬಗ್ಗೆ

**ಶ್ರೀ ಬಿ. ರಾಮಕೃಷ್ಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೧೧೩೭ (೧೩೦೩) ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ರಾಜ್ಯದ ಸಮಾಜ ಕಲ್ಯಾಣ ಇಲಾಖೆಯ ವಸತಿ ನಿಲಯಗಳಲ್ಲಿ ಅಡುಗೆ ಕೆಲಸ ನಿರ್ವಹಿಸುತ್ತಿರುವವರ ಸಂಖ್ಯೆಯೆಷ್ಟು ; (ಜಿಲ್ಲಾವಾರು ವಸತಿ ನಿಲಯವಾರು ಮಾಹಿತಿ ನೀಡುವುದು)

(ಆ) ಇವರಿಗೆ ಕಳೆದ ೨೫ ವರ್ಷಗಳಿಂದ ಮುಂಬಡ್ತಿ ನೀಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಬಂದಿದ್ದಲ್ಲಿ, ಇವರಿಗೆ ಮುಂಬಡ್ತಿ ನೀಡಲು ಸರ್ಕಾರಕ್ಕಿರುವ ತೊಂದರೆಗಳೇನು ? (ಪೂರ್ಣ ಮಾಹಿತಿಯನ್ನು ನೀಡುವುದು)

## ರಾಜ್ಯ ಸಾರಿಗೆ ಸಂಸ್ಥೆಯಲ್ಲಿ ಮಹಿಳೆಯರಿಗೆ ಕಿರುಕುಳ

**ಶ್ರೀಮತಿ ತಾರಾಅನುರಾಧ (ನಾಮನಿರ್ದೇಶನ) :–**

೧೧೩೮ (೧೩೦೯) ಮಾನ್ಯ ಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿರುವ ರಾಜ್ಯ ಸಾರಿಗೆ ಸಂಸ್ಥೆಗಳಲ್ಲಿ ಎಷ್ಟು ಮಹಿಳಾ ನಿರ್ವಾಹಕಿಯರಿದ್ದಾರೆ ; (ನಿಗಮವಾರು ವಿವರ ನೀಡುವುದು)

(ಆ) ಇವರ ರಕ್ಷಣೆ ಮತ್ತು ಸುರಕ್ಷತೆಗಳಲ್ಲಿ ಸಾರಿಗೆ ಸಂಸ್ಥೆಗಳು ಕೈಗೊಂಡಿರುವ ಕ್ರಮಗಳೇನು ;

(ಇ) ಕೌಟುಂಬಿಕ ಕಾರಣಗಳಿಗೆ ನಿರ್ವಾಹಕಿಯರು ರಜೆ ಕೇಳಿದಾಗ, ಮಂಜೂರಾತಿ ನಿರಾಕರಿಸುವುದು ; ತಡರಾತ್ರಿ ಮನೆ ತಲುಪಲು ಸಾರಿಗೆ ಸೌಕರ್ಯ ವ್ಯವಸ್ಥೆ ಕಲ್ಪಿಸದಿರುವುದು ಬಸ್ ನಿಲ್ದಾಣಗಳಲ್ಲಿ ಮಹಿಳೆಯರ ಶೌಚಾಲಯಗಳಿಲ್ಲದಿರುವುದು ; ಬಸ್‌ಗಳಲ್ಲಿ ಮಹಿಳಾ ನಿರ್ವಾಹಕಿಯರ ಮೇಲೆ ಕಾಮುಕರ ಕಿರುಕುಳ ಹೆಚ್ಚುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಮಾರ್ಗ ನಿಯೋಜನೆ, ಡ್ಯೂಟಿ ನೀಡುವಿಕೆ ಮತ್ತು ರಜೆ ಪಡೆಯಲು ನೌಕರರು ನೀಡಬೇಕಾದುದು ಎಂದು ; ಬಿ.ಎಂ.ಟಿ.ಸಿ. ನೌಕರರು ದೂರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಉ) ಬಂದಿದ್ದಲ್ಲಿ, ಮೇಲಿನ ವಿಷಯಗಳಲ್ಲಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

## ಮಹಿಳೆ ಮತ್ತು ಮಕ್ಕಳಿಂದ ಭಿಕ್ಷಾಟನೆ

**ಶ್ರೀಮತಿ ತಾರಾಅನುರಾಧ (ನಾಮನಿರ್ದೇಶನ) :–**

೧೧೩೯ (೧೩೦೮) ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಮಹಿಳೆಯರು, ಮಕ್ಕಳು ಮತ್ತು ಮಂಗಳಮುಖಿಯರು ಹೆಚ್ಚಿನ ಪ್ರಮಾಣದಲ್ಲಿ ಭಿಕ್ಷಾಟನೆಯಲ್ಲಿ ತೊಡಗಿರುವುದನ್ನು ತಡೆಯಲು ವಿಫಲವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಭಿಕ್ಷಾಟನೆ ನಿಷೇಧ ಕಾಯಿದೆಯಡಿ ಭಿಕ್ಷಕರನ್ನು ಬಂಧಿಸಲು ಹಾಲಿ ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಗಳ ಬದಲಿಗೆ ಪೊಲೀಸ್ ಇಲಾಖೆಗೆ ಜವಾಬ್ದಾರಿಗಳನ್ನು ವಹಿಸುವ ಪ್ರಸ್ತಾವ ಸರ್ಕಾರದ ಮುಂದಿದೆಯೇ ; ಇದ್ದಲ್ಲಿ ಕೈಗೊಂಡಿರುವ ಕ್ರಮಗಳೇನು ;

(ಇ) ಭಿಕ್ಷಾಟನೆಯಲ್ಲಿ ತೊಡಗಿರುವ ಮಹಿಳೆಯರು ಮತ್ತು ಮಕ್ಕಳ ರಕ್ಷಣೆಗಾಗಿ ಸರ್ಕಾರ ಕೈಗೊಂಡಿರುವ ಕಠಿಣ ಕ್ರಮಗಳು ಯಾವುವು ; (ವಿವರ ನೀಡುವುದು)

## ದಲಿತ ಪತ್ರಕರ್ತರಿಗೆ ಕ್ಯಾಮರಾ ಲ್ಯಾಪ್‌ಟಾಪ್ ಬಗ್ಗೆ

**ಶ್ರೀ ಬಸವರಾಜ ಹೊರಟ್ಟಿ (ಶಿಕ್ಷಕರ ಕ್ಷೇತ್ರ) :–**

೧೧೪೦ (೧೫೩೫) ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಪತ್ರಕರ್ತರಿಗೆ ಎಸ್.ಸಿ.ಪಿ. ಮತ್ತು ಎಸ್.ಟಿ.ಪಿ. ಅಡಿ ಹೆಚ್ಚಿನ ಸಬ್ಸಿಡಿ ದರದಲ್ಲಿ ಆರ್ಥಿಕ

ಸಹಾಯ ನೀಡಲಾಗುವುದೆಂಬುದು ನಿಜವೇ ; ನಿಜವಾದಲ್ಲಿ, ಈಗ ಯಾವ ಹಂತದಲ್ಲಿ ಇದೆ ; ಇದು ಯಾವಾಗಿನಿಂದ ಜಾರಿಗೆ ಬಂದಿದೆ ; ಎಷ್ಟು ಜನರಿಗೆ ಈ ಸೌಲಭ್ಯ ದೊರೆತಿದೆ ;

(ಆ) ಅದರಂತೆ ಬಡ ಪತ್ರಕರ್ತರಿಗೆ ಆರ್ಥಿಕ ಸಹಾಯ ಮಾಡಲು ಸರ್ಕಾರ ಚಿಂತಿಸುವುದೇ ;

(ಇ) ಅತೀ ಮೇಲ್ವರ್ಗದವರಾಗಿದ್ದು, ಬಡವರಾದವರಿಗೆ ಸರ್ಕಾರದಿಂದ ಯಾವ ರೀತಿ ಸಹಾಯ ಮಾಡಲಾಗುವುದು ?

## ಹುಬ್ಬಳ್ಳಿಯ ಕಿಮ್ಸ್ ಆಸ್ಪತ್ರೆಯಲ್ಲಿ ಅಧಿಕ ಪ್ರಮಾಣದಲ್ಲಿ ಮರಣ ಹೊಂದುತ್ತಿರುವ ನವಜಾತ ಶಿಶುಗಳ ಪ್ರಕರಣ

**ಶ್ರೀ ಬಸವರಾಜ ಹೊರಟ್ಟಿ (ಶಿಕ್ಷಕರ ಕ್ಷೇತ್ರ) :-**

೧೧೪೧ (೧೩೧೦) ಮಾನ್ಯ ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಉತ್ತರ ಕರ್ನಾಟಕದ ಪ್ರತಿಷ್ಠಿತ ಆಸ್ಪತ್ರೆಗಳಲ್ಲಿ ಒಂದಾದ ಹುಬ್ಬಳ್ಳಿಯ ಕರ್ನಾಟಕ ವೈದ್ಯಕೀಯ ವಿಜ್ಞಾನ ಸಂಸ್ಥೆ (ಕಿಮ್ಸ್)ಯಲ್ಲಿ ಜನಿಸುತ್ತಿರುವ ನವಜಾತ ಶಿಶುಗಳ ಸಂಖ್ಯೆ ಎಷ್ಟು ; ಆ ಪೈಕಿ ಜನನ ಸಂದರ್ಭದಲ್ಲಿ ಮರಣ ಹೊಂದಿದ ಶಿಶುಗಳ ಸಂಖ್ಯೆ ಎಷ್ಟು ; ಮರಣ ಹೊಂದಲು ಕಾರಣವೇನು ; (ಐದು ವರ್ಷಗಳ ವಾರ್ಷಿಕವಾರು ಸಂಖ್ಯಾ ವಿವರ ನೀಡುವುದು)

(ಆ) ಅಧಿಕ ಪ್ರಮಾಣದಲ್ಲಿ ನವಜಾತ ಶಿಶುಗಳು ಮರಣ ಹೊಂದುತ್ತಿರುವುದನ್ನು ತಡೆಗಟ್ಟಲು ಕೈಗೊಂಡಿರುವ ಕ್ರಮಗಳಾವುವು ;

(ಇ) ವೈದ್ಯರ ನಿರ್ಲಕ್ಷತನದಿಂದ ನವಜಾತ ಶಿಶುಗಳು ಮರಣ ಹೊಂದಿದೆ ಎಂದು ಸಾರ್ವಜನಿಕರು ಆರೋಪಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ ಅಂತಹ ಪ್ರಕರಣಗಳಲ್ಲಿ ಸಂಬಂಧಪಟ್ಟ ವೈದ್ಯರ ವಿರುದ್ಧ ಯಾವ ರೀತಿಯ ಶಿಸ್ತು ಕ್ರಮಗಳನ್ನು ಕೈಗೊಳ್ಳಲಾಗಿದೆ ? (ಪ್ರಕರಣವಾರು ವಿವರ ನೀಡುವುದು)

## ಮಾಹಿತಿ ತಂತ್ರಜ್ಞಾನ ಕಂಪನಿಗಳಲ್ಲಿ ಕನ್ನಡಿಗರನ್ನು ಕಡ್ಡಾಯವಾಗಿ ನೇಮಿಸಿಕೊಳ್ಳುವ ಬಗ್ಗೆ

**ಶ್ರೀ ಬಸವರಾಜ ಹೊರಟ್ಟಿ (ಶಿಕ್ಷಕರ ಕ್ಷೇತ್ರ) :-**

೧೧೪೨ (೧೫೩೪) ಮಾನ್ಯ ಯೋಜನೆ ಮತ್ತು ಸಾಂಖ್ಯಿಕ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದ ಮಾಹಿತಿ ತಂತ್ರಜ್ಞಾನ ಕಂಪನಿಗಳ ಸ್ಥಾಪನೆಗೆ ಸರ್ಕಾರ ಗುರುತಿಸಿದ ಎರಡನೇ ಹಂತದ ನಗರಗಳು ಯಾವುವು ;

(ಆ) ಈ ನಗರಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಮಾಹಿತಿ ತಂತ್ರಜ್ಞಾನ ಕಂಪನಿಗಳ ಸಂಖ್ಯೆ ಎಷ್ಟು ; (ನಗರವಾರು ಮಾಹಿತಿ ನೀಡುವುದು)

(ಇ) ಈ ಕಂಪನಿಗಳಲ್ಲಿ ಕೆಲಸ ಮಾಡುತ್ತಿರುವ ಮಾಹಿತಿ ತಂತ್ರಜ್ಞಾನರ ಸಂಖ್ಯೆ ಎಷ್ಟು ;

(ಈ) ಆ ಪೈಕಿ ಕನ್ನಡಿಗರ ಸಂಖ್ಯೆ ಎಷ್ಟು ?

## ಶಿಥಿಲಾವಸ್ಥೆಯಲ್ಲಿರುವ ಆಸ್ಪತ್ರೆ

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ) :-**

೧೧೪೩ (೧೩೩೫) ಮಾನ್ಯ ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬೆಂಗಳೂರು ನಗರದಲ್ಲಿ ಸಾಂಕ್ರಾಮಿಕ ರೋಗಗಳ ಆಸ್ಪತ್ರೆ ಶಿಥಿಲಾವಸ್ಥೆಯ ಕಟ್ಟಡದಲ್ಲಿರುವುದು ನಿಜವೇ ;

(ಆ) ಸದರಿ ಆಸ್ಪತ್ರೆಗಾಗಿ ನಮ್ಮ ಮೆಟ್ರೋದವರು ನೂತನ ಕಟ್ಟಡವನ್ನು ಎಲ್ಲಿ, ಯಾವಾಗ ನಿರ್ಮಿಸಿರುತ್ತಾರೆ ;

(ಇ) ಸದರಿ ಆಸ್ಪತ್ರೆಯನ್ನು ಹೊಸ ಕಟ್ಟಡಕ್ಕೆ ಸ್ಥಳಾಂತರಿಸದಿರಲು ಕಾರಣವೇನು ;

(ಈ) ನಮ್ಮ ಮೆಟ್ರೋದವರು ಹೊಸ ಕಟ್ಟಡಕ್ಕಾಗಿ ನೀಡಿರುವ ಹಣವು ಸಂಪೂರ್ಣ ಬಳಕೆಯಾಗದೆ ಉಳಿಕೆಯಾಗಿರುವುದು ನಿಜವೇ ; ಹಾಗಿದ್ದಲ್ಲಿ, ಇದಕ್ಕೆ ಕಾರಣವೇನು ?

## ಡೀಸೆಲ್ ಖರೀದಿಯಲ್ಲಿ ಅವ್ಯವಹಾರ

**ಶ್ರೀ ರಾಮಚಂದ್ರಗೌಡ (ಪದವೀಧರ ಕ್ಷೇತ್ರ) :-**

೧೧೪೪ (೧೩೩೭) ಮಾನ್ಯ ಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬಿ.ಎಂ.ಟಿ.ಸಿ. ಬಸ್ಸುಗಳಿಗೆ ಡೀಸೆಲ್ ಖರೀದಿಯಲ್ಲಿ ಅವ್ಯವಹಾರ ನಡೆದಿರುವುದು ನಿಜವೇ ;

(ಆ) ನಿಜವಾಗಿದ್ದಲ್ಲಿ, ಇದು ಯಾವ ರೀತಿ ನಡೆದಿದೆ, ಪೂರ್ಣ ವಿವರ ನೀಡುವುದು ;

(ಇ) ಕೆ.ಎಸ್.ಆರ್.ಟಿ.ಸಿ. ಯೂ ಸೇರಿದಂತೆ ಈ ಸಂಬಂಧ ಹೆಚ್ಚಿನ ತನಿಖೆ ನಡೆಸಲಾಗಿದೆಯೇ ; (ವಿವರ ನೀಡುವುದು)

(ಈ) ಅವ್ಯವಹಾರ ನಡೆದಿರುವ ಅಂದಾಜು ಮೊತ್ತ ಎಷ್ಟು ; ಈ ಸಂಬಂಧ ಯಾವ ರೀತಿಯ ಕಾನೂನು ಕ್ರಮ ಕೈಗೊಳ್ಳಲಾಗಿದೆ ;

(ಉ) ಮುಂದೆ ಈ ರೀತಿ ನಡೆಯುದಿರಲು ಯಾವ ರೀತಿಯ ಮುಂಜಾಗ್ರತಾ ಕ್ರಮ ಕೈಗೊಳ್ಳಲಾಗಿದೆ ?

## ಪಡಿತರ ವ್ಯವಸ್ಥೆ ಕುರಿತು

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ) :-**

೧೧೪೫ (೧೩೩೭) ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕಾರವಾರ-ಅಂಕೋಲಾ ಗಡಿಭಾಗದ ಬೆಟ್ಟದ ಮೇಲಿರುವ ಹಿರೇಮನೆ, ಮಲೆಗದ್ದೆ ಗ್ರಾಮಗಳ ಜನರಿಗೆ ಯಾವ ಯಾವ ಸ್ಥಳದ ಪಡಿತರ ಅಂಗಡಿಯಲ್ಲಿ ವಿತರಣೆ ಮಾಡಲಾಗುತ್ತಿದೆ ;

(ಆ) ಸದರಿ ಗ್ರಾಮಗಳ ಸರ್ಕಾರ ನೀಡುವ ಪಡಿತರ ಕೊಳ್ಳಲು ಸುಮಾರು ೩೫ ಕಿ.ಮೀ. ದೂರದ ಅಂಕೋಲಾ ತಾಲ್ಲೂಕಿನ ಹಟ್ಟಕೇರಿಗೆ

ತೆರಳಬೇಕಾಗಿರುವುದು ನಿಜವೇ ; ಪಡಿತರ ಕೊಳ್ಳಲು ಇನ್ನೂ ದೂರ ಹೋಗುವುದು ನಿಜವೇ ಜನರಿಗೆ ತೊಂದರೆಯಾಗುತ್ತದೆಂಬುದು ಅಧಿಕಾರಿಗಳಿಗೆ ಅರಿವಿಲ್ಲವೆ ;

(ಇ) ನಿಜವಾಗಿದ್ದಲ್ಲಿ, ಈ ಗ್ರಾಮಗಳಿಗೆ ಹತ್ತಿರದಲ್ಲಿರುವ ದೇವಳಮಕ್ಕಿ ಗ್ರಾಮ ಪಂಚಾಯ್ತಿಯಲ್ಲಿ ಪಡಿತರ ನೀಡುವ ವ್ಯವಸ್ಥೆ ಅಥವಾ ಹತ್ತಿರದಲ್ಲಿಯೇ ವ್ಯವಸ್ಥೆ ಕಲ್ಪಿಸಲು ಕೂಡಲೇ ಕೈಗೊಳ್ಳುವ ಕ್ರಮಗಳೇನು ?

## ಖಾಸಗಿ ಆಸ್ಪತ್ರೆಗಳಲ್ಲಿನ ದುಬಾರಿ ಶುಲ್ಕಗಳು

**ಡಾ॥ ಜಯಮಾಲ ರಾಮಚಂದ್ರ (ನಾಮನಿರ್ದೇಶನ) :-**

೧೧೪೬ (೧೩೩೯) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಖಾಸಗಿ ಆಸ್ಪತ್ರೆಗಳು/ವೈದ್ಯಕೀಯ ಸಂಸ್ಥೆಗಳು ವಿಧಿಸುವ ದುಬಾರಿ ಸೇವಾ ಶುಲ್ಕ ನಿಯಂತ್ರಿಸಿ ಕಡಿಮೆಗೊಳಿಸಲು, ೨೦೦೭ರ ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ ಕಾಯಿದೆಯಲ್ಲಿ, ಅವಕಾಶಗಳಿಲ್ಲದಿರುವುದನ್ನು ಸರ್ಕಾರ ಗಮನಿಸಿದೆಯೇ ;

(ಆ) ಶ್ರೀಸಾಮಾನ್ಯರ ಹಿತದೃಷ್ಟಿಯಿಂದ ಖಾಸಗಿ ಆಸ್ಪತ್ರೆಗಳು ವಿಧಿಸುವ ದರಗಳನ್ನು ನಿಯಂತ್ರಿಸಲು ಕಾನೂನಿಗೆ ಸೂಕ್ತ ತಿದ್ದುಪಡಿಗಳನ್ನಯ ತರಲು ಸರ್ಕಾರ ಕೈಗೊಳ್ಳುವ ಕ್ರಮಗಳೇನು ?

## ಅನ್ನಭಾಗ್ಯದ ಅಕ್ರಮಗಳು

**ಡಾ॥ ಜಯಮಾಲ ರಾಮಚಂದ್ರ** (ನಾಮನಿರ್ದೇಶನ) :-

೧೧೪೭ (೧೩೪೦) ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಆಹಾರ ಮತ್ತು ಪಡಿತರ ಸರಬರಾಜು ಇಲಾಖೆಯಲ್ಲಿನ ವಿಚಕ್ಷಣದಳ ಕಳೆದ ಮೂರು ವರ್ಷಗಳಲ್ಲಿ ಪತ್ತೆ ಮಾಡಿದ ಆಹಾರ ಪಡಿತರ ಆಕ್ರಮಗಳ ಸಂಖ್ಯೆ ಎಷ್ಟು ; ಸದರಿ ಅಕ್ರಮದಾರರ ವಿರುದ್ಧ ಕೈಗೊಂಡ ಕ್ರಮಗಳೇನು ; (ಜಿಲ್ಲಾವಾರು ವಿವರ ನೀಡುವುದು)

(ಆ) ಈ ವಿಚಕ್ಷಣಾದಳ ಪತ್ತೆ ಮಾಡದ ಅಕ್ರಮಗಳು ಮತ್ತು ಕಾಳಸಂತೆಗಳಲ್ಲಿ ಅನ್ನಭಾಗ್ಯದ ಅಕ್ಕಿ ಮಾರಾಟವಾದ ಎಷ್ಟು ಪ್ರಕರಣಗಳು ನೇರವಾಗಿ ಸರ್ಕಾರದ ಗಮನಕ್ಕೆ ಬಂದಿವೆ ; ಈ ಬಗ್ಗೆ ಕೈಗೊಂಡ ಕ್ರಮಗಳೇನು ? (ಜಿಲ್ಲಾವಾರು ವಿವರ ನೀಡುವುದು)

## ಹಂದಿಜ್ವರ (H1-N1) ಸೋಂಕಿನಿಂದ ಮೃತ ಪಟ್ಟವರಿಗೆ ಪರಿಹಾರ

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು)** :-

೧೧೪೮ (೧೩೬೩) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಇತ್ತೀಚೆಗೆ ರಾಜ್ಯವನ್ನು ಕಾಡುತ್ತಿರುವ ಹಂದಿಜ್ವರ (H1-N1) ಸೋಂಕು ಶಂಕಿತರ ಹಾಗೂ ದೃಢಪಟ್ಟಿರುವ ರೋಗಿಗಳ ಸಂಖ್ಯೆ

ಎಷ್ಟು ; (ಜಿಲ್ಲಾವಾರು, ತಾಲ್ಲೂಕುವಾರು ಮಾಹಿತಿ ನೀಡುವುದು)

(ಆ) ಹಂದಿಜ್ವರ (H1-N1) ಸೋಂಕಿನಿಂದ ಮೃತ ಪಟ್ಟವರ ಸಂಖ್ಯೆ ಎಷ್ಟು ; (ಜಿಲ್ಲಾವಾರು, ತಾಲ್ಲೂಕುವಾರು ಮಾಹಿತಿ ನೀಡುವುದು)

(ಇ) ಹಂದಿಜ್ವರ (H1-N1) ಸೋಂಕಿನಿಂದ ಮೃತ ಪಟ್ಟವರಿಗೆ ಸರ್ಕಾರ ಯಾವ ರೀತಿಯ ಪರಿಹಾರ ನೀಡಿದೆ ; ನೀಡಿಲ್ಲವಾದಲ್ಲಿ ವಿಶೇಷ ಪ್ರಕರಣವೆಂದು ಪರಿಗಣಿಸಿ ಸೋಂಕಿನಿಂದ ಮೃತಪಟ್ಟವರಿಗೆ ಪರಿಹಾರ ನೀಡಲು ಸರ್ಕಾರಕ್ಕಿರುವ ತೊಂದರೆಗಳೇನು ?

## ಆಹಾರ ಸುರಕ್ಷತಾ ಮತ್ತು ಗುಣಮಟ್ಟ ವಿಭಾಗವನ್ನು ಸೇರ್ಪಡೆಗೊಳಿಸುವುದು

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೧೧೪೯ (೧೩೪೧) ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಆಹಾರ & ನಾಗರೀಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಇಲಾಖೆಗೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ಆಹಾರ ಸುರಕ್ಷತಾ ಮತ್ತು ಗುಣಮಟ್ಟ ವಿಭಾಗವನ್ನು ಸೇರ್ಪಡೆಗೊಳಿಸುವುದರ ಸಂಬಂಧ, ಅಂತಿಮ ಆದೇಶವನ್ನು ಯಾವಾಗ ಹೊರಡಿಸಲಾಗುವುದು, ಪ್ರಸ್ತುತ ಇದು ಯಾವ ಹಂತದಲ್ಲಿದೆ ; (ವಿವರ ಒದಗಿಸುವುದು)

(ಆ) ಈ ಬಗ್ಗೆ ಆರೋಗ್ಯ ಇಲಾಖೆಯಿಂದ ಯಾವಾಗ ಪ್ರಸ್ತಾವನೆ ಬಂದಿರುತ್ತದೆ ?

## ಆರೋಗ್ಯ ಇಲಾಖೆಯಲ್ಲಿನ ಆಹಾರ ಸುರಕ್ಷತಾ ಕಾಯ್ದೆಯ ಅನುಷ್ಠಾನ

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೧೧೫೦ (೧೩೪೨) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಆರೋಗ್ಯ ಇಲಾಖೆಯಲ್ಲಿನ ಆಹಾರ ಸುರಕ್ಷತಾ ಕಾಯ್ದೆಯಡಿಯಲ್ಲಿ ಖಾಲಿಯಿರುವ ಅಂಕಿತ ಅಧಿಕಾರಿಗಳು ಹಾಗೂ ಆಹಾರ ಸುರಕ್ಷತಾ ಅಧಿಕಾರಿಗಳ ಹುದ್ದೆಗಳ ಸಂಖ್ಯೆ ಎಷ್ಟು ; ಯಾವಾಗಿನಿಂದ ಖಾಲಿ ಇದೆ ; (ವಿವರ ಒದಗಿಸುವುದು) ಇವುಗಳನ್ನು ಭರ್ತಿ ಮಾಡಲಾಗುವುದು ಯಾವಾಗ ;

(ಆ) ಹಾಲಿ ಪ್ರಭಾರದ ಮೇಲೆ ಅಂಕಿತಾಧಿಕಾರಿಗಳಾಗಿ ಕರ್ತವ್ಯ ನಿರ್ವಹಿಸುತ್ತಿರುವ ಆಹಾರ ಸುರಕ್ಷತಾ ಅಧಿಕಾರಿಗಳನ್ನೇ ಖಾಯಂ ಅಂಕಿತಾಧಿಕಾರಿಗಳನ್ನಾಗಿ ನೇಮಕ ಮಾಡಲಾಗುವುದೇ ; ಅಥವಾ ಬೇರೆ ಯಾರನ್ನೂ ಅಂಕಿತಾಧಿಕಾರಿಗಳನ್ನಾಗಿ ನೇಮಕ ಮಾಡಲಾಗುವುದು ; ನೇಮಕಾತಿ ವಿಧಿ-ವಿಧಾನಗಳೇನು ; (ವಿವರ ಒದಗಿಸುವುದು)

(ಇ) ಆರೋಗ್ಯ ಇಲಾಖೆಯಿಂದ ಆಹಾರ ಸುರಕ್ಷತಾ ವಿಭಾಗವನ್ನು

ಆಹಾರ & ನಾಗರೀಕ ಸರಬರಾಜು ಇಲಾಖೆಗೆ ಹಸ್ತಾಂತರಿಸುವ ಸಂಬಂಧ, ಅಂತಿಮ ಆದೇಶವನ್ನು ಹೊರಡಿಸಲಾಗುವುದು ಯಾವಾಗ ; ಪ್ರಸ್ತುತ ಇದು ಯಾವ ಹಂತದಲ್ಲಿದೆ ; (ವಿವರ ಒದಗಿಸುವುದು)

(ಈ) ರಾಜ್ಯದ ವಿವಿಧ ಆಹಾರ ಪ್ರಯೋಗಾಲಯಗಳಲ್ಲಿ ಕಳೆದ ಮೂರು ವರ್ಷಗಳಿಂದ ಕಲಬೆರಕೆ ಎಂದು ಕಂಡು ಬಂದಿರುವ ಪ್ರಕರಣಗಳೆಷ್ಟು ; ಪ್ರಯೋಗಾಲಯವಾರು, ಆಹಾರ ಸುರಕ್ಷತಾ ಅಧಿಕಾರಿವಾರು ಹಾಗೂ ಮಾಸಿಕವಾರು ವಿವರ ನೀಡುವುದು, ಇವುಗಳ ಪೈಕಿ ಘನ ನ್ಯಾಯಾಲಯಗಳಲ್ಲಿ ಕೇಸು ದಾಖಲಿಸಲು ಬಾಕಿ ಇರುವ ಪ್ರಕರಣಗಳೆಷ್ಟು ; ಈ ಬಗ್ಗೆ ಸರ್ಕಾರ ಯಾವ ಕ್ರಮಕೈಗೊಳ್ಳುವುದು ; (ವಿವರ ಒದಗಿಸುವುದು)

(ಉ) ಕಳೆದ ಮೂರು ವರ್ಷಗಳ "ಸ್ಯಾಂಪಲ್" ವಿವರವನ್ನು ಆಹಾರ ಸುರಕ್ಷತಾಧಿಕಾರಿವಾರು, ಮಾಸಿಕವಾರು ನೀಡುವುದು ?

## ಧಾರವಾಡದಲ್ಲಿ ತಾಂತ್ರಿಕ ಕೌಶಲ್ಯ ಅಭಿವೃದ್ಧಿ ಕೇಂದ್ರ ಸ್ಥಾಪಿಸುವ ಬಗ್ಗೆ

**ಡಾ॥ ಮತ್ತಿಕಟ್ಟಿ ವೀರಣ್ಣ (ವಿಧಾನಸಭೆಯಿಂದ ಚುನಾಯಿತರಾದವರು) :-**

೧೧೫೧ (೧೩೪೭) ಮಾನ್ಯ ಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಧಾರವಾಡ ಜಿಲ್ಲೆಯಲ್ಲಿನ ಎಷ್ಟು ಜನ ಪರಿಶಿಷ್ಟರಿಗೆ ವಾಹನ ಚಾಲನಾ ತರಬೇತಿ ನೀಡಲಾಗಿದೆ ;

(ಆ) ಧಾರವಾಡದಲ್ಲಿ ಭಾರಿ ವಾಹನ ಚಾಲನಾ ತರಬೇತಿ ಕೇಂದ್ರ ಸ್ಥಾಪಿಸಲಾಗುವುದೇ ;

(ಇ) ವಾಣಿಜ್ಯ ಕೇಂದ್ರ ಹುಬ್ಬಳ್ಳಿಯ ಬಳಿ ಟ್ರಕ್ ಟರ್ಮಿನಲ್ ಸ್ಥಾಪಿಸಲಾಗುವುದೇ ;

(ಈ) ಅದರಂತೆ, ಧಾರವಾಡದಲ್ಲಿ ತಾಂತ್ರಿಕ ಕೌಶಲ್ಯ ಅಭಿವೃದ್ಧಿ ಕೇಂದ್ರವನ್ನು ಸ್ಥಾಪಿಸಲಾಗುವುದೇ ?

## ಹುಬ್ಬಳ್ಳಿಯಲ್ಲಿ ಕರ್ನಾಟಕ ಮಧುಮೇಹ ಸಂಸ್ಥೆ ಸ್ಥಾಪಿಸುವ ಬಗ್ಗೆ

**ಡಾ॥ ಮತ್ತಿಕಟ್ಟೆ ವೀರಣ್ಣ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೧೫೨ (೧೩೪೭) ಮಾನ್ಯ ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಹುಬ್ಬಳ್ಳಿಯಲ್ಲಿ ಕರ್ನಾಟಕ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ (ಕಿಮ್ಸ್) ಮಧುಮೇಹಿ ರೋಗಿಗಳ ಅನುಕೂಲಕ್ಕಾಗಿ ಬೆಂಗಳೂರಿನಲ್ಲಿರುವಂತೆ "ಕರ್ನಾಟಕ ಮಧುಮೇಹ ಸಂಸ್ಥೆ" ಸ್ಥಾಪಿಸಲಾಗುವುದೇ ;

(ಆ) ಗದಗ್‌ನಲ್ಲಿ ಸರ್ಕಾರಿ ವೈದ್ಯಕೀಯ ಮಹಾವಿದ್ಯಾಲಯವನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆಯೇ ;

(ಇ) ಹಾಗಿದ್ದಲ್ಲಿ, ಸದರಿ ಕಾಮಗಾರಿಗಳು ಪ್ರಸ್ತುತ ಯಾವ ಹಂತದಲ್ಲಿದೆ ;

(ಈ) ಸದರಿ ವೈದ್ಯಕೀಯ ಮಹಾವಿದ್ಯಾಲಯವನ್ನು ಯಾವ ಶೈಕ್ಷಣಿಕ ವರ್ಷದಿಂದ ಪ್ರಾರಂಭಿಸಲಾಗುವುದು ;

(ಉ) ಹುಬ್ಬಳ್ಳಿ–ಧಾರವಾಡದಲ್ಲಿ ಅಪಘಾತ ತುರ್ತು ಚಿಕಿತ್ಸಾ ಕೇಂದ್ರವನ್ನು ಸ್ಥಾಪಿಸಲಾಗುವುದೇ ?

## ಆದಿವಾಸಿಗಳ ಪಾರಂಪರಿಕ ಔಷಧಿ ಪದ್ಧತಿ ಉಳಿಸಿ–ಬೆಳೆಸುವ ಬಗ್ಗೆ

**ಡಾ॥ ಮತ್ತಿಕಟ್ಟಿ ವೀರಣ್ಣ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೧೫೩ (೧೩೫೦) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಆದಿವಾಸಿಗಳ ಪಾರಂಪರಿಕ ಔಷಧ ಪದ್ಧತಿಯನ್ನು ಉಳಿಸಿ–ಬೆಳೆಸುವ ಕುರಿತು ಸರ್ಕಾರವು ಕೈಗೊಳ್ಳುತ್ತಿರುವ ಕ್ರಮಗಳೇನು ;

(ಆ) ಹುಬ್ಬಳ್ಳಿ–ಧಾರವಾಡಗಳಲ್ಲಿ ಜನೆರಿಕ್ ಔಷಧ ಮಳಿಗೆಗಳನ್ನು ಸ್ಥಾಪಿಸಲಾಗಿದೆಯೇ ; ಹಾಗಿದ್ದಲ್ಲಿ, ವಿವರ ಒದಗಿಸುವುದು ;

(ಇ) ಹುಬ್ಬಳ್ಳಿ–ಧಾರವಾಡ ನಗರಗಳಲ್ಲಿನ ನಾಗರೀಕರ ಅನುಕೂಲಕ್ಕಾಗಿ ನೈಸರ್ಗಿಕ ಚಿಕಿತ್ಸಾಲಯ ಮತ್ತು ಯೋಗ ಕೇಂದ್ರಗಳನ್ನು ಪ್ರಾರಂಭಿಸಲಾಗುವುದೇ ; ಹಾಗಿದ್ದಲ್ಲಿ ಯಾವಾಗ ಪ್ರಾರಂಭಿಸಲಾಗುವುದು ?

## ಉತ್ತಮ ಆರೋಗ್ಯ ಸೌಲಭ್ಯಗಳನ್ನು ಒದಗಿಸುವ ಬಗ್ಗೆ

**ಡಾ॥ ಮತ್ತಿಕಟ್ಟಿ ವೀರಣ್ಣ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೧೫೪ (೧೩೪೯) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿನ ಎಲ್ಲಾ ನಾಗರೀಕರಿಗೂ ಉತ್ತಮ ಆರೋಗ್ಯ ಸೌಲಭ್ಯಗಳನ್ನು ಒದಗಿಸಲು ಸರ್ಕಾರವು ಕೈಗೊಳ್ಳುತ್ತಿರುವ ಕ್ರಮಗಳೇನು ;

(ಆ) ಶಿಶು ಮತ್ತು ತಾಯಂದಿರುಗಳ ಮರಣ ಪ್ರಮಾಣ ಇಳಿಸಲು ಸರ್ಕಾರವು ಯಾವ ಯಾವ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳುತ್ತಿದೆ ;

(ಇ) ಬಡರೋಗಿಗಳಿಗೆ ಸಂಪೂರ್ಣವಾಗಿ ಉಚಿತ ಆಧುನಿಕ ಆರೋಗ್ಯ ಸೇವೆಗಳನ್ನು ಒದಗಿಸಲಾಗುವುದೇ ?

## ಧಾರವಾಡದಲ್ಲಿ ಮಾಹಿತಿ ತಂತ್ರಜ್ಞಾನ ಸಂಸ್ಥೆ ಸ್ಥಾಪಿಸುವುದು.

ಡಾ॥ ಮತ್ತಿಕಟ್ಟಿ ವೀರಣ್ಣ (ವಿಧಾನ ಸಭೆಯಿಂದ ಚುನಾಯಿತರಾದವರು) :-

೧೧೫೫ (೧೩೪೮) ಮಾನ್ಯ ಯೋಜನೆ ಮತ್ತು ಸಾಂಖ್ಯಿಕ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಮತ್ತು ವಿಜ್ಞಾನ ಹಾಗೂ ತಂತ್ರಜ್ಞಾನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಧಾರವಾಡದಲ್ಲಿ ಮಾಹಿತಿ ತಂತ್ರಜ್ಞಾನ ಸಂಸ್ಥೆ ಸ್ಥಾಪಿಸುವ ಪ್ರಸ್ತಾವನೆಯನ್ನು ಸರ್ಕಾರವು ಪರಿಗಣಿಸುತ್ತಿದೆಯೇ ;

(ಆ) ಹಾಗಿದ್ದಲ್ಲಿ, ಸದರಿ ಸಂಸ್ಥೆಯನ್ನು ಎಂದಿನಿಂದ ಪ್ರಾರಂಭಿಸಲಾಗುವುದು ;

(ಇ) ಈ ಸಂಸ್ಥೆಯು ನೀಡುವ ಸೇವೆಗಳಾವುವು ; (ವಿವರ ನೀಡುವುದು)

(ಈ) ಸದರಿ ಸಂಸ್ಥೆಯ ಸ್ಥಾಪನೆಯಿಂದಾಗಿ ಒಟ್ಟು ಎಷ್ಟು ಜನರಿಗೆ ಕೆಲಸ ಸಿಗಲಿದೆ ? (ವಿವರಗಳನ್ನು ಒದಗಿಸುವುದು)

## ಶಾಸಕರ ನಿಧಿ ಬಳಕೆ ಅನುಷ್ಠಾನದಲ್ಲಿ ವಿಳಂಬ.

ಶ್ರೀ ಬಿ.ಜೆ. ಪುಟ್ಟಸ್ವಾಮಿ (ವಿಧಾನ ಸಭೆಯಿಂದ ಚುನಾಯಿತರಾದವರು) :-

**೧೧೫೬** (೧೩೫೧) ಮಾನ್ಯ ಯೋಜನೆ ಮತ್ತು ಸಾಂಖ್ಯಿಕ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಮತ್ತು ವಿಜ್ಞಾನ ಹಾಗೂ ತಂತ್ರಜ್ಞಾನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಸರ್ಕಾರ ಶಾಸಕರಿಗೆ ನೀಡುತ್ತಿರುವ ವಾರ್ಷಿಕ ರೂ.೨.೦೦ ಕೋಟಿ ಅನುದಾನದ ಅನುಷ್ಠಾನದಲ್ಲಿ ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಶಾಸಕರಿಗೆ ಅನುದಾನ ನೀಡಿದ ದಿನಾಂಕ ಮತ್ತು ಅದನ್ನು ಅನುಷ್ಠಾನಗೊಳಿಸಿದ ೨೦೧೩-೧೪ ಮತ್ತು ೨೦೧೪-೧೫ ರ ಪೂರ್ಣ ವಿವರಗಳನ್ನು ಒದಗಿಸುವುದು ? (ಸಂಸ್ಥೆಗಳಿಗೆ ಹಣ ಮಂಜೂರಾತಿ ದಿನಾಂಕ, ಹಣ ವಿತರಿಸಿದ ದಿನಾಂಕಗಳನ್ನು ಒದಗಿಸುವುದು)

## ಸಮುದಾಯ ಭವನ ಮತ್ತು ವಿದ್ಯಾರ್ಥಿ ನಿಲಯದ ಕಟ್ಟಡಗಳಿಗೆ ವಿಶೇಷ ಅನುದಾನ ಮಂಜೂರು ಮಾಡುವ ಬಗ್ಗೆ.

ಶ್ರೀ ಬಿ.ಜೆ. ಪುಟ್ಟಸ್ವಾಮಿ (ವಿಧಾನ ಸಭೆಯಿಂದ ಚುನಾಯಿತರಾದವರು) :-

**೧೧೫೭** (೧೩೫೨) ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ೨೦೧೪-೧೫ರಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಸಮುದಾಯ ಭವನ ಮತ್ತು ವಿದ್ಯಾರ್ಥಿ ನಿಲಯ

ಕಟ್ಟಡಗಳಿಗೆ ವಿಶೇಷ ಅನುದಾನ ಮಂಜೂರು ಮಾಡಿರುವುದು ನಿಜವೇ ;

(ಆ) ಹಾಗಿದ್ದರೆ, ೨೦೧೫-೧೬ರಲ್ಲಿ ಮೀಸಲಿಟ್ಟ ಹಣದ ಮೊತ್ತವೆಷ್ಟು ;

(ಇ) ಅನುದಾನ ಅನುಷ್ಠಾನದಲ್ಲಿ ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಕಳೆದ ೩ ವರ್ಷಗಳಲ್ಲಿ ರಾಜ್ಯದ ಸಮುದಾಯ ಭವನ ಮತ್ತು ವಿದ್ಯಾರ್ಥಿನಿಲಯ ಕಟ್ಟಡಗಳ ನಿರ್ಮಾಣಕ್ಕೆ ಅನುದಾನ ಕೋರಿ ವಿವಿಧ ಸಮುದಾಯಗಳಿಂದ ಬಂದಿರುವ ಮನವಿಗಳ ಸಂಖ್ಯೆ ಎಷ್ಟು ; (ಜಿಲ್ಲಾವಾರು ವರ್ಷಾವಾರು ಮಾಹಿತಿ ನೀಡುವುದು)

(ಉ) ಅದರಲ್ಲಿ ಅನುಷ್ಠಾನಗೊಳಿಸಿದ ಸಂಖ್ಯೆ ಎಷ್ಟು ; ಬಾಕಿ ಇರುವ ಸಂಖ್ಯೆ ಎಷ್ಟು ? (ಸಮುದಾಯಗಳ ಹೆಸರು, ಮನವಿ ಸಲ್ಲಿಸಿದ ದಿನಾಂಕ, ಅನುದಾನ ಬಿಡುಗಡೆ ದಿನಾಂಕ ಮತ್ತು ಹಣ ಬಿಡುಗಡೆಯಾದ ದಿನಾಂಕಗಳ ವಿವರಗಳನ್ನು ಒದಗಿಸುವುದು)

## ಹಿಮೋಫಿಲಿಯಾ ರೋಗದ ಬಗ್ಗೆ.

**ಶ್ರೀ ಸೋಮಣ್ಣ ಮ. ಬೇವಿನಮರದ (ವಿಧಾನ ಸಭೆಯಿಂದ ಚುನಾಯಿತರಾದವರು) :-**

೧೧೫೮ (೧೩೫೩) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಹಿಮೋಫಿಲಿಯಾ ರೋಗದ ಗುಣಲಕ್ಷಣಗಳೇನು ; ರಾಜ್ಯದಲ್ಲಿ ಈ ರೋಗಕ್ಕೆ ತುತ್ತಾದವರ ಸಂಖ್ಯೆ ಎಷ್ಟು ;

(ಆ) ರಾಜ್ಯದ ಯಾವ ಯಾವ ಆಸ್ಪತ್ರೆಯಲ್ಲಿ ಈ ರೋಗಕ್ಕೆ ಚಿಕಿತ್ಸೆ ನೀಡುವ ಸೌಲಭ್ಯ ಕಲ್ಪಿಸಲಾಗಿದೆ ; ಈ ರೋಗಕ್ಕೆ ಅಗತ್ಯ ಇರುವ ಔಷಧಿಗಳನ್ನು ಪ್ರತಿ ಜಿಲ್ಲೆಯ ತಾಲ್ಲೂಕುಗಳಿಗೆ ಒದಗಿಸಲಾಗಿದೆಯೇ ;

(ಇ) ರಾಜ್ಯದ ಈ ರೋಗಕ್ಕೆ ಅಗತ್ಯವಿರುವ ಔಷಧಿಯು ಕೊರತೆಯುಂಟಾಗಿರುವುದು ನಿಜವೇ ;

(ಈ) ಹಾವೇರಿ ಜಿಲ್ಲೆಯಲ್ಲಿ ಹಿಮೊಫಿಲಿಯಾ ರೋಗಕ್ಕೆ ತುತ್ತಾಗಿ ಸಾವನ್ನಪ್ಪಿದ ರೋಗಿಗಳ ಸಂಖ್ಯೆ ಎಷ್ಟು ; ವಿವರ ಒದಗಿಸುವುದು ;

(ಉ) ಎಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿ ಈ ರೋಗಕ್ಕೆ ಉಚಿತ ಔಷಧಿ ವಿತರಿಸಲು ಹಾಗೂ ರೋಗದ ಬಗ್ಗೆ ಜನರಲ್ಲಿ ವ್ಯಾಪಕ ತಿಳುವಳಿಕೆ ಮೂಡಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

## ರಾಜ್ಯದಲ್ಲಿನ ಸರ್ಕಾರಿ ಬಾಲಕಿಯರ ವಸತಿ ಶಾಲೆಗಳು.

**ಶ್ರೀ ಸೋಮಣ್ಣ ಮ. ಬೇವಿನಮರದ (ವಿಧಾನ ಸಭೆಯಿಂದ ಚುನಾಯಿತರಾದವರು) :-**

೧೧೫೯ (೧೩೫೪) ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿರುವ ಸರ್ಕಾರಿ ಬಾಲಕಿಯರ ವಸತಿ ನಿಲಯಗಳ ಒಟ್ಟು ಸಂಖ್ಯೆ ಎಷ್ಟು ; (ವಿಳಾಸ ಸಹಿತ ಜಿಲ್ಲಾವಾರು ಮಾಹಿತಿ ಒದಗಿಸುವುದು)

(ಆ) ಸರ್ಕಾರಿ ಬಾಲಕಿಯರ ವಸತಿ ಶಾಲೆಗಳಲ್ಲಿ ಮಹಿಳಾ ವಾರ್ಡನ್‌ಗಳು ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಬಂದಿದ್ದರೆ, ರಾಜ್ಯದಲ್ಲಿ ಎಷ್ಟು ಬಾಲಕಿಯ ವಸತಿ ಶಾಲೆಗಳಲ್ಲಿ ಮಹಿಳಾ ವಾರ್ಡನ್‌ಗಳ ಹುದ್ದೆ ಖಾಲಿ ಇವೆ ; (ತಾಲ್ಲೂಕುವಾರು ವಸತಿ ಶಾಲಾವಾರು ಮಾಹಿತಿ ನೀಡುವುದು)

(ಈ) ಸದರಿ ಹುದ್ದೆಗಳಿಗೆ ನೇಮಕಾತಿ ಯಾವಾಗ ಮಾಡಲಾಗುವುದು ?

## ಮಹಿಳಾ ವಿದ್ಯಾರ್ಥಿ ನಿಲಯಗಳು.

**ಶ್ರೀ ಅಲ್ಲಮಪ್ರಭು ಪಾಟೀಲ್ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) :-**

೧೧೬೦ (೧೩೬೬) ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ನಡೆಯುತ್ತಿರುವ ಮಹಿಳಾ ವಿದ್ಯಾರ್ಥಿ ನಿಲಯಗಳ ಸಂಖ್ಯೆ ಎಷ್ಟು ; (ತಾಲ್ಲೂಕುವಾರು ಮಾಹಿತಿ ನೀಡುವುದು)

(ಆ) ಈ ಮಹಿಳಾ ವಿದ್ಯಾರ್ಥಿ ನಿಲಯಗಳಲ್ಲಿ ಮೂಲಭೂತ ಸೌಲಭ್ಯ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಎಷ್ಟು ಮಹಿಳಾ ವಿದ್ಯಾರ್ಥಿ ನಿಲಯಗಳು ಸ್ವಂತ ಕಟ್ಟಡಗಳನ್ನು ಹೊಂದಿದೆ ; ಬಾಡಿಗೆ ಕಟ್ಟಡಗಳಲ್ಲಿರುವ ವಿದ್ಯಾರ್ಥಿ ನಿಲಯಗಳ ಸಂಖ್ಯೆ ಎಷ್ಟು ?

## ಕಲಬುರಗಿ ಮತ್ತು ಯಾದಗಿರಿ ಜಿಲ್ಲಾ ಮತ್ತು ತಾಲ್ಲೂಕು ಆಸ್ಪತ್ರೆಗಳು.

**ಶ್ರೀ ಅಲ್ಲಮಪ್ರಭು ಪಾಟೀಲ್ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) :–**

೧೧೬೧ (೧೩೬೭) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಯ ತಾಲ್ಲೂಕು ಆಸ್ಪತ್ರೆಗಳನ್ನು ಮೇಲ್ದರ್ಜೆಗೇರಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ;

(ಆ) ಈ ತಾಲ್ಲೂಕು ಮತ್ತು ಜಿಲ್ಲಾ ಆಸ್ಪತ್ರೆಗಳಲ್ಲಿ ವೈದ್ಯರ ಕೊರತೆ ಮತ್ತು ಮೂಲಭೂತ ಸೌಲಭ್ಯವಿಲ್ಲದೆ ಆ ಭಾಗದ ಜನರು ಪರದಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಬಂದಿದ್ದಲ್ಲಿ, ಈ ಭಾಗದ ಹೆಚ್ಚು ಜನರು ಕ್ಯಾನ್ಸರ್ ರೋಗದಿಂದ ಬಳಲುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಇದಕ್ಕೆ ಕಾರಣವೇನು ?

## ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಸಾರಿಗೆ ಸೌಲಭ್ಯ.

**ಶ್ರೀ ಅಲ್ಲಮಪ್ರಭು ಪಾಟೀಲ್ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) :–**

೧೧೬೨ (೧೩೬೫) ಮಾನ್ಯ ಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಗ್ರಾಮೀಣ ಪ್ರದೇಶಗಳಿಗೆ ಸರ್ಕಾರಿ ಬಸ್ ಸೌಲಭ್ಯ ಒದಗಿಸುವಲ್ಲಿ ವಿಳಂಬವಾಗುತ್ತಿರುವುದಕ್ಕೆ ಕಾರಣಗಳೇನು ; ಇದಕ್ಕೆ ಪರಿಹಾರ ಕ್ರಮವೇನು ;

(ಆ) ಈ ಜಿಲ್ಲೆಯಲ್ಲಿ ಸಾರಿಗೆ ಸೌಲಭ್ಯದಿಂದ ಜನರು ವಂಚಿತರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಬಂದಿದ್ದಲ್ಲಿ, ಈ ಭಾಗದ ಜನರಿಗೆ ಸಾರಿಗೆ ಸೌಲಭ್ಯ ಒದಗಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ ?

**ತೀವ್ರ ನಿಗಾಘಟಕಗಳ ಸ್ಥಾಪನೆ.**

**ಶ್ರೀ ವೈ.ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ) :-**

೧೧೬೩ (೧೫೧೮) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬೆಂಗಳೂರು ನಗರದಲ್ಲಿರುವ ತೀವ್ರ ನಿಗಾ ಘಟಕ (ಐ.ಸಿ.ಯು) ಹೊಂದಿರುವ ಸರ್ಕಾರಿ ಆಸ್ಪತ್ರೆಗಳೆಷ್ಟು ; ಈ ತೀವ್ರ ನಿಗಾ ಘಟಕಗಳಲ್ಲಿರುವ ಹಾಸಿಗೆಗಳ ಸಂಖ್ಯೆ ಎಷ್ಟು ; (ಜಿಲ್ಲಾವಾರು, ತಾಲ್ಲೂಕುವಾರು ಮಾಹಿತಿ ನೀಡುವುದು)

(ಆ) ಈ ತೀವ್ರ ನಿಗಾ ಘಟಕಗಳು ರೋಗಿಗಳ ಅನುಪಾತಕ್ಕೆ ಅನುಗುಣವಾಗಿ ಇಲ್ಲದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಬಂದಿದ್ದಲ್ಲಿ ರೋಗಿಗಳ ಅನುಪಾತಕ್ಕನುಗುಣವಾಗಿ ತೀವ್ರ ನಿಗಾ ಘಟಕಗಳನ್ನು ಸ್ಥಾಪಿಸಲು ಇರುವ ತೊಂದರೆಗಳೇನು ?

## ಖಾಸಗಿ ಬಸ್ಸುಗಳ ಸಂಚಾರ.

**ಶ್ರೀ ವೈ.ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ) :-**

೧೧೬೪ (೧೫೧೯) ಮಾನ್ಯ ಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕರ್ನಾಟಕ ರಾಜ್ಯದಲ್ಲಿ ಪರವಾನಿಗೆ ಪಡೆದು ಸಂಚರಿಸುತ್ತಿರುವ ಖಾಸಗಿ ಬಸ್ಸುಗಳ ಸಂಖ್ಯೆ ಎಷ್ಟು, ಯಾವ-ಯಾವ ಮಾರ್ಗಗಳಲ್ಲಿ ಸಂಚರಿಸುತ್ತಿದೆ ; (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ಪರವಾನಿಗೆ ಇಲ್ಲದೆ ಸಂಚರಿಸುತ್ತಿರುವ ಖಾಸಗಿ ಬಸ್ಸುಗಳ ಸಂಖ್ಯೆ ಎಷ್ಟು ; ಅವು ಯಾವ-ಯಾವ ಮಾರ್ಗಗಳಲ್ಲಿ ಸಂಚರಿಸುತ್ತಿವೆ ; (ಜಿಲ್ಲಾವಾರು ಮಾಹಿತಿ ನೀಡುವುದು)

(ಇ) ಪರವಾನಿಗೆ ಇದ್ದರೂ ಮಾರ್ಗ ಬದಲಾಯಿಸಿ ಸಂಚರಿಸುತ್ತಿರುವ ಖಾಸಗಿ ಬಸ್ಸುಗಳ ಸಂಖ್ಯೆ ಎಷ್ಟು ; ಅವು ಯಾವುವು ;

(ಈ) ಮಾರ್ಗ ಬದಲಾವಣೆ ಮಾಡಿ ಸಂಚರಿಸುತ್ತಿರುವ ಖಾಸಗಿ ಬಸ್ಸುಗಳಿಂದ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಕ್ಕೆ ಎಷ್ಟು ನಷ್ಟವಾಗಿರುತ್ತದೆ ;

(ಉ) ಸಾರಿಗೆ ಇಲಾಖಾ ಅಧಿಕಾರಿಗಳು ಈ ಖಾಸಗಿ ಬಸ್ಸುಗಳ ಮಾಲೀಕರೊಂದಿಗೆ ಶಾಮೀಲಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಬಂದಿದ್ದರೆ, ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

## ನೆಫ್ರೋ ಯುರಾಲಾಜಿ ವಿಭಾಗಗಳ ಕುರಿತು.

**ಶ್ರೀ ವೈ.ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ) :-**

೧೧೬೫ (೧೫೨೦) ಮಾನ್ಯ ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿರುವ ಸರ್ಕಾರಿ ವೈದ್ಯಕೀಯ ಕಾಲೇಜುಗಳ ಆಸ್ಪತ್ರೆಗಳಲ್ಲಿ ಎಷ್ಟು ನೆಫ್ರೋ ಯುರಾಲಾಜಿ ವಿಭಾಗಗಳಿವೆ, ಈ ವಿಭಾಗಗಳಲ್ಲಿ ಕಲಿಯುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು ;

(ಆ) ಈ ಆಸ್ಪತ್ರೆಗಳಿಗೆ ಬರುವ ನೆಫ್ರೋ ಯುರಾಲಾಜಿ ಸಂಬಂಧಿತ ಖಾಯಿಲೆಗಳಿಂದ ಬಳಲುತ್ತಿರುವ ರೋಗಿಗಳ ಸಂಖ್ಯೆ ಎಷ್ಟು, ರೋಗಿಗಳ ಸಂಖ್ಯಾನುಗುಣವಾಗಿ ನೆಫ್ರೋ ಯುರಾಲಾಜಿ ಸೌಲಭ್ಯಗಳು ಇವೆಯೇ ?

## ರಾಜ್ಯ ಯೋಜನಾ ಆಯೋಗ ಕುರಿತು.

**ಶ್ರೀ ವೈ.ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ) :-**

೧೧೬೬ (೧೫೨೨) ಮಾನ್ಯ ಯೋಜನೆ ಮತ್ತು ಸಾಂಖ್ಯಿಕ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಮತ್ತು ವಿಜ್ಞಾನ ಹಾಗೂ ತಂತ್ರಜ್ಞಾನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕರ್ನಾಟಕ ರಾಜ್ಯದಲ್ಲಿ ಯೋಜನಾ ಆಯೋಗ ಅಸ್ತಿತ್ವದಲ್ಲಿದೆಯೇ ; ಇದ್ದಲ್ಲಿ ಅದರ ರೂಪುರೇಷಗಳೇನು ;

(ಆ) ಯೋಜನಾ ಆಯೋಗದ ಕರ್ತವ್ಯ ಹಾಗೂ ನಿರ್ದೇಶನಗಳೇನು ? (ಸಮಗ್ರ ಮಾಹಿತಿ ನೀಡುವುದು)

## ನೆಫ್ರೋ ಯುರಾಲಾಜಿ ವಿಭಾಗಗಳ ಕುರಿತು.

**ಶ್ರೀ ವೈ.ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ) :-**

೧೧೬೭ (೧೫೨೦) ಮಾನ್ಯ ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿರುವ ಸರ್ಕಾರಿ ವೈದ್ಯಕೀಯ ಕಾಲೇಜುಗಳ ಆಸ್ಪತ್ರೆಗಳಲ್ಲಿ ಎಷ್ಟು ನೆಫ್ರೋ ಯುರಾಲಾಜಿ ವಿಭಾಗಗಳಿವೆ, ಈ ವಿಭಾಗಗಳಲ್ಲಿ ಕಲಿಯುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು ;

(ಆ) ಈ ಆಸ್ಪತ್ರೆಗಳಿಗೆ ಬರುವ ನೆಫ್ರೋ ಯುರಾಲಾಜಿ ಸಂಬಂಧಿತ ಖಾಯಿಲೆಗಳಿಂದ ಬಳಲುತ್ತಿರುವ ರೋಗಿಗಳ ಸಂಖ್ಯೆ ಎಷ್ಟು, ರೋಗಿಗಳ ಸಂಖ್ಯಾನುಗುಣವಾಗಿ ನೆಫ್ರೋ ಯುರಾಲಾಜಿ ಸೌಲಭ್ಯಗಳು ಇವೆಯೇ ?

## ಸರಕಾರಿ ವಸತಿ ನಿಲಯಗಳಿಗೆ ಸ್ವಂತ ಕಟ್ಟಡ ನಿರ್ಮಿಸುವುದು.

**ಶ್ರೀ ಜಿ.ಎಸ್. ನ್ಯಾಮಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೧೧೬೮ (೧೪೦೩) ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ವಿಜಯಪುರ-ಬಾಗಲಕೋಟೆ ಅವಳಿ ಜಿಲ್ಲೆಗಳಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಮತ್ತು ಸಮಾಜ ಕಲ್ಯಾಣ ಇಲಾಖೆಯಿಂದ ನಡೆಸುತ್ತಿರುವ ವಿದ್ಯಾರ್ಥಿ ನಿಲಯಗಳು ಯಾವುವು ; ಇವುಗಳಲ್ಲಿ ಸ್ವಂತ ಕಟ್ಟಡ ಹೊಂದಿರುವ ವಸತಿ

ನಿಲಯಗಳು ಯಾವುವು ; ಮತ್ತು ಬಾಡಿಗೆ ಕಟ್ಟಡ ಹೊಂದಿರುವ ವಸತಿ ನಿಲಯಗಳು ಯಾವುವು ;

(ಆ) ಬಾಡಿಗೆ ಕಟ್ಟಡಗಳಲ್ಲಿ ನಡೆಯುತ್ತಿರುವ ವಸತಿ ನಿಲಯಗಳಿಗೆ ಸ್ವಂತ ಕಟ್ಟಡ ನಿರ್ಮಿಸಲು ಸರಕಾರ ಕೈಗೊಂಡಿರುವ ಕ್ರಮಗಳು ಯಾವುವು ?

## ಹೊಸ ವಸತಿ ನಿಲಯಗಳನ್ನು ಮಂಜೂರು ಮಾಡುವ ಬಗ್ಗೆ.

**ಶ್ರೀ ಜಿ.ಎಸ್. ನ್ಯಾಮಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೧೧೬೯ (೧೪೦೨) ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬಾಗಲಕೋಟೆ ಜಿಲ್ಲೆ, ಜಮಖಂಡಿ ನಗರದಲ್ಲಿ ಬಿ.ಸಿ.ಎಮ್ ಮತ್ತು ಸಮಾಜ ಕಲ್ಯಾಣ ಇಲಾಖೆಯ ಮೆಟ್ರಿಕ್ ನಂತರದ ಬಾಲಕರ ಮತ್ತು ಬಾಲಕಿಯರ ವಸತಿ ನಿಲಯದ ಪ್ರವೇಶಕ್ಕಾಗಿ ಈಗಿರುವ ವಸತಿ ನಿಲಯಗಳಿಂದ ಬೇಡಿಕೆಯನ್ನು ಪೂರೈಸಲು ಸಾಧ್ಯವಾಗುತ್ತಿಲ್ಲವಾದ್ದರಿಂದ, ಅಲ್ಲಿ ಹೊಸ ವಸತಿ ನಿಲಯ ಪ್ರಾರಂಭಿಸುವ ಅಥವಾ ಸಂಖ್ಯಾಬಲ ಹೆಚ್ಚಿಸುವ ಪ್ರಸ್ತಾವನೆ ಸರಕಾರದ ಮುಂದಿದೆಯೇ ;

(ಆ) ೨೦೧೪-೧೫ನೇ ಆರ್ಥಿಕ ವರ್ಷದಿಂದ ಬೇಡಿಕೆಗೆ ಅನುಗುಣವಾಗಿ ಹೊಸ ವಿದ್ಯಾರ್ಥಿ ವಸತಿ ನಿಲಯ ಪ್ರಾರಂಭಿಸದೆ ಸಂಖ್ಯಾಬಲ ಹೆಚ್ಚಿಸಲಾಗುವುದೇ ?

## ಬಸ್ ನಿಲ್ದಾಣ ಸ್ಥಾಪಿಸುವ ಕುರಿತು.

**ಶ್ರೀ ಜಿ.ಎಸ್. ನ್ಯಾಮಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೧೧೭೦ (೧೪೦೧) ಮಾನ್ಯ ಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ವಿಜಯಪುರ-ಬಾಗಲಕೋಟೆ ಅವಳಿ ಜಿಲ್ಲೆಗಳಲ್ಲಿ ಬಸ್ ನಿಲ್ದಾಣ ಸ್ಥಾಪಿಸುವ, ಮೇಲ್ದರ್ಜೆಗೇರಿಸುವ ಮತ್ತು ನವೀಕರಿಸುವ ಕಾಮಗಾರಿಗಳ ಪ್ರಗತಿ ಯಾವ ಹಂತದಲ್ಲಿದೆ ; (ವಿವರ ನೀಡುವುದು).

(ಆ) ವಿಜಯಪುರ-ಬಾಗಲಕೋಟೆ ಅವಳಿ ಜಿಲ್ಲೆಗಳಲ್ಲಿ ಹೊಸ ಬಸ್ ನಿಲ್ದಾಣ ಸ್ಥಾಪಿಸುವ, ಮೇಲ್ದರ್ಜೆಗೇರಿಸುವ ಮತ್ತು ನವೀಕರಿಸುವ ಕುರಿತಾದ ಹೊಸ ಪ್ರಸ್ತಾವನೆಗಳು ಸರಕಾರದ ಮುಂದಿದೆಯೇ ? (ಇದ್ದಲ್ಲಿ, ಕಾಮಗಾರಿ ಹೆಸರು ಮತ್ತು ಅಂದಾಜು ಮೊತ್ತದ ವಿವರ ನೀಡುವುದು).

## ಯೋಜನೆಗಳ ಆಯ್ಕೆ ಮತ್ತು ಅನುಷ್ಠಾನ ವಿಳಂಬವಾಗುತ್ತಿರುವ ಬಗ್ಗೆ.

**ಶ್ರೀ ಜಿ.ಎಸ್. ನ್ಯಾಮಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೧೧೭೧ (೧೪೦೪) ಮಾನ್ಯ ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ, ಡಾ:ಬಿ.ಆರ್.ಅಂಬೇಡ್ಕರ್ ಪರಿಶಿಷ್ಟ ಜಾತಿಗಳ ಅಭಿವೃದ್ಧಿ ನಿಗಮ

ಮತ್ತು ಅಲ್ಪ ಸಂಖ್ಯಾತರ ಅಭಿವೃದ್ಧಿ ನಿಗಮದ ಯೋಜನೆಗಳ ಫಲಾನುಭವಿಗಳ ಆಯ್ಕೆ ಪ್ರಕ್ರಿಯೆ ಮತ್ತು ಯೋಜನೆಗಳ ಅನುಷ್ಠಾನ ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; (ವಿವರ ನೀಡುವುದು)

(ಆ) ಬಂದಿದ್ದಲ್ಲಿ, ಸದರಿ ಯೋಜನೆಗಳನ್ನು ತ್ವರಿತವಾಗಿ ಅನುಷ್ಠಾನಕ್ಕೆ ತರಲು ಸರಕಾರ ಕೈಗೊಂಡಿರುವ ಕ್ರಮಗಳು ಯಾವುವು ; (ವಿವರ ನೀಡುವುದು)

(ಇ) ಫಲಾನುಭವಿಗಳ ಆಯ್ಕೆ ಪ್ರಕ್ರಿಯೆಯನ್ನು ಯಾವಾಗ ಕೈಗೊಳ್ಳಲಾಗುವುದು ?

## ಪಡಿತರ ಚೀಟಿ ವಿತರಣೆ ವಿಳಂಬ.

**ಶ್ರೀ ಜಿ.ಎಸ್. ನ್ಯಾಮಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೧೧೭೨ (೧೪೦೫) ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ಹೊಸ ಪಡಿತರ ಚೀಟಿಗಾಗಿ ಸ್ವೀಕೃತವಾದ ಅರ್ಜಿಗಳಲ್ಲಿ ವಿಲೇವಾರಿ ಆಗದೇ ಬಾಕಿ ಉಳಿದಿರುವ ಅರ್ಜಿಗಳ ಸಂಖ್ಯೆ ಎಷ್ಟು ; ಎಷ್ಟು ದಿನಗಳಿಂದ ಬಾಕಿ ಉಳಿದಿವೆ ಮತ್ತು ಬಾಕಿ ಉಳಿಯಲು ಕಾರಣವೇನು ; (ಬಾಕಿ ಪ್ರಕರಣಗಳ ತಾಲ್ಲೂಕುವಾರು ವಿವರ ನೀಡುವುದು)

(ಆ) ಪ್ರಸ್ತುತ ಸಾರ್ವಜನಿಕರು ಹೊಸ ಪಡಿತರ ಚೀಟಿ ಪಡೆಯಲು ಅರ್ಜಿ ಸ್ವೀಕರಿಸುವ ಪ್ರಕ್ರಿಯೆ ಪ್ರಾರಂಭವಾಗಿದೆಯೇ ; ಇಲ್ಲದಿದ್ದರೆ ಅರ್ಜಿ ಸ್ವೀಕರಿಸುವುದನ್ನು ಯಾವಾಗ ಪ್ರಾರಂಭಿಸಲಾಗುವುದು ?

## ರಾಜ್ಯ ಸರ್ಕಾರ ಎಸ್.ಸಿ.ಪಿ–ಟಿ.ಎಸ್.ಪಿ ಹಣ ಜಾರಿನೀತಿ.

**ಶ್ರೀ ಡಿ.ಎಸ್. ವೀರಯ್ಯ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೧೭೩ (೧೪೦೭) ಮಾನ್ಯ ಸಮಾಜ ಕಲ್ಯಾಣ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯ ಸರ್ಕಾರ ಎಸ್.ಸಿ.ಪಿ–ಟಿ.ಎಸ್.ಪಿ ಹಣವನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸುವ ನಿಟ್ಟಿನಲ್ಲಿ ಕಾನೂನನ್ನು ಜಾರಿಗೆ ತಂದಿದೆಯೇ ; ತಂದಿದ್ದಲ್ಲಿ, ಯಾವ ಸಾಲಿನಿಂದ ಜಾರಿಗೆ ಬಂದಿದೆ ;

(ಆ) ಎಸ್.ಸಿ.ಪಿ–ಟಿ.ಎಸ್.ಪಿ ಹಣವನ್ನು ಖರ್ಚು ಮಾಡದವರ ವಿರುದ್ಧ ಈ ಕಾನೂನಿನ ಅನ್ವಯ ಇದುವರೆಗೆ ಯಾವ ಕ್ರಮ ಜರುಗಿಸಲಾಗಿದೆ ?

## ೨೦೧೪–೨೦೧೫ನೇ ಸಾಲಿನಲ್ಲಿ SCP–TSP ಅಡಿಯಲ್ಲಿ ನಿಗಧಿಗೊಳಿಸಿದ ಇಲಾಖಾವಾರು ಹಣ

**ಶ್ರೀ ಡಿ.ಎಸ್. ವೀರಯ್ಯ (ವಿಧಾನ ಸಭೆಯಿಂದ ಚುನಾಯಿತರಾದವರು):–**

೧೧೭೪ (೧೪೦೮) ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ೨೦೧೪–೨೦೧೫ನೇ ಸಾಲಿನ ವಿಶೇಷ ಘಟಕ ಯೋಜನೆ ಅಡಿಯಲ್ಲಿ (ಎಸ್.ಸಿ.ಪಿ–ಟಿ.ಎಸ್.ಪಿ) ವಿವಿಧ ಇಲಾಖೆಗೆ (ಇಲಾಖಾವಾರು) ನಿಗಧಿಪಡಿಸಿದ ಹಣದ ಮೊತ್ತವೆಷ್ಟು; ಖರ್ಚಾದ ಹಣವೆಷ್ಟು; ಬಾಕಿ ಉಳಿದಿರುವ ಹಣವೆಷ್ಟು ;

(ಆ) ಮಾರ್ಚ್ ೨೦೧೫ರ ಒಳಗೆ ಈ ಹಣ ಖರ್ಚಾಗದಿದ್ದರೆ ಈ ಹಣವನ್ನು ೨೦೧೫-೨೦೧೬ನೇ ಸಾಲಿಗೆ ಮುಂದುವರೆಸಲಾಗುವುದೇ ;

(ಇ) ಮಾರ್ಚ್ ೨೦೧೫ರ ಒಳಗೆ ಈ ಹಣ ಖರ್ಚಾಗದೇ ಉಳಿದಿರುವುದಕ್ಕೆ ಕಾರಣವೇನು ?

## ಡಾ॥ ಅಂಬೇಡ್ಕರ್ ಅಭಿವೃದ್ಧಿ ನಿಗಮದ ವತಿಯಿಂದ ಕೊಳವೆ ಬಾವಿ ಕೊರೆಸಿರುವ ಮಾಹಿತಿ

**ಶ್ರೀ ಡಿ.ಎಸ್. ವೀರಯ್ಯ (ವಿಧಾನ ಸಭೆಯಿಂದ ಚುನಾಯಿತರಾದವರು):-**

೧೧೭೫ (೧೪೧೦) ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಡಾ॥ ಅಂಬೇಡ್ಕರ್ ಅಭಿವೃದ್ಧಿ ನಿಗಮದಿಂದ ೨೦೧೪-೧೫ರಲ್ಲಿ ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ ಕೊರೆಯಲಾಗಿರುವ ಕೊಳವೆ ಬಾವಿಗಳ ಸಂಖ್ಯೆ ಎಷ್ಟು; ಯಾವ ಯಾವ ಜಿಲ್ಲೆಗಳಲ್ಲಿ ಎಷ್ಟೆಷ್ಟು ಕೊಳವೆ ಬಾವಿಗಳನ್ನು ಕೊರೆಯಲಾಗಿದೆ; (ವಿವರ ಒದಗಿಸುವುದು)

(ಆ) ಈ ಸಾಲಿನಲ್ಲಿ ಕೊರೆದ ಕೊಳವೆ ಬಾವಿಗಳಿಗೆ ವಿದ್ಯುಧೀಕರಣಗೊಳಿಸಲಾಗಿದೆಯೇ; ಎಷ್ಟು ಕೊಳವೆ ಬಾವಿಗಳಿಗೆ ವಿದ್ಯುಧೀಕರಣ ಮಾಡಲಾಗಿದೆ ;

(ಇ) ಇದುವರೆಗೆ ವಿದ್ಯುಧೀಕರಣ ಮಾಡದಿರುವ ಕೊರೆದ ಕೊಳವೆ ಬಾವಿಗಳ ಸಂಖ್ಯೆ ಎಷ್ಟು; ಯಾವ ಯಾವ ಜಿಲ್ಲೆಯಲ್ಲಿ ಎಷ್ಟೆಷ್ಟು ಸಂಖ್ಯೆ ವಿದ್ಯುಧೀಕರಣವಾಗದೇ ಬಾಕಿ ಉಳಿದಿದೆ ?

## ಡಾ॥ ಅಂಬೇಡ್ಕರ್ ಅಭಿವೃದ್ಧಿ ನಿಗಮದ ವತಿಯಿಂದ ಭೂ ಖರೀದಿ ಯೋಜನೆ

**ಶ್ರೀ ಡಿ.ಎಸ್. ವೀರಯ್ಯ (ವಿಧಾನ ಸಭೆಯಿಂದ ಚುನಾಯಿತರಾದವರು) :-**

೧೧೭೬ (೧೪೦೯) ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಡಾ॥ ಅಂಬೇಡ್ಕರ್ ಅಭಿವೃದ್ಧಿ ನಿಗಮದ ವತಿಯಿಂದ ಭೂ ಖರೀದಿ ಯೋಜನೆ ಅಡಿಯಲ್ಲಿ ೨೦೧೪-೧೫ನೇ ಸಾಲಿಗೆ ನಿಗಧಿಪಡಿಸಿದ ಗುರಿಯೆಷ್ಟು; ಸಾಧಿಸಿದ ಸಂಖ್ಯೆ ಎಷ್ಟು; ವ್ಯಯ ಮಾಡಿದ ಹಣ ಎಷ್ಟು ;

(ಆ) ಡಾ॥ ಅಂಬೇಡ್ಕರ್ ಅಭಿವೃದ್ಧಿ ನಿಗಮದ ವತಿಯಿಂದ ನೇರ ಸಾಲ ಯೋಜನೆ ಅಡಿಯಲ್ಲಿ ೨೦೧೪-೧೫ನೇ ಸಾಲಿಗೆ ನಿಗಧಿಪಡಿಸಿದ ಗುರಿಯೆಷ್ಟು; ಸಾಧಿಸಿದ ಸಂಖ್ಯೆ ಎಷ್ಟು; ವ್ಯಯ ಮಾಡಿದ ಹಣ ಎಷ್ಟು ?

## ರಾಜ್ಯದಲ್ಲಿರುವ ಪಡಿತರ ವ್ಯವಸ್ಥೆಯ ಕುರಿತು

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೧೧೭೭ (೧೪೧೩) ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ರಾಜ್ಯದಲ್ಲಿ ಪಡಿತರ ವ್ಯವಸ್ಥೆಯನ್ನು ಎಂದಿನಿಂದ ಜಾರಿಗೊಳಿಸಲಾಯಿತು ಮತ್ತು ಅಂದಿನ ಪಡಿತರ ವ್ಯವಸ್ಥೆಯನ್ನು

ಪಡೆಯಲು ಇದ್ದ ಮಾನದಂಡವೇನು; (ವರ್ಷ, ದಿನಾಂಕದೊಂದಿಗೆ ವಿವರ ನೀಡುವುದು)

(ಆ) ರಾಜ್ಯದಲ್ಲಿ ನಂತರದ ದಿನಗಳಲ್ಲಿ ಬೇರೆ ಬೇರೆ ಸರ್ಕಾರಗಳು ಪಡಿತರ ವ್ಯವಸ್ಥೆಯನ್ನು ಬದಲಾವಣೆ ಮಾಡಿದ ಪ್ರಕರಣಗಳೆಷ್ಟು ಮತ್ತು ಇದಕ್ಕೆ ಮಾನದಂಡವೇನು; ಮತ್ತು ಯಾವ ಯಾವ ಪಡಿತರ ಚೀಟಿಗಳನ್ನು ಜಾರಿಗೆ ತರಲಾಯಿತು? (ವರ್ಷಸಹಿತ ವಿವರ ನೀಡುವುದು)

## ರಾಜ್ಯದಲ್ಲಿ ಸರ್ಕಾರಿ ಬಸ್ ಸೇವೆಗೆ ರಾಷ್ಟ್ರೀಕರಣಗೊಂಡ ಜಿಲ್ಲೆಗಳು

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೧೧೭೮ (೧೪೧೨) ಮಾನ್ಯ ಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ಸರ್ಕಾರಿ ಬಸ್ಸುಗಳ ಸೇವೆಗೆ ರಾಷ್ಟ್ರೀಕರಣಗೊಂಡ ಜಿಲ್ಲೆಗಳು ಯಾವುವು; ಮತ್ತು ಯಾವಾಗ ಈ ಜಿಲ್ಲೆಗಳನ್ನು ರಾಷ್ಟ್ರೀಕರಣ ಮಾಡಲಾಯಿತು; ಮತ್ತು ರಾಷ್ಟ್ರೀಕರಣ ಮಾಡಿರುವ ಉದ್ದೇಶವೇನು ;

(ಆ) ರಾಜ್ಯದಲ್ಲಿ ಸರ್ಕಾರಿ ಬಸ್ಸುಯಗಳ ಸೇವೆಗೆ ರಾಷ್ಟ್ರೀಕರಣಗೊಳ್ಳದೇ ಇರುವ ಜಿಲ್ಲೆಗಳು ಯಾವುವು ಮತ್ತು ಇವುಗಳನ್ನು ರಾಷ್ಟ್ರೀಕರಣಗೊಳಿಸದೇ ಇರಲು ಕಾರಣವೇನು ;

(ಇ) ಕೋಟ್ಯಾಂತರ ರೂಪಾಯಿ ವೆಚ್ಚದಲ್ಲಿ ನಿರ್ಮಿಸಲಾಗಿರುವ ಪ್ರಧಾನಮಂತ್ರಿ ಗ್ರಾಮಸಡಕ್ ಮತ್ತು ಮುಖ್ಯಮಂತ್ರಿ ಗ್ರಾಮಸಡಕ್

ರಸ್ತೆಗಳಲ್ಲಿ ಬಸ್ಸುಗಳ ವ್ಯವಸ್ಥೆಯನ್ನು ಕಲ್ಪಿಸುವ ಬದ್ಧತೆ ಸರ್ಕಾರಕ್ಕಿದೆಯೇ; ಇದ್ದಲ್ಲಿ ಸರ್ಕಾರ ತೆಗೆದುಕೊಂಡ ಯೋಜನಾ ಕಾರ್ಯಕ್ರಮಗಳಾವುವು ?

## ರಾಜ್ಯದಲ್ಲಿರುವ ಸರ್ಕಾರಿ ವೈದ್ಯಕೀಯ ಕಾಲೇಜುಗಳು

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೧೧೭೯ (೧೪೧೪) ಮಾನ್ಯ ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಸರ್ಕಾರಿ ವೈದ್ಯಕೀಯ ಕಾಲೇಜುಗಳ ಸಂಖ್ಯೆ ಎಷ್ಟು; ಅವು ಯಾವುವು ;

(ಆ) ರಾಜ್ಯದಲ್ಲಿ ನೂತನವಾಗಿ ಮಂಜೂರಾತಿ ಹೊಂದಿ ಪ್ರಾರಂಭಗೊಂಡಿರುವ ಸರ್ಕಾರಿ ವೈದ್ಯಕೀಯ ಕಾಲೇಜುಗಳ ಸಂಖ್ಯೆ ಎಷ್ಟು; ಅವು ಯಾವುವು; ಇವುಗಳಿಗೆ ಮೂಲಭೂತ ವ್ಯವಸ್ಥೆ ಕಲ್ಪಿಸಲಾಗಿದೆಯೇ ;

(ಇ) ರಾಜ್ಯದಲ್ಲಿ ನೂತನವಾಗಿ ಮಂಜೂರಾತಿ ಹೊಂದಿ ಇನ್ನೂ ಪ್ರಾರಂಭಗೊಳ್ಳದ ಸರ್ಕಾರಿ ವೈದ್ಯಕೀಯ ಕಾಲೇಜುಗಳ ಸಂಖ್ಯೆ ಎಷ್ಟು; ಅವು ಯಾವುವು; ಇವುಗಳನ್ನು ಎಂದಿನಿಂದ ಪ್ರಾರಂಭಿಸಲಾಗುವುದು ;

(ಈ) ರಾಜ್ಯದಲ್ಲಿ ಸರ್ಕಾರಿ ವೈದ್ಯಕೀಯ ಕಾಲೇಜುಗಳಿಲ್ಲದ ಜಿಲ್ಲೆಗಳು ಯಾವುವು; ಇಂತಹ ಜಿಲ್ಲೆಗಳಿಗೆ ಸರ್ಕಾರಿ ವೈದ್ಯಕೀಯ ಕಾಲೇಜು ಮಂಜೂರು ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು ?

## ಉಡುಪಿ ಜಿಲ್ಲೆಯಲ್ಲಿ ರಿಯಾಯಿತಿ ದರದಲ್ಲಿ ಬಸ್ಸು ಪಾಸ್ ಪಡೆದವರ ಕುರಿತು

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೧೧೮೦ (೧೪೧೫) ಮಾನ್ಯ ಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಉಡುಪಿ ಜಿಲ್ಲೆಯಲ್ಲಿ ರಿಯಾಯಿತಿ ದರದಲ್ಲಿ ಬಸ್ಸು ಪಾಸ್ ಪಡೆದ ಖಾಸಗಿ ಮತ್ತು ಸರ್ಕಾರಿ ಬಸ್ಸು ಪ್ರಯಾಣಿಕರ ಸಂಖ್ಯೆ ಎಷ್ಟು ; (ತಾಲ್ಲೂಕುವಾರು ವಿವರ ನೀಡುವುದು)

(ಆ) ಉಡುಪಿ ಜಿಲ್ಲೆಯಲ್ಲಿ ರಿಯಾಯಿತಿ ದರದಲ್ಲಿ ಬಸ್ಸು ಪಾಸು ಪಡೆದು ಸರ್ಕಾರಿ ಮತ್ತು ಖಾಸಗಿ ಬಸ್ಸುಗಳಲ್ಲಿ ಪ್ರಯಾಣಿಸುತ್ತಿರುವ ವಿದ್ಯಾರ್ಥಿ, ವಿದ್ಯಾರ್ಥಿನಿಯರನ್ನು ಎರಡನೇ ದರ್ಜೆಯ ಪ್ರಯಾಣಿಕರಂತೆ ತಾರತಮ್ಯ ಮಾಡುತ್ತಿರುವ ದೂರುಗಳು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಸರ್ಕಾರ ತೆಗೆದುಕೊಂಡ ಕ್ರಮಗಳೇನು ;

(ಇ) ಸಂಪೂರ್ಣ ಟಿಕೇಟ್ ಪಡೆದು ಪ್ರಯಾಣಿಸುವವರಿಗೆ ಪ್ರಥಮ ಆದ್ಯತೆ ಮತ್ತು ರಿಯಾಯಿತಿ ದರದ ಪ್ರಯಾಣದ ಪಾಸ್ ಪಡೆದ ವಿದ್ಯಾರ್ಥಿ/ವಿದ್ಯಾರ್ಥಿನಿಯರಿಗೆ ಕೊನೆಯ ಆದ್ಯತೆಯನ್ನು ನೀಡುತ್ತಿರುವ ಈ ತಾರತಮ್ಯ ಸರಿಪಡಿಸಲು ಸರ್ಕಾರ ಕೂಡಲೇ ಕೈಗೊಳ್ಳುವ ಕ್ರಮಗಳೇನು ?

## ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಕಛೇರಿಗಳನ್ನು ಸ್ಥಾಪಿಸುವುದು

**ಶ್ರೀ ಆಚಾರ್ ಹಾಲಪ್ಪ ಬಸಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೧೧೮೧ (೧೪೧೬) ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಪ್ರತಿ ತಾಲ್ಲೂಕಿನಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಕಛೇರಿಗಳನ್ನು ಸ್ಥಾಪಿಸಲು ಸರ್ಕಾರ ಕೈಗೊಂಡ ಕ್ರಮಗಳೇನು ;

(ಆ) ಎಂದಿನಿಂದ ಸದರಿ ಕಛೇರಿಗಳು ಸಾರ್ವಜನಿಕ ಸೇವೆಯಲ್ಲಿ ತೊಡಗಿವೆ ;

(ಇ) ಪ್ರತಿ ಕಛೇರಿಗಳಿಗೆ ಸೃಜಿಸಲಾದ ಸಿಬ್ಬಂದಿಗಳ ವಿವರಗಳನ್ನು ನೀಡುವುದು ;

(ಈ) ಈ ಕಛೇರಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ ಒಟ್ಟು ಸಂಖ್ಯೆ ಎಷ್ಟು; (ವೃಂದವಾರು, ಕಛೇರಿವಾರು ಮಾಹಿತಿಯನ್ನು ನೀಡುವುದು)

(ಉ) ಸದರಿ ಇಲಾಖೆಯಲ್ಲಿ ಹುದ್ದೆಗಳು ಖಾಲಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಊ) ಬಂದಿದ್ದಲ್ಲಿ, ಸದರಿ ಹುದ್ದೆಗಳನ್ನು ಭರ್ತಿ ಮಾಡುವ ನಿಟ್ಟಿನಲ್ಲಿ ಸರ್ಕಾರ ಕೈಗೊಂಡ ಕ್ರಮಗಳೇನು ;

(ಋ) ೨೦೧೩ರಲ್ಲಿಯೇ ತಾಲ್ಲೂಕುವಾರು ಹೊಸ ಕಛೇರಿಗಳನ್ನು ಸ್ಥಾಪಿಸಲು ಕ್ರಮ ಕೈಗೊಂಡ ಸರ್ಕಾರ ಇದುವರೆಗೂ ಸಿಬ್ಬಂದಿಗಳ ಭರ್ತಿ ಮಾಡುವಲ್ಲಿ ವಿಳಂಬ ಧೋರಣೆ ಅನುಸರಿಸುತ್ತಿರುವುದಕ್ಕೆ ಕಾರಣಗಳೇನು ?

## ರಾಜ್ಯದಲ್ಲಿ ಹಂದಿ ಜ್ವರ ಸೋಂಕು ಪೀಡಿತರ ಬಗ್ಗೆ

**ಶ್ರೀ ಆಚಾರ್ ಹಾಲಪ್ಪ ಬಸಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೧೧೮೨ (೧೪೧೯) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ಹಂದಿ ಜ್ವರ ಸೋಂಕು ಪೀಡಿತರ ಸಂಖ್ಯೆ ಎಷ್ಟು ; ಜಿಲ್ಲಾವಾರು ಮಾಹಿತಿ ನೀಡುವುದು ;

(ಆ) ಹಂದಿ ಜ್ವರದಿಂದಾಗಿ ಮೃತಪಟ್ಟವರ ಸಂಖ್ಯೆ ಎಷ್ಟು ; (ಜಿಲ್ಲಾವಾರು ವಿವರ ನೀಡುವುದು)

(ಇ) ಕೊಪ್ಪಳ-ರಾಯಚೂರು ಜಿಲ್ಲೆಯುಗಳಲ್ಲಿ ಹಂದಿಜ್ವರಕ್ಕೆ ಸಮರ್ಪಕವಾದ ಚಿಕಿತ್ಸೆ ಲಭ್ಯವಿದೆಯೇ ; ಈ ಎರಡೂ ಜಿಲ್ಲೆಗಳಲ್ಲಿ ಕೈಗೊಂಡ ಮುಂಜಾಗ್ರತಾ ಕ್ರಮಗಳೇನು ;

(ಈ) ಎರಡೂ ಜಿಲ್ಲೆಗಳಲ್ಲಿ ವಿತರಿಸಲಾದ ಟಮಿಫ್ಲೋ ಮಾತ್ರೆಯ ಪ್ರಮಾಣ ಎಷ್ಟು ; ಅವುಗಳನ್ನು ಬಳಕೆ ಮಾಡಲಾದ ಪ್ರಮಾಣ ಎಷ್ಟು ;

(ಉ) ರಾಜ್ಯದಲ್ಲಿ ಹೆಚ್ಚುತ್ತಿರುವ ಹಂದಿಜ್ವರವನ್ನು ನಿಯಂತ್ರಿಸುವಲ್ಲಿ ಸರ್ಕಾರ ಕೈಗೊಂಡ ಕ್ರಮಗಳೇನು ?

# ರಾಯಚೂರು ಮತ್ತು ಕೊಪ್ಪಳ ಜಿಲ್ಲೆಯಲ್ಲಿ ಅಪೌಷ್ಠಿಕತೆಯಿಂದ ಬಳಲುತ್ತಿರುವ ಮಕ್ಕಳು

**ಶ್ರೀ ಆಚಾರ್ ಹಾಲಪ್ಪ ಬಸಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೧೧೮೩ (೧೪೧೮) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಯಚೂರು ಮತ್ತು ಕೊಪ್ಪಳ ಜಿಲ್ಲೆಯಲ್ಲಿ ೨೦೧೩-೧೪ರಿಂದ ಇಲ್ಲಿಯವರೆಗೂ ಪತ್ತೆಯಾದ ಅಪೌಷ್ಠಿಕತೆಯಿಂದ ಬಳಲುತ್ತಿರುವ ಮಕ್ಕಳ ಸಂಖ್ಯೆ ಎಷ್ಟು ;

(ಆ) ಸದರಿ ಮಕ್ಕಳ ಆರೋಗ್ಯ ಸುಧಾರಣೆಗಾಗಿ ಆರೋಗ್ಯ ಇಲಾಖೆಯವರು ಕೈಗೊಂಡ ಕ್ರಮಗಳೇನು; ಪ್ರಸ್ತುತ ಮಕ್ಕಳ ಆರೋಗ್ಯ ಸ್ಥಿತಿಯ ವಿವರಗಳನ್ನು ಒದಗಿಸುವುದು ;

(ಇ) ಎರಡು ಜಿಲ್ಲೆಗಳಲ್ಲಿ ಈ ಸಮಸ್ಯೆ ತೀವ್ರತರವಾಗಿರುವುದಕ್ಕೆ ಕಾರಣಗಳೇನು; ಇದರ ಪರಿಹಾರಕ್ಕಾಗಿ ಸರ್ಕಾರ ರೂಪಿಸಿರುವ ಯೋಜನೆಗಳಾವುವು ;

(ಈ) ಎರಡೂ ಜಿಲ್ಲೆಗಳ ಜಿಲ್ಲಾ ಸಾರ್ವಜನಿಕ ಆಸ್ಪತ್ರೆಗಳಲ್ಲಿ ಮಕ್ಕಳ ತಜ್ಞ ವೈದ್ಯರ ಕೊರತೆಯೇನಾದರೂ ಇದೆಯೇ; ಇಲ್ಲವಾದಲ್ಲಿ ಪ್ರಸ್ತುತ ಇರುವ ವೈದ್ಯರ ಸಂಖ್ಯೆ ಹೆಚ್ಚಿಸಲು ಸರಕಾರ ಚಿಂತಿಸಿದೆಯೇ ?

## ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಲ್ಲಿ ಹೊರ ಸಂಪನ್ಮೂಲಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳು

**ಶ್ರೀ ಆಚಾರ್ ಹಾಲಪ್ಪ ಬಸಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೧೧೮೪ (೧೪೧೭) ಮಾನ್ಯ ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ಮೊರಾರ್ಜಿ ದೇಸಾಯಿ ವಸತಿ ಶಾಲೆ, ವಸತಿ ನಿಲಯಗಳಲ್ಲಿ ಹೊರಸಂಪನ್ಮೂಲದಿಂದ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳ ಸಂಖ್ಯೆ ಎಷ್ಟು ; (ವಿವರ ನೀಡುವುದು)

(ಆ) ಅವರುಗಳಿಗೆ ನೀಡಲಾಗುತ್ತಿರುವ ಸಂಭಾವನೆ ಎಷ್ಟು ;

(ಇ) ಈ ಶಿಕ್ಷಕರು ಆಯ್ಕೆ ಸಮಯದಲ್ಲಿ ನಡೆದ ಸ್ಪರ್ಧಾತ್ಮಕ ಪರೀಕ್ಷೆಗೆ ಹಾಜರಾಗಿದ್ದಲ್ಲಿ ಅವರಿಗೆ ಸೇವೆ ಸಲ್ಲಿಸಿದ ಅವಧಿಗೆ ವರ್ಷಕ್ಕೆ ಶೇ.೫ರಷ್ಟು ಕೃಪಾಂಕ ನೀಡಿ ಕಟ್ ಆಫ್ ಅಂಕಗಳಿಗಿಂತ ಮೇಲೆ ಬರುವವರನ್ನು ಆಯ್ಕೆ ಮಾಡಿಕೊಳ್ಳಲು ಮಾನ್ಯ ಸರ್ವೋಚ್ಚ ನ್ಯಾಯಾಲಯ ನೀಡಿದ ಆದೇಶದನ್ವಯ ಸರ್ಕಾರ ಕೈಗೊಂಡ ಕ್ರಮವೇನು ;

(ಈ) ಶಿಕ್ಷಕರಿಗೆ ವರ್ಷಕ್ಕೆ ೫%ರಷ್ಟು ಕೃಪಾಂಕ ನೀಡಲು ವರ್ಷ ಎಂಬ ಪದಕ್ಕೆ ಅನುಸರಿಸಿದ ಮಾನದಂಡ ಯಾವುದು, ಈ ಮಾನದಂಡ ಅನುಸರಿಸಿ ನೇಮಕಾತಿ ಪಟ್ಟಿ ಮಾಡಿದರೆ ನೇಮಕವಾಗುವ ಶಿಕ್ಷಕರ ಸಂಖ್ಯೆ ಎಷ್ಟು, ಅದೇ ರೀತಿ ಆಯ್ಕೆಯಿಂದ ವಂಚಿತರಾಗುವ ಶಿಕ್ಷಕರ ಸಂಖ್ಯೆ ಎಷ್ಟು ? (ವಿವರ ನೀಡುವುದು)

## ರಾಜ್ಯದಲ್ಲಿ ಹೆಚ್ಚುತ್ತಿರುವ H1-N1 ಸೋಂಕನ್ನು ತಡೆಗಟ್ಟುವ ಬಗ್ಗೆ

**ಶ್ರೀ ವಿ.ಸೋಮಣ್ಣ (ವಿಧಾನಸಭೆಯಿಂದ ಚುನಾಯಿತರಾದವರು) :-**

೧೧೮೫ (೧೪೨೧) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ಹೆಚ್-೧ ಎನ್-೧ ಸೋಂಕು ದಿನೇ ದಿನೇ ಹೆಚ್ಚುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಒಟ್ಟಾರೆ ಇದುವರೆಗೂ ಎಷ್ಟು ಜನರಿಗೆ ಸೋಂಕು ತಗುಲಿದೆ; ಬಡರೋಗಿಗಳ ಸಮಸ್ಯೆಗೆ ವೈದ್ಯಾಧಿಕಾರಿಗಳು ಸರಿಯಾಗಿ ಸ್ಪಂದಿಸುತ್ತಿಲ್ಲವೆಂಬ ಸಾರ್ವಜನಿಕರ ದೂರಿಗೆ ಸರ್ಕಾರದ ನಿಲುವೇನು ;

(ಆ) ಈ ಸೋಂಕಿಗೆ ಒಳಪಟ್ಟವರಿಗೆ ಸರ್ಕಾರದಿಂದ ಸೂಕ್ತ ಚಿಕಿತ್ಸೆ ನೀಡಲಾಗುತ್ತಿದೆಯೇ, ಚಿಕಿತ್ಸೆಯ ವಿವರ ನೀಡುವುದು; ಈ ಮಾರಕ ಕಾಯಿಲೆಯ ಮುಕ್ತಿಗೆ ಸರ್ಕಾರದಿಂದ ಬಿಡುಗಡೆ ಮಾಡಿರುವ ಅನುದಾನವೆಷ್ಟು; ಎಷ್ಟು ಜನರಿಗೆ ಸೋಂಕು ತಗುಲಿದೆ; ಈ ಕಾಯಿಲೆಯಿಂದ ಗುಣಮುಖರಾದವರ ಸಂಖ್ಯೆ ಮತ್ತು ಮೃತರಾದವರ ಸಂಖ್ಯೆ ಎಷ್ಟು; (ಜಿಲ್ಲಾವಾರು ವಿವರ ನೀಡುವುದು)

(ಇ) ಸಾರ್ವಜನಿಕರ ಭಯ-ಆತಂಕಕ್ಕೆ ಕಾರಣವಾಗಿರುವ ಈ ಕಾಯಿಲೆಯು ಶಮನಕ್ಕೆ ಸರ್ಕಾರದಿಂದ ಕೈಗೊಂಡಿರುವ ಕ್ರಮಗಳೇನು; ಯಾವ ಕಾರಣದಿಂದ ಈ ರೋಗ ಹರಡುತ್ತಿದೆ.

ತಡೆಗಟ್ಟಲು ಪ್ರಾಥಮಿಕವಾಗಿ ಕೈಗೊಳ್ಳಬಹುದಾದ ಕ್ರಮಗಳೇನು; ಕಳೆದ ಎರಡು ವರ್ಷಗಳಿಂದ ಈ ರೋಗಕ್ಕೆ ತುತ್ತಾದವರ ಚಿಕಿತ್ಸೆಗಾಗಿ ಸರ್ಕಾರದ ಬೊಕ್ಕಸಕ್ಕಾದ ವೆಚ್ಚವೆಷ್ಟು ? (ವಿವರ ನೀಡುವುದು)

## ಹಾಸನದಲ್ಲಿ ಹೈಟೆಕ್ ಆಸ್ಪತ್ರೆ ಪ್ರಾರಂಭ ಕುರಿತು

**ಶ್ರೀ ಪಟೇಲ್ ಶಿವರಾಂ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೧೧೮೬ (೧೫೨೩) ಮಾನ್ಯ ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಹಾಸನದಲ್ಲಿ ಹೈಟೆಕ್ ಸರ್ಕಾರಿ ಆಸ್ಪತ್ರೆ ಕಟ್ಟಡ ಯಾವಾಗ ಪೂರ್ಣಗೊಂಡಿರುತ್ತದೆ ; ಮತ್ತು ಇದರ ನಿರ್ಮಾಣಕ್ಕೆ ಖರ್ಚಾಗಿರುವ ಮೊತ್ತ ಎಷ್ಟು ;

(ಆ) ಸದರಿ ಹೈಟೆಕ್ ಆಸ್ಪತ್ರೆಗೆ ಅಗತ್ಯ ಯಂತ್ರೋಪಕರಣ, ವಿದೇಶದ ಆಧುನಿಕ ವೈದ್ಯ ಉಪಕರಣಗಳು, ಗ್ಯಾಸ್ ಸಂಪರ್ಕ, ನೀರು, ವಿದ್ಯುತ್, ಲಿಫ್ಟ್ ಇತ್ಯಾದಿ ಸೌಲಭ್ಯ ಒದಗಿಸಲು ವೈದ್ಯಕೀಯ ಕಾಲೇಜು ಆಡಳಿತ ಮಂಡಳಿ ಸಲ್ಲಿಸಿರುವ ಪ್ರಸ್ತಾವನೆಯ ಅಂದಾಜು ಮೊತ್ತ ಎಷ್ಟು; ಈ ಪೈಕಿ ಬಿಡುಗಡೆ ಮಾಡಿರುವ ಮೊತ್ತ ಎಷ್ಟು ;

(ಇ) ರಾಜ್ಯದಲ್ಲಿ ಸಾರ್ವಜನಿಕರಿಗೆ ಅವಶ್ಯಕವಿರುವ ಹೈಟೆಕ್ ಆಸ್ಪತ್ರೆಗಳನ್ನು ಪ್ರಾರಂಭಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

## ಗ್ರಾಹಕರ ವ್ಯಾಜ್ಯಗಳ ಪರಿಹಾರ ವೇದಿಕೆಯ ಬಗ್ಗೆ

**ಶ್ರೀ ಐವನ್ ಡಿ'ಸೋಜಾ (ನಾಮನಿರ್ದೇಶನ) :-**

೧೧೮೭ (೧೪೨೪) ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) 'ಗ್ರಾಹಕರ ವ್ಯಾಜ್ಯಗಳ ಪರಿಹಾರ ವೇದಿಕೆಯ' ಜಿಲ್ಲಾವಾರು ಅಧ್ಯಕ್ಷರು ಮತ್ತು ಸದಸ್ಯರುಗಳ ನೇಮಕಾತಿ ಮಾಡದೇ ಗ್ರಾಹಕರ ವ್ಯಾಜ್ಯಗಳಿಗೆ ಪರಿಹಾರ ನೀಡಲು ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಈ ಬಗ್ಗೆ ಕ್ರಮಕೈಗೊಳ್ಳದೇ ಇರಲು ಕಾರಣಗಳೇನು ;

(ಆ) ರಾಜ್ಯದ ಎಷ್ಟು ಜಿಲ್ಲೆಗಳಲ್ಲಿ ಗ್ರಾಹಕರ ವೇದಿಕೆಯ ಅಧ್ಯಕ್ಷರು ಮತ್ತು ಸದಸ್ಯರ ಹುದ್ದೆಗಳು ಖಾಲಿ ಇವೆ ; (ಜಿಲ್ಲಾವಾರು ವಿವರ ನೀಡುವುದು)

(ಇ) ೨೦೧೩-೧೪ ಮತ್ತು ೨೦೧೪-೧೫ನೇ ಸಾಲಿನಲ್ಲಿ ರಾಜ್ಯದಲ್ಲಿ ಗ್ರಾಹಕರ ವೇದಿಕೆಯಲ್ಲಿ ದಾಖಲಾದ ಪ್ರಕರಣಗಳ ಸಂಖ್ಯೆ ಎಷ್ಟು, ಇತ್ಯರ್ಥ ಪಡಿಸಲಾದ ಪ್ರಕರಣಗಳ ಸಂಖ್ಯೆ ಎಷ್ಟು ; (ಜಿಲ್ಲಾವಾರು ವಿವರ ನೀಡುವುದು)

(ಈ) ಗ್ರಾಹಕರ ಪರಿಹಾರ ವೇದಿಕೆಯ ಬಗ್ಗೆ ಅರಿವು ಮೂಡಿಸಲು ಮತ್ತು ಪ್ರಕರಣಗಳನ್ನು ಅದಾಲತ್ ಮೂಲಕ ಇತ್ಯರ್ಥಗೊಳಿಸಲು ಇಲಾಖೆ ಕೈಗೊಂಡ ಕಾರ್ಯಕ್ರಮಗಳೇನು ; (ವಿವರ ನೀಡುವುದು)

(ಉ) ಕೇರಳ ಮಾದರಿಯಲ್ಲಿ ಅಧ್ಯಕ್ಷರು ಮತ್ತು ಸದಸ್ಯರುಗಳನ್ನು ನೇಮಕ ಮಾಡಲು ಇಲಾಖೆ ಕ್ರಮ ಕೈಗೊಳ್ಳುವುದೇ ?

## ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸರ್ಕಾರಿ ವೈದ್ಯಕೀಯ ಕಾಲೇಜು ಸ್ಥಾಪಿಸುವ ಬಗ್ಗೆ

**ಶ್ರೀ ಐವನ್ ಡಿ'ಸೋಜಾ (ನಾಮನಿರ್ದೇಶನ) :-**

೧೧೮೮ (೧೪೨೫) ಮಾನ್ಯ ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸರ್ಕಾರಿ ವೈದ್ಯಕೀಯ ಕಾಲೇಜು ಸ್ಥಾಪಿಸದಿರಲು ಖಾಸಗಿ ವೈದ್ಯಕೀಯ ಲಾಬಿಗಳಿಗೆ ಇಲಾಖೆ ಮಣಿದಿದೆಯೆಂಬ ಆರೋಪ ಇರುವುದು ಸರಿಯೇ, ಇಲ್ಲದಿದ್ದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸರ್ಕಾರಿ ವೈದ್ಯಕೀಯ ಕಾಲೇಜು ಸ್ಥಾಪನೆ ಮಾಡದಿರಲು ಕಾರಣಗಳೇನು ;

(ಆ) ರಾಜ್ಯದಲ್ಲಿ ೨೦೧೪-೧೫ನೇ ಸಾಲಿನಲ್ಲಿ ಎಷ್ಟು ಸರ್ಕಾರಿ ವೈದ್ಯಕೀಯ ಕಾಲೇಜುಗಳು ಸ್ಥಾಪಿಸಲ್ಪಟ್ಟಿದೆ, ಎಷ್ಟು ವಿದ್ಯಾರ್ಥಿಗಳಿಗೆ ಪ್ರವೇಶ ನೀಡಲಾಗಿದೆ ;

(ಇ) ರಾಜ್ಯದಲ್ಲಿ ಎಷ್ಟು ಖಾಸಗಿ ಸಂಸ್ಥೆಗಳಿಂದ ಮೆಡಿಕಲ್ ಕಾಲೇಜುಗಳನ್ನು ತೆರೆಯಲು ಅರ್ಜಿ ಸ್ವೀಕರಿಸಲಾಗಿದೆ, ಇದು ಯಾವ ಹಂತದಲ್ಲಿದೆ; (ವಿವರ ನೀಡುವುದು)

(ಈ) ಖಾಸಗಿ ಕಾಲೇಜುಗಳು ನಿಯುಮ ಮೀರಿ ವೈದ್ಯಕೀಯು ವಿದ್ಯಾರ್ಥಿಗಳಿಗೆ ಪ್ರವೇಶವನ್ನು ನೀಡಿರುವುದು ಸರ್ಕಾರದ ಗಮನಕ್ಕೆ

ಬಂದಿದೆಯೇ; ಬಂದಿದ್ದಲ್ಲಿ, ಅಂತಹ ಕಾಲೇಜುಗಳ ಮೇಲೆ ಕೈಗೊಂಡಿರುವ ಕ್ರಮಗಳೇನು ?

## ಮಾರಣಾಂತಿಕ ಸಾಂಕ್ರಾಮಿಕ ರೋಗಗಳಾದ H1-N1 ನಂತಹ ರೋಗಗಳ ಬಗ್ಗೆ

**ಶ್ರೀ ಐವನ್ ಡಿ'ಸೋಜಾ (ನಾಮನಿರ್ದೇಶನ) :-**

೧೧೮೯ (೧೪೨೭) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಮಾರಣಾಂತಿಕ ಸಾಂಕ್ರಾಮಿಕ ರೋಗಗಳಾದ H1-N1ನಂತಹ ರೋಗಗಳ ಬಗ್ಗೆ ಪರೀಕ್ಷೆಯನ್ನು ಮಾಡಲು ಇಲಾಖಾವತಿಯಿಂದ ಟೆಸ್ಟ್ ಲ್ಯಾಬೋರೇಟರಿಯನ್ನು ತೆರೆಯದೇ ಇರಲು ಕಾರಣಗಳೇನು ; ಈ ಬಗ್ಗೆ ಇಲಾಖೆ ಕೈಗೊಂಡ ಕ್ರಮಗಳೇನು ;

(ಆ) ೨೦೧೪-೧೫ನೇ ಸಾಲಿನಲ್ಲಿ H1-N1 ರೋಗಕ್ಕೆ ಬಲಿಯಾದ ರೋಗಿಗಳ ಸಂಖ್ಯೆ ಎಷ್ಟು ;

(ಇ) ಪ್ರಾಣಾಪಾಯ ಉಂಟು ಮಾಡುವ ಸಾಂಕ್ರಾಮಿಕ ರೋಗಗಳು ಹರಡದಂತೆ ಮುನ್ನೆಚ್ಚರಿಕೆವಹಿಸಲು ಇಲಾಖೆಯಿಂದ ಕೈಗೊಂಡ ಕಾರ್ಯಕ್ರಮಗಳೇನು ; (ವಿವರ ನೀಡುವುದು) ಈ ರೋಗಗಳ ತಡೆಗೆ ಖಾಸಗಿ/ಸರ್ಕಾರಿ ವೈದ್ಯಕೀಯ ಕಾಲೇಜುಗಳ ವೈದ್ಯರ ಪಡೆಯಲಾಗಿದೆಯೇ ;

(ಈ) H1-N1 ನ್ನು ತಡೆಯಲು ವಿಶೇಷ ವೈದ್ಯಾಧಿಕಾರಿಗಳ ತಂಡವನ್ನು ಜಿಲ್ಲಾವಾರು ನೇಮಿಸುವುದು ಅಗತ್ಯವಿದೆ ಎಂಬುವುದು

ಇಲಾಖೆಯು ಮನಗಂಡಿದೆಯೇ ; ಹಾಗಿದ್ದಲ್ಲಿ, ಈ ನಿಟ್ಟಿನಲ್ಲಿ ಯಾವ ಕ್ರಮವನ್ನು ವಹಿಸಲಾಗಿದೆ ?

## ಮಂಗಳೂರಿನಲ್ಲಿ ಪ್ರಾರಂಭಿಸಲು ಉದ್ದೇಶಿಸಿದ ವಾಹನ ಚಾಲಕರ ತರಬೇತಿ ಕೇಂದ್ರ

**ಶ್ರೀ ಐವನ್ ಡಿ'ಸೋಜಾ (ನಾಮನಿರ್ದೇಶನ) :-**

೧೧೯೦ (೧೪೨೬) ಮಾನ್ಯ ಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಮಂಗಳೂರಿನಲ್ಲಿ ಪ್ರಾರಂಭಿಸಲು ಉದ್ದೇಶಿಸಿದ ವಾಹನ ಚಾಲಕರ ತರಬೇತಿ ಕೇಂದ್ರ, ವಾಹನ ತಪಾಸಣೆ ಮತ್ತು ಪ್ರಮಾಣೀಕರಣ ಕೇಂದ್ರ, ಸ್ವಯಂಚಾಲಿತ ವಾಹನ ಚಾಲನ ಪರೀಕ್ಷೆ ಪಥ್ ಯೋಜನೆ ವಿಳಂಬಗೊಳ್ಳಲು ಕಾರಣಗಳೇನು; ಈ ಯೋಜನೆ ಯಾವಾಗ ಪ್ರಾರಂಭಗೊಳ್ಳುವುದು; ಈ ಯೋಜನೆಗೆ ಮೀಸಲಿಟ್ಟ ಅನುದಾನ ಎಷ್ಟು ; (ವಿವರ ನೀಡುವುದು)

(ಆ) ದಕ್ಷಿಣ ಕನ್ನಡ ಜಿಲ್ಲೆಯ ಬೆಳಂಗಡಿ, ಸುಳ್ಯ ಮತ್ತು ಬಂಟ್ವಾಳದಲ್ಲಿ ಸಾರಿಗೆ ಇಲಾಖೆಯ ಕಛೇರಿಯನ್ನು ತೆರೆಯಬೇಕೆಂಬ ಬೇಡಿಕೆಯ ಬಗ್ಗೆ ಇಲಾಖೆ ತೆಗೆದುಕೊಂಡ ಕ್ರಮಗಳೇನು ;

(ಇ) ಸುರತ್ಕಲ್‌ನಲ್ಲಿ ಸಾರಿಗೆ ಕಛೇರಿ ಪ್ರಾರಂಭಿಸಲು ವಿಳಂಬವಾಗಿರುವುದಕ್ಕೆ ಕಾರಣಗಳೇನು ;

(ಈ) ರಾಜ್ಯದ ಯಾವ ಯಾವ ಜಿಲ್ಲೆಗಳಲ್ಲಿ ಸಾರಿಗೆ ಇಲಾಖೆ ಸಿಬ್ಬಂದಿಗಳಿಗೆ ವಸತಿ ಗೃಹಗಳನ್ನು ಇಲಾಖೆ ವತಿಯಿಂದ ನೀಡಲಾಗಿದೆ; ದಕ್ಷಿಣ

ಕನ್ನಡ ಜಿಲ್ಲೆಯಲ್ಲಿ ವಸತಿ ಗೃಹಗಳ ನಿರ್ಮಾಣ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; ಇದ್ದಲ್ಲಿ, ಕೈಗೊಂಡ ತೀರ್ಮಾನ ಏನು ?

## ಎಪಿಎಲ್ ಕಾರ್ಡ್‌ದಾರರಿಗೆ ೧೦.ರೂ.ಗಳಿಗೆ ಅಕ್ಕಿ ನೀಡುವ ಬಗ್ಗೆ

**ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮನಿರ್ದೇಶನ) :-**

೧೧೯೧ (೧೪೩೧) ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿರುವ ಎಪಿಎಲ್ ಕಾರ್ಡ್‌ದಾರರ ಸಂಖ್ಯೆ ಎಷ್ಟು ;

(ಆ) ಎಪಿಎಲ್ ಕಾರ್ಡ್‌ದಾರರಿಗೂ ಸಹ ಬಿಪಿಎಲ್‌ಗೆ ನೀಡುವ ರೀತಿ ಅಕ್ಕಿ ವಿತರಣೆಯನ್ನು ಕನಿಷ್ಠ ದರದಲ್ಲಿ ಕೊಡದಿರಲು ಕಾರಣವೇನು ;

(ಇ) ಕನಿಷ್ಠ ದರದಲ್ಲಿ ಗೋಧಿ, ಸೀಮೇಎಣ್ಣೆ ಇತರೆ ಪಡಿತರಗಳನ್ನು ನೀಡಲು ಸರ್ಕಾರ ಚಿಂತಿಸಿದೆಯೇ ;

(ಈ) ೨೦೧೪-೧೫ನೇ ಸಾಲಿನಲ್ಲಿ ಈ ಯೋಜನೆಯನ್ನು ಪ್ರಾರಂಭ ಮಾಡಲು ಸಾಧ್ಯವಿದೆಯೇ ?

## ಜಯದೇವ ಹೃದ್ರೋಗ ಆಸ್ಪತ್ರೆ ಸೇವೆ ಬಗ್ಗೆ

**ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮನಿರ್ದೇಶನ) :-**

೧೧೯೨ (೧೪೩೨) ಮಾನ್ಯ ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬೆಂಗಳೂರಿನಲ್ಲಿರುವ ಜಯದೇವ ಹೃದ್ರೋಗ ಆಸ್ಪತ್ರೆ ಪ್ರಾರಂಭವಾಗಿದ್ದು ಯಾವಾಗ ;

(ಆ) ಸದರಿ ಆಸ್ಪತ್ರೆಯಲ್ಲಿ ಯಾವ ಯಾವ ಖಾಯಿಲೆಗಳಿಗೆ ಚಿಕಿತ್ಸೆ ನೀಡಲಾಗುತ್ತಿದೆ ; ಇದಕ್ಕೆ ಅನುಸರಿಸುತ್ತಿರುವ ಮಾನದಂಡಗಳೇನು ; (ವಿವರ ನೀಡುವುದು)

(ಇ) ಬಡಜನರಿಗೆ ಹೃದಯ ಸಂಬಂಧಿ ಖಾಯಿಲೆಗಳಿಗೆ ಪೂರ್ಣ ಉಚಿತ ಚಿಕಿತ್ಸೆ ಒದಗಿಸಲು ಹಮ್ಮಿಕೊಂಡಿರುವ ಕಾರ್ಯಕ್ರಮಗಳೇನು ;

(ಈ) ಯಾವ ಯಾವ ಯೋಜನೆಗಳಿಂದ ರೋಗಿಗಳಿಗೆ ಯಾವ ಸೌಲಭ್ಯಗಳು ಸಿಗುತ್ತಲಿವೆ ;

(ಉ) ಒಳರೋಗಿಗಳಿಗೆ ಯಾವ ರೀತಿ ಚಿಕಿತ್ಸಾ ಸೌಲಭ್ಯ ಒದಗಿಸಲಾಗುವುದು ?

**ತಾಲ್ಲೂಕು ಕೇಂದ್ರಗಳಲ್ಲಿ ಡಯಾಲಿಸಿಸ್ ಕೇಂದ್ರ ಸ್ಥಾಪನೆ ಬಗ್ಗೆ**

**ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮನಿರ್ದೇಶನ) :-**

೧೧೯೩ (೧೪೨೮) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ಇತ್ತೀಚಿನ ದಿನಗಳಲ್ಲಿ ಡಯಾಲಿಸಿಸ್‌ಗೆ ಒಳಪಡುವ ರೋಗಿಗಳ ಸಂಖ್ಯೆ ಹೆಚ್ಚಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ, ಜಿಲ್ಲಾ ಮಟ್ಟದಲ್ಲಿರುವ ಡಯಾಲಿಸಿಸ್ ಕೇಂದ್ರಗಳು ಸಾಕಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಪ್ರತಿ ತಾಲ್ಲೂಕು ಕೇಂದ್ರಗಳಲ್ಲೂ ಸಹ ಡಯಾಲಿಸಿಸ್ ಕೇಂದ್ರಗಳನ್ನು ತೆರೆಯಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ; ಯಾವ ಯಾವ ತಾಲ್ಲೂಕು ಕೇಂದ್ರಗಳಲ್ಲಿ ಎಷ್ಟು ಡಯಾಲಿಸಿಸ್ ಕೇಂದ್ರಗಳನ್ನು ತೆರೆಯಲಾಗಿದೆ ;

(ಈ) ಸದರಿ ಕೇಂದ್ರಗಳು ಯಾವಾಗಿನಿಂದ ಕಾರ್ಯ ಪ್ರಾರಂಭ ಮಾಡಲಿದೆ ?

## ಗಂಗಾ ಕಲ್ಯಾಣ ಯೋಜನೆ ನೇಕಾರ ಕುಟುಂಬಗಳಿಗೂ ನೀಡುವ ಬಗ್ಗೆ

**ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮನಿರ್ದೇಶನ) :-**

೧೧೯೪ (೧೪೨೯) ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಗಂಗಾ ಕಲ್ಯಾಣ ಯೋಜನೆ ಯಾವ ದಿನಾಂಕದಿಂದ ಜಾರಿಗೆ ಬಂದಿರುತ್ತದೆ ;

(ಆ) ಈ ಯೋಜನೆಯ ಮಾನದಂಡವೇನು ; (ವಿವರ ನೀಡುವುದು)

(ಇ) ರಾಜ್ಯದ ಯಾವುದೇ ತಾಲ್ಲೂಕಿನಲ್ಲಿ ಇದುವರೆಗೂ ನೇಕಾರ ಕುಟುಂಬಕ್ಕೆ ಈ ಯೋಜನೆಯ ಪ್ರಯೋಜನೆ ಸಿಗದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಈ ವರ್ಷದಿಂದ ತಾಲ್ಲೂಕುವಾರು ಹಂಚಿಕೆಯಲ್ಲಿ ಕನಿಷ್ಠ ೩ ಕೊಳವೆ ಬಾವಿಗಳನ್ನು ಬಡ ನೇಕಾರರಿಗೆ ಸಿಗುವಂತೆ ಆದೇಶ ಮಾಡಲಾಗುವುದೇ ;

(ಉ) ತಾಲ್ಲೂಕುವಾರು ಹಂಚಿಕೆ ಮಾಡುವಾಗ ಆ ಭಾಗದ ಹಿಂದುಳಿದ ವರ್ಗಕ್ಕೆ ಸೇರಿದ ಬಡ ನೇಕಾರ ಕುಟುಂಬಕ್ಕೂ ಸಿಗುವ ಬಗ್ಗೆ ಆದೇಶ ಮಾಡಬಹುದೇ ?

## ವಿಕ್ಟೋರಿಯಾ ಆಸ್ಪತ್ರೆಯಲ್ಲಿ ತುರ್ತು ಚಿಕಿತ್ಸಾ ಘಟಕಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ತೆರೆಯುವ ಬಗ್ಗೆ

**ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮನಿರ್ದೇಶನ) :-**

೧೧೯೫ (೧೪೩೦) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಯಲ್ಲಿರುವ ತುರ್ತು ನಿಗಾ ಘಟಕಗಳ ಸಂಖ್ಯೆ ಎಷ್ಟು ;

(ಆ) ಇತ್ತೀಚಿನ ದಿನಗಳಲ್ಲಿ ರೋಗಿಗಳಿಗೆ ಸಕಾಲದಲ್ಲಿ ಚಿಕಿತ್ಸೆ ಸಿಗದೆ ಸಾವಿಗೀಡಾಗಿರುವ ಸಂಗತಿ ನಿಜವೇ ; ಹಾಗಿದ್ದಲ್ಲಿ, ಸಾವಿಗೀಡಾಗಿರುವ ರೋಗಿಗಳ ಸಂಖ್ಯೆ ಎಷ್ಟು ;

(ಇ) ಮುಂದಿನ ದಿನಗಳಲ್ಲಿ ತುರ್ತು ಚಿಕಿತ್ಸಾ ಘಟಕಗಳ ಸಂಖ್ಯೆಯನ್ನು ಹೆಚ್ಚು ಮಾಡಿ ರೋಗಿಗಳಿಗೆ ಅನುಕೂಲ ಮಾಡಿಕೊಡಲು ಉದ್ದೇಶಿಸಲಾಗಿದೆಯೇ; ಉದ್ದೇಶಿಸಿದ್ದಲ್ಲಿ, ಯಾವಾಗ ಮಾಡಲಾಗುವುದು ; ಎಷ್ಟು ಘಟಕಗಳನ್ನು ತೆರೆಯಲಾಗುವುದು ಮತ್ತು ಯಾವಾಗ ?

## ಎ.ಪಿ.ಎಲ್. ಕಾರ್ಡುದಾರರಿಗೆ ಪಡಿತರ ವಿತರಣೆ ವ್ಯವಸ್ಥೆ ಬಗ್ಗೆ

**ಶ್ರೀ ಎಸ್. ನಾಗರಾಜು (ಸಂದೇಶ್ ನಾಗರಾಜ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-**

೧೧೯೬ (೧೪೪೫) ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ಈಗಾಗಲೇ ಬಿ.ಪಿ.ಎಲ್ ಕಾರ್ಡುದಾರರಿಗೆ ನೀಡುತ್ತಿರುವ ಪಡಿತರ ವ್ಯವಸ್ಥೆಯನ್ನು ಎ.ಪಿ.ಲ್ ಕಾರ್ಡುದಾರರಿಗೆ ನೀಡಲು ಉದ್ದೇಶಿಸಲಾಗಿದೆಯೇ ;

(ಆ) ಹಾಗಿದ್ದಲ್ಲಿ, ಈ ವ್ಯವಸ್ಥೆಯನ್ನು ಯಾವಾಗಿನಿಂದ ಜಾರಿಗೆ ತರಲಾಗುವುದು ; (ವಿವರ ನೀಡುವುದು)

(ಇ) ರಾಜ್ಯದಲ್ಲಿರುವ ಎಷ್ಟು ಜನ ಎ.ಪಿ.ಲ್ ಕಾರ್ಡುದಾರರಿಗೆ ಯಾವ ದರದಲ್ಲಿ ಪ್ರತಿ ಕುಟುಂಬ ಅಥವಾ ವ್ಯಕ್ತಿಗೆ ಪಡಿತರ ವಿತರಣೆ ಮಾಡಲಾಗುವುದು ? (ಜಿಲ್ಲಾವಾರು ಮಾಹಿತಿ ನೀಡುವುದು)

## ಆರ್.ಟಿ.ಓ. ಕಚೇರಿಗಳಲ್ಲಿನ ಭ್ರಷ್ಟಾಚಾರ

**ಶ್ರೀಮತಿ ವಿಮಲಾಗೌಡ (ವಿಧಾನಸಭೆಯಿಂದ ಚುನಾಯಿತರಾದವರು) :-**

೧೧೯೭ (೧೪೪೭) ಮಾನ್ಯ ಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬೆಂಗಳೂರು ನಗರ ಮತ್ತು ಗ್ರಾಮಾಂತರದಲ್ಲಿರುವ ಒಟ್ಟು ಆರ್.ಟಿ.ಓ. ಕಚೇರಿಗಳ ಸಂಖ್ಯೆ ಎಷ್ಟು ; (ಕಚೇರಿಗಳ ವಿಳಾಸ ಮತ್ತು ದೂರವಾಣಿ ಸಂಖ್ಯೆಗಳನ್ನು ನೀಡುವುದು)

(ಆ) ಕಳೆದ ಎರಡು ವರ್ಷಗಳಿಂದ ಬೆಂಗಳೂರು ನಗರ ಮತ್ತು ಗ್ರಾಮಾಂತರದ ಆರ್.ಟಿ.ಓ. ಕಚೇರಿಗಳಲ್ಲಿ ನಡೆದಿರುವ ಭ್ರಷ್ಟಾಚಾರ ಪ್ರಕರಣಗಳ ಸಂಖ್ಯೆ ಎಷ್ಟು ; ಇಂತಹ ಪ್ರಕರಣಗಳನ್ನು ನಿಯಂತ್ರಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳಾವುವು ;

(ಇ) ಇಂತಹ ಪ್ರಕರಣಗಳಲ್ಲಿ ಭಾಗಿಯಾದ ಅಧಿಕಾರಿ/ನೌಕರರು ಯಾರು; ಇವರುಗಳ ವಿರುದ್ಧ ಸರ್ಕಾರ ಯಾವ ರೀತಿಯ ಕ್ರಮ ಜರುಗಿಸಿದೆ ?

## ಮೋಟರು ವಾಹನ ನಿರೀಕ್ಷಕರ ನೇಮಕಾತಿ ಬಗ್ಗೆ

**ಶ್ರೀಮತಿ ವಿಮಲಾಗೌಡ (ವಿಧಾನಸಭೆಯಿಂದ ಚುನಾಯಿತರಾದವರು) :-**

೧೧೯೮ (೧೪೫೦) ಮಾನ್ಯ ಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿರುವ ಮೋಟಾರು ವಾಹನ ನಿರೀಕ್ಷಕರ ಒಟ್ಟು ಹುದ್ದೆಗಳ ಸಂಖ್ಯೆ ಎಷ್ಟು ;

(ಆ) ಇವುಗಳಲ್ಲಿ ಖಾಲಿ ಇರುವ ಹುದ್ದೆಗಳ ಸಂಖ್ಯೆಯೆಷ್ಟು ; ಕಾರ್ಯನಿರ್ವಹಿಸುತ್ತಿರುವ ಹುದ್ದೆಗಳ ಸಂಖ್ಯೆ ಎಷ್ಟು ; (ಜಿಲ್ಲಾವಾರು ಮಾಹಿತಿ ನೀಡುವುದು)

(ಇ) ಪ್ರಸಕ್ತ ಸಾಲಿನಲ್ಲಿ ಖಾಲಿ ಇರುವ ಮೋಟಾರು ವಾಹನ ನಿರೀಕ್ಷಕರ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಕ್ರಮ ಜರುಗಿಸುವುದೇ; ಇದಕ್ಕೆ ಸಂಬಂಧಪಟ್ಟ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

(ಈ) ಹಾಗಿದ್ದಲ್ಲಿ, ಎಷ್ಟು ದಿನಗಳ ಒಳಗಾಗಿ ನೇಮಕಾತಿ ಪ್ರಕ್ರಿಯೇ ಪೂರ್ಣಗೊಳ್ಳುವುದು ; ಇದಕ್ಕೆ ಸರ್ಕಾರ ವಿಧಿಸಿರುವ ಮಾನದಂಡಗಳೇನು ?

## ನ್ಯಾಯಬೆಲೆ ಅಂಗಡಿಗಳಲ್ಲಿ ಅಸಮರ್ಪಕ ಪಡಿತರ ವಿತರಣೆ

**ಶ್ರೀಮತಿ ವಿಮಲಾಗೌಡ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೧೯ (೧೪೪೮) ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿರುವ ಒಟ್ಟು ನ್ಯಾಯಬೆಲೆ ಅಂಗಡಿಗಳ ಸಂಖ್ಯೆ ಎಷ್ಟು ; (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ಪ್ರತಿಯೊಂದು ನ್ಯಾಯಬೆಲೆ ಅಂಗಡಿಗೆ ನಿಗದಿಪಡಿಸಿರುವ ಪಡಿತರ ಸಂಖ್ಯೆ ಎಷ್ಟು ;

(ಇ) ನ್ಯಾಯಬೆಲೆ ಅಂಗಡಿಗಳಲ್ಲಿ ಫಲಾನುಭವಿಗಳಿಗೆ ಸರಿಯಾಗಿ ಆಹಾರ ಪದಾರ್ಥಗಳನ್ನು ವಿತರಣೆ ಮಾಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಹಾಗಿದ್ದಲ್ಲಿ, ಸರ್ಕಾರ ಈ ಬಗ್ಗೆ ಕೈಗೊಂಡ ಕ್ರಮಗಳೇನು ?

## ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗ ವಿದ್ಯಾರ್ಥಿಗಳ ವಿದ್ಯಾರ್ಥಿ ವೇತನ ವಿಳಂಬದ ಬಗ್ಗೆ

**ಶ್ರೀಮತಿ ವಿಮಲಾಗೌಡ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೨೦೦ (೧೪೪೯) ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ವಿವಿಧ ಶಾಲಾ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ನೀಡುತ್ತಿರುವ ವಿದ್ಯಾರ್ಥಿ ವೇತನ ಎಷ್ಟು ;

(ಆ) ಕೆಲವೊಂದು ಶಾಲಾ–ಕಾಲೇಜುಗಳಲ್ಲಿ ವಿದ್ಯಾರ್ಥಿ ವೇತನವನ್ನು ಸಮರ್ಪಕವಾಗಿ ವಿತರಣೆ ಮಾಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಬಂದಿದ್ದಲ್ಲಿ, ವಿಳಂಬ ಮಾಡುತ್ತಿರುವ ಶಾಲಾ–ಕಾಲೇಜುಗಳ ವಿರುದ್ಧ ಸರ್ಕಾರ ಯಾವ ರೀತಿಯ ಕ್ರಮ ಕೈಗೊಂಡಿದೆ ?

## ವಸತಿ ನಿಲಯಗಳಿಗೆ ಕಳಪೆ ಮಟ್ಟದ ಆಹಾರ ಧಾನ್ಯಗಳ ವಿತರಣೆ ಮಾಡುತ್ತಿರುವ ಬಗ್ಗೆ

**ಶ್ರೀ ರಘುನಾಥ ರಾವ್ ಮಲ್ಕಾಪೂರೆ (ವಿಧಾನಸಭೆಯಿಂದ ಚುನಾಯಿತರಾದವರು):–**

೧೨೦೧ (೧೪೫೧) ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಹೈದ್ರಾಬಾದ್ ಕರ್ನಾಟಕ ಭಾಗದ ಜಿಲ್ಲೆಗಳಲ್ಲಿ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ, ಮೂರಾರ್ಜಿ ದೇಸಾಯಿ, ಕಿತ್ತೂರು ಚನ್ನಮ್ಮ ಮತ್ತು ಬಿ.ಸಿ.ಎಂ. ವಿದ್ಯಾರ್ಥಿ/ವಿದ್ಯಾರ್ಥಿನಿಯರ ವಸತಿ ನಿಲಯಗಳ ಸಂಖ್ಯೆ ಎಷ್ಟು ; (ತಾಲ್ಲೂಕುವಾರು ಮಾಹಿತಿ ನೀಡುವುದು)

(ಆ) ಪ್ರತಿ ವಸತಿ ನಿಲಯಗಳಲ್ಲಿ ವಾಸವಾಗಿರುವ ವಿದ್ಯಾರ್ಥಿನಿಯರ ಸಂಖ್ಯೆ ಎಷ್ಟು ; (ವಸತಿ ನಿಲಯವಾರು ವಿವರ ಒದಗಿಸುವುದು)

(ಇ) ವಸತಿ ನಿಲಯಗಳಿಗೆ ಮಾಹೆಯಾನ ಯಾವ ಯಾವ ಆಹಾರ ಧಾನ್ಯಗಳನ್ನು ಎಷ್ಟೆಷ್ಟು ಪ್ರಮಾಣದಲ್ಲಿ ಒದಗಿಸಲಾಗುತ್ತಿದೆ ; ಇದಲ್ಲದೆ, ಒದಗಿಸಲಾಗುತ್ತಿರುವ ಇತರೆ ಸೌಲಭ್ಯಗಳಾವುವು ; ಪ್ರತಿ ವಸತಿ

ನಿಲಯವಾರು ಆಹಾರ ಧಾನ್ಯಗಳನ್ನು ಸರಬರಾಜು ಮಾಡುತ್ತಿರುವ ಗುತ್ತಿಗೆದಾರರು ಮಾಹಿತಿಯನ್ನು ಹೆಸರು ಸಹಿತ ಒದಗಿಸುವುದು;

(ಈ) ವಸತಿ ನಿಲಯಗಳಿಗೆ ಗುತ್ತಿಗೆದಾರರು ಕಳಪೆ ಮಟ್ಟದ ಆಹಾರ ಧಾನ್ಯ ಸರಬರಾಜು ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಆ ಗುತ್ತಿಗೆದಾರರು ಹೆಸರು ಮತ್ತು ಅವರ ವಿರುದ್ಧ ಯಾವ ಕ್ರಮ ಕೈಗೊಳ್ಳಲಾಗಿದೇ ? (ಮಾಹಿತಿ ಒದಗಿಸುವುದು)

## ಹೈದ್ರಾಬಾದ್ ಕರ್ನಾಟಕ ಭಾಗಕ್ಕೆ ಉಚಿತ ವೈ-ಫೈ ಪ್ರಾರಂಭಿಸುವುದು

**ಶ್ರೀ ರಘುನಾಥ ರಾವ್ ಮಲ್ಕಾಪೂರೆ (ವಿಧಾನಸಭೆಯಿಂದ ಚುನಾಯಿತರಾದವರು):-**

೧೨೦೨ (೧೪೫೨) ಮಾನ್ಯ ಯೋಜನೆ ಮತ್ತು ಸಾಂಖ್ಯಿಕ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಮತ್ತು ವಿಜ್ಞಾನ ಹಾಗೂ ತಂತ್ರಜ್ಞಾನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಹೈದ್ರಾಬಾದ್ ಕರ್ನಾಟಕ ಭಾಗದ ಜಿಲ್ಲೆಗಳಿಗೆ ಉಚಿತವಾಗಿ ವೈ-ಫೈ ಪ್ರಾರಂಭಿಸುವ ಯೋಜನೆಯ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

(ಆ) ಹಾಗಿದ್ದಲ್ಲಿ ಈ ಯೋಜನೆಯನ್ನು ಯಾವ ಯಾವ ನಗರಗಳಲ್ಲಿ ಹಾಗೂ ಸ್ಥಳಗಳಲ್ಲಿ ಜಾರಿಗೆ ತರಲಾಗುವುದು ;

(ಇ) ಉಚಿತ ವೈ–ಫೈ ಯೋಜನೆ ಪ್ರಾರಂಭಿಸಲು ಬಿಡುಗಡೆ ಮಾಡಲಾದ ಅನುದಾನ ಎಷ್ಟು ; ಈ ಯೋಜನೆ ಯಾವಾಗಿನಿಂದ ಜಾರಿಗೆ ತರಲಾಗುವುದು ; (ವಿವರ ಒದಗಿಸುವುದು)

(ಈ) ಈ ಯೋಜನೆ ಈಗಾಗಲೇ ಎಲ್ಲೆಲ್ಲಿ ಜಾರಿಗೆ ತರಲಾಗಿದೆ ; ಈ ಯೋಜನೆ ಜಾರಿಗೆ ಬಂದಲ್ಲಿ ಸರ್ಕಾರ ವೈ–ಫೈ ಬಳಕೆದಾರರಿಗೆ ನಿಗದಿಪಡಸುವ ಹಣ ಎಷ್ಟು ? (ವಿವರ ನೀಡುವುದು)

## ಬೀದರ್ ಜಿಲ್ಲೆಗೆ ಬಸ್‌ಗಳ ಕೊರತೆ

**ಶ್ರೀ ರಘುನಾಥ ರಾವ್ ಮಲ್ಕಾಪೂರೆ (ವಿಧಾನಸಭೆಯಿಂದ ಚುನಾಯಿತರಾದವರು):–**

೧೨೦೩ (೧೪೫೪) ಮಾನ್ಯ ಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೀದರ್ ಜಿಲ್ಲೆಗೆ ಕೆ.ಎಸ್.ಆರ್.ಟಿ.ಸಿ. ಬಸ್ ಘಟಕಗಳಲ್ಲಿ ಬಸ್ಸುಗಳ ಕೊರತೆಯಿದ್ದು, ಗ್ರಾಮಾಂತರ ಪ್ರದೇಶಗಳಿಗೆ ಸಂಚಾರಕ್ಕೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಘಟಕ ಮತ್ತು ತಾಲ್ಲೂಕುವಾರು ಮಾಹಿತಿ ಒದಗಿಸುವುದು;

(ಆ) ಹಾಗಿದ್ದಲ್ಲಿ, ಈ ಘಟಕದಲ್ಲಿ ಎಷ್ಟು ಬಸ್ಸುಗಳು ದುರಸ್ತಿಗೊಳಪಟ್ಟಿವೆ ಈ ಬಸ್ಸುಗಳನ್ನು ದುರಸ್ತಿಗೊಳಿಸಿ ಸಾರ್ವಜನಿಕ ಸಂಚಾರಕ್ಕೆ ಅನುಕೂಲ ಕಲ್ಪಿಸಿಕೊಡದಿರಲು ಕಾರಣಗಳೇನು ;

(ಇ) ಬೀದರ್ ಜಿಲ್ಲೆಯಲ್ಲಿನ ಘಟಕಗಳಿಗೆ ಹೊಸ ಬಸ್ಸುಗಳನ್ನು ನೀಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

(ಈ) ಹಾಗಿದ್ದಲ್ಲಿ, ಪ್ರಸ್ತುತ ಸಾಲಿನಲ್ಲಿ ಎಷ್ಟು ಹೊಸ ಬಸ್ಸುಗಳನ್ನು ನೀಡಲಾಗುವುದು ? (ಪೂರ್ಣ ವಿವರ ನೀಡುವುದು)

## ಬೀದರ್ ಜಿಲ್ಲೆಯಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಬಗ್ಗೆ

**ಶ್ರೀ ರಘುನಾಥ ರಾವ್ ಮಲ್ಕಾಪೂರೆ (ವಿಧಾನಸಭೆಯಿಂದ ಚುನಾಯಿತರಾದವರು):-**

೧೨೦೪ (೧೪೫೫) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬೀದರ್ ಜಿಲ್ಲೆಯಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಸಂಖ್ಯೆ ಎಷ್ಟು ; (ತಾಲ್ಲೂಕುವಾರು ಮಾಹಿತಿ ನೀಡುವುದು)

(ಆ) ಸದರಿ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಯಾವ ಯಾವ ಗ್ರಾಮಗಳಲ್ಲಿವೆ ; ಅಲ್ಲಿ ಕಾರ್ಯನಿರ್ವಹಿಸುತ್ತಿರುವ ವೈದ್ಯರ ಹಾಗೂ ಸಿಬ್ಬಂದಿಗಳ ಸಂಖ್ಯೆ ಎಷ್ಟು ;

(ಇ) ಪ್ರಾಥಮಿಕ ಕೇಂದ್ರಗಳಲ್ಲಿ ಸಾರ್ವಜನಿಕರಿಗೆ ಸೂಕ್ತ ಚಿಕಿತ್ಸೆ ದೊರೆಯದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ ಈ ನಿಟ್ಟಿನಲ್ಲಿ ಕೈಗೊಂಡಿರುವ ಕ್ರಮಗಳಾವುವು ? (ವಿವರ ನೀಡುವುದು)

## ವಿಜಯಾಪುರ ಜಿಲ್ಲೆಯ N.E.K.R.T.C. ವಿಜಯಾಪುರ ವಿಭಾಗದ ಡಿಪೋಗಳ ಕುರಿತು

**ಶ್ರೀ ಅರುಣ ಶಹಾಪುರ ( ಶಿಕ್ಷಕರ ಕ್ಷೇತ್ರ ):-**

೧೨೦೫ (೧೪೫೭) ಮಾನ್ಯ ಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ವಿಜಯಾಪುರ ಜಿಲ್ಲೆ N.E.K.R.T.C. ವಿಜಯಾಪುರ ವಿಭಾಗದಲ್ಲಿ ಎಷ್ಟು ಡಿಪೋಗಳಿವೆ ; ಅವು ಎಲ್ಲೆಲ್ಲಿವೆ; ಡಿಪೋವಾರು ಒದಗಿಸಿರುವ ಮೂಲಭೂತ ಸೌಕರ್ಯಗಳು, ವಾಹನಗಳು, ಅವುಗಳ ಸ್ಥಿತಿಗತಿ, ಅಲ್ಲಿರುವಂತಹ ಉದ್ಯೋಗಿಗಳ ಹೆಸರು, ಹುದ್ದೆ ಸಂಪೂರ್ಣ ವಿವರ ನೀಡುವುದು ;

(ಆ) ವಾಹನಗಳ ಮಾದರಿ, ಚಲಿಸಿರುವ ಕಿ.ಮೀ. ಸಹಿತ ವಾಹನದ ಸ್ಥಿತಿಗತಿ ಬಗ್ಗೆ ವಿವರ ನೀಡುವುದು ;

(ಇ) ವಾಹನಗಳನ್ನು scrap ಎಂದು ಪರಿಗಣಿಸಲು ಇರುವ ನಿಯಮಾವಳಿಗಳೇನು ?

## ರಾಜೀವ್ ಗಾಂಧಿ ವಿಶ್ವ ವಿದ್ಯಾಲಯದಡಿ ಇರುವ ಕಾಲೇಜುಗಳ ಕುರಿತು

**ಶ್ರೀ ಅರುಣ ಶಹಾಪುರ ( ಶಿಕ್ಷಕರ ಕ್ಷೇತ್ರ ):-**

೧೨೦೬ (೧೪೫೮) ಮಾನ್ಯ ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜೀವ್ ಗಾಂಧಿ ವಿಶ್ವ ವಿದ್ಯಾಲಯದಡಿ ಯಾವ ಯಾವ ವೈದ್ಯಕೀಯ ವಿಭಾಗಗಳು, ಯಾವ ಯಾವ ಕಾಲೇಜುಗಳ ಸಂಲಗ್ನಗೊಂಡಿವೆ ; (ಹೆಸರು, ವಿಳಾಸ ಪಟ್ಟಿ ಒದಗಿಸುವುದು)

(ಆ) ಇದರಲ್ಲಿ ಕಳೆದ ೦೩ ವರ್ಷದ ಯಾವ ಯಾವ ಬ್ರಾಂಚಿನಲ್ಲಿ ಎಷ್ಟು ಮೊತ್ತವನ್ನು ಬಾಕಿ ಉಳಿಸಿಕೊಂಡಿದ್ದಾರೆ; ವಿವರ ನೀಡುವುದು ದಿನಾಂಕ ೨೮-೦೨-೨೦೧೫ ಕ್ಕೆ ಅನ್ವಯಿಸುವಂತೆ ವಿವರ ನೀಡುವುದು ?

## ನಿಗಮ ಮಂಡಳಿಗಳಿಂದ ಒದಗಿಸಿರುವ ಸೌಲಭ್ಯ ಕುರಿತು

**ಶ್ರೀ ಅರುಣ ಶಹಾಪುರ ( ಶಿಕ್ಷಕರ ಕ್ಷೇತ್ರ ):-**

೧೨೦೭ (೧೪೫೭) ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕಳೆದ ೨ ವರ್ಷಗಳಲ್ಲಿ ಅಭಿವೃದ್ಧಿ ನಿಗಮ, ದೇವರಾಜ ಅರಸು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬಂಚಾರಾ ಅಭಿವೃದ್ಧಿ ನಿಗಮಗಳಿಂದ ವಿಜಯಾಪುರ, ಬಾಗಲಕೋಟೆ, ಬೆಳಗಾವಿ ಜಿಲ್ಲೆಗಳಿಗೆ ಯಾವ ಯಾವ ಸೌಲಭ್ಯಗಳನ್ನು ಒದಗಿಸಲಾಗಿದೆ. ಈ ಯೋಜನೆಗಳ ಫಲಾನುಭವಿಗಳ ಸಂಖ್ಯೆ ಎಷ್ಟು ; ನಿಗಮವಾರು, ಯೋಜನೆವಾರು, ವರ್ಷವಾರು ವಿವರ ನೀಡುವುದು ;

(ಆ) ಮುಕ್ತಾಯಗೊಂಡಿರುವ ಯೋಜನೆಗಳು ಯಾವುವು ; ಪ್ರಗತಿಯಲ್ಲಿರುವ ಯೋಜನೆಗಳು ಯಾವುವು ; ಬಾಕಿ ಉಳಿದಿರುವ ಯೋಜನೆಗಳು ಯಾವುವು ;

(ಇ) ಬಾಕಿ ಇರುವ ಯೋಜನೆಗಳ ಸ್ಥಿತಿಗತಿಯ ವಿವರ ನೀಡುವುದು ?

## ರಾಜ್ಯದಲ್ಲಿ ಪಡಿತರ ವ್ಯವಸ್ಥೆಯ ಮೂಲಕ ಜೋಳ ವಿತರಣೆ ಕುರಿತು

**ಶ್ರೀ ಅರುಣ ಶಹಾಪುರ ( ಶಿಕ್ಷಕರ ಕ್ಷೇತ್ರ ):-**

೧೨೦೮ (೧೪೬೦) ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದ ಯಾವ ಯಾವ ಜಿಲ್ಲೆಗಳಲ್ಲಿ ಪಡಿತರ ವ್ಯವಸ್ಥೆಯ ಮೂಲಕ ಜೋಳ ಒದಗಿಸುವ ಪ್ರಸ್ತಾವನೆ ಇದೆ ;

(ಆ) ಇದಕ್ಕೆ ಅಂದಾಜು ಎಷ್ಟು ಪ್ರಮಾಣದ ಜೋಳದ ಅವಶ್ಯಕತೆ ಇದೆ;

(ಇ) ಈ ನಿಟ್ಟಿನಲ್ಲಿ ತೆಗೆದುಕೊಂಡಿರುವ ಕ್ರಮಗಳೇನು ; ಸ್ಥಾಪಿಸುವ ಗುರಿ ಎಷ್ಟು ?

## ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಖಾಲಿ ಇರುವ ವೈದ್ಯಾಧಿಕಾರಿಗಳ ಹಾಗೂ ಇತರೆ ಹುದ್ದೆಗಳನ್ನು ತುಂಬುವ ಬಗ್ಗೆ

**ಶ್ರೀ ಮಹಂತೇಶ್ ಶಿವಾನಂದ ಕೌಜಲಗಿ (ಪದವೀಧರರ ಕ್ಷೇತ್ರ):-**

೧೨೦೯ (೧೪೬೫) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಸಂಖ್ಯೆ ಎಷ್ಟು; ಸದರಿ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಖಾಲಿ ಇರುವ

ವೈದ್ಯಾಧಿಕಾರಿಗಳ ಸಂಖ್ಯೆ ಎಷ್ಟು ; (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ಬೆಳಗಾವಿ, ಬಾಗಲಕೋಟೆ ಹಾಗೂ ವಿಜಯಾಪುರ ಜಿಲ್ಲೆಗಳಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಸಂಖ್ಯೆ ಎಷ್ಟು ; (ತಾಲ್ಲೂಕುವಾರು ಮಾಹಿತಿ ನೀಡುವುದು)

(ಇ) ಖಾಲಿ ಇರುವ ವೈದ್ಯಾಧಿಕಾರಿಗಳ ಹುದ್ದೆಗಳನ್ನು ಮತ್ತು ಉಳಿದ ಹುದ್ದೆಗಳನ್ನು ತುಂಬಲು ಯಾವ ಕ್ರಮ ಕೈಗೊಳ್ಳಲಾಗಿದೆ ;

(ಈ) ಬೆಳಗಾವಿ ಜಿಲ್ಲೆಯಲ್ಲಿ ಎಷ್ಟು ಡಯಾಲಿಸಿಸ್ ಕೇಂದ್ರಗಳು ಮಂಜೂರಾಗಿರುತ್ತವೆ ; ಅದರಲ್ಲಿ ಈಗಾಗಲೇ ಎಷ್ಟು ಕೇಂದ್ರಗಳು ಪ್ರಾರಂಭವಾಗಿರುತ್ತದೆ ;

(ಉ) ಬೆಳಗಾವಿ ಜಿಲ್ಲೆ ಬೈಲಹೊಂಗಲ ಸರ್ಕಾರಿ ಆಸ್ಪತ್ರೆಯಲ್ಲಿ ಡಯಾಲಿಸಿಸ್ ಕೇಂದ್ರವನ್ನು ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗಿದೆ ?

## ಬೆಳಗಾವಿಯಲ್ಲಿ ಭಾರಿ ವಾಹನ ಚಾಲನಾ ತರಬೇತಿ ಕೇಂದ್ರ ಸ್ಥಾಪಿಸುವ ಬಗ್ಗೆ

**ಶ್ರೀ ಮಹಂತೇಶ್ ಶಿವಾನಂದ ಕೌಜಲಗಿ (ಪದವೀಧರರ ಕ್ಷೇತ್ರ):-**

೧೨೧೦ (೧೪೬೩) ಮಾನ್ಯ ಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬೆಂಗಳೂರು ಹಾಗೂ ಹುಬ್ಬಳ್ಳಿ-ಧಾರವಾಡದಲ್ಲಿ ವಸತಿ ಸಹಿತ ಭಾರಿ ವಾಹನಗಳ ಚಾಲನಾ ತರಬೇತಿ ಕೇಂದ್ರವನ್ನು ಸಾರಿಗೆ ಇಲಾಖೆಯಿಂದ ಪ್ರಾರಂಭಿಸಲಾಗುವುದೆಂಬ ಸಂಗತಿ ನಿಜವೇ;

(ಆ) ಅಂಥದೊಂದು ತರಬೇತಿ ಕೇಂದ್ರವನ್ನು ಬೆಳಗಾವಿಯಲ್ಲಿಯೂ ಸಹ ಪ್ರಾರಂಭಿಸಲು ಪರಿಶೀಲಿಸಲಾಗುವುದೇ;

(ಇ) ಈ ತರಬೇತಿ ಕೇಂದ್ರದಲ್ಲಿ ಯಾವ ಯಾವ ಸೌಲಭ್ಯಗಳು ಇರುತ್ತವೆ; ಹಾಗೂ ಯಾವ ಯಾವ ತರಬೇತಿಗಳನ್ನು ನೀಡಲಾಗುತ್ತದೆ;

(ಈ) ಈ ತರಬೇತಿ ಕೇಂದ್ರದಲ್ಲಿ ಯಾರಿಗೆ ಪ್ರವೇಶ ನೀಡಲಾಗುವುದು? (ವಿವರ ನೀಡುವುದು)

## ಬಡವರಿಗೆ ಕಡಿಮೆ ದರದಲ್ಲಿ ಇಡ್ಲಿ, ಚಿತ್ರಾನ್ನದ ಕ್ಯಾಂಟಿನ್ ತೆರೆಯುವ ಬಗ್ಗೆ

**ಶ್ರೀ ಮಹಂತೇಶ್ ಶಿವಾನಂದ ಕೌಜಲಗಿ (ಪದವೀಧರರ ಕ್ಷೇತ್ರ):-**

೧೨೧೧ (೧೪೬೪) ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬಡವರಿಗೆ ಕಡಿಮೆ ದರದಲ್ಲಿ ಇಡ್ಲಿ, ಚಿತ್ರಾನ್ನ ಒದಗಿಸುವ ಕ್ಯಾಂಟಿನ್ ತೆರೆಯಲು ರಾಜ್ಯ ಯೋಜನಾ ಆಯೋಗವು ರಾಜ್ಯ ಸರ್ಕಾರಕ್ಕೆ ಶಿಫಾರಸ್ಸು ಮಾಡಿದೆಯೇ;

(ಆ) ಇದರ ಬಗ್ಗೆ ಯೋಜನಾ ಆಯೋಗ ಮಾಡಿರುವ ಶಿಫಾರಸ್ಸುಗಳು ಯಾವುವು ;

(ಇ) ಈ ಯೋಜನೆ ಕೈಗೊಳ್ಳುವುದರಿಂದ ಸರ್ಕಾರಕ್ಕೆ ಆಗುವ ಆರ್ಥಿಕ ಹೊರೆ ಎಷ್ಟು ;

(ಈ) ಬಡವರಿಗೆ ಕಡಿಮೆ ದರದಲ್ಲಿ ಇಡ್ಲಿ, ಚಿತ್ರಾನ್ನ ಕೊಡುವ ಯೋಜನೆ ಸರ್ಕಾರದ ಮುಂದೆ ಇರುವುದೇ ಪ್ರಸ್ತುತ ಈ ಯೋಜನೆಯು ಯಾವ ಹಂತದಲ್ಲಿ ಇರುವುದು ;

(ಉ) ಕಡಿಮೆ ದರದಲ್ಲಿ ಇಡ್ಲಿ, ಚಿತ್ರಾನ್ನ, ಮೊಸರನ್ನ ಅನ್ನು ಯಾವ ರಾಜ್ಯಗಳಲ್ಲಿ ಹಾಗೂ ಯಾವ ದರದಲ್ಲಿ ಕೊಡಲಾಗುತ್ತಿದೆ ?

**ಎ.ಪಿ.ಎಂ. ಕಾರ್ಡುದಾರರಿಗೂ ಪಡಿತರ ಆಹಾರ ಒದಗಿಸುವ ಬಗ್ಗೆ**

**ಶ್ರೀ ಮಹಾಂತೇಶ್ ಶಿವಾನಂದ ಕೌಜಲಗಿ** (ಪದವೀಧರರ ಕ್ಷೇತ್ರ) :-

೧೨೧೨ (೧೪೬೨) ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ರಾಜ್ಯದಲ್ಲಿ ಎ.ಪಿ.ಎಲ್. ಕಾರ್ಡುದಾರರಿಗೂ ಸಹ ಪಡಿತರ ಒದಗಿಸುವ ಯೋಜನೆ ಸರ್ಕಾರದ ಮುಂದಿದೆಯೇ ;

(ಆ) ಇವರಿಗೆ ಪಡಿತರ ಆಹಾರ ಒದಗಿಸುವುದರಿಂದ ಸರ್ಕಾರದ ಮೇಲೆ ಬೀಳಲಿರುವ ಆರ್ಥಿಕ ಹೊರೆ ಎಷ್ಟು ;

(ಇ) ಈ ಯೋಜನೆಯನ್ನು ಎಂದಿನಿಂದ ಜಾರಿಗೆ ತರಲಾಗುವುದು ; (ವಿವರ ನೀಡುವುದು)

(ಈ) ಇವರಿಗೆ ಯಾವ-ಯಾವ ಧಾನ್ಯಗಳನ್ನು ಎಷ್ಟು-ಎಷ್ಟು ಬೆಲೆಗೆ ವಿತರಿಸಲಾಗುವುದು ?

## ನ್ಯಾಯಬೆಲೆ ಅಂಗಡಿ ಕುರಿತು

**ಶ್ರೀ ಎನ್. ಎಸ್. ಬೋಸ್‌ರಾಜು (ವಿಧಾನಸಭೆಯಿಂದ ಚುನಾಯಿತರಾದವರು):-**

೧೨೧೩ (೧೪೭೦) ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ರಾಯಚೂರು ಜಿಲ್ಲೆಯಲ್ಲಿರುವ ಒಟ್ಟು ಎ.ಪಿ.ಎಲ್. ಮತ್ತು ಬಿ.ಪಿ.ಎಲ್. ಕಾರ್ಡುದಾರರ ಸಂಖ್ಯೆ ಎಷ್ಟು ; (ತಾಲ್ಲೂಕುವಾರು ಮಾಹಿತಿ ಒದಗಿಸುವುದು) ನೀಡಲು ಉದ್ದೇಶಿಸಿರುವ ಬಿ.ಪಿ.ಎಲ್. ಮತ್ತು ಎ.ಪಿ.ಎಲ್. ಕಾರ್ಡುಗಳ ಸಂಖ್ಯೆ ಎಷ್ಟು ; (ವಿವರ ಒದಗಿಸುವುದು)

(ಆ) ರಾಯಚೂರು ಮತ್ತು ಮಾನ್ವಿ ತಾಲ್ಲೂಕುಗಳಲ್ಲಿ ಇರುವ ಒಟ್ಟು ನ್ಯಾಯಬೆಲೆ ಅಂಗಡಿಗಳ ಸಂಖ್ಯೆ ಎಷ್ಟು ; (ವಿವರ ಒದಗಿಸುವುದು) ನ್ಯಾಯಬೆಲೆ ಅಂಗಡಿಗಳನ್ನು ಹೆಚ್ಚಿಸುವ ಪ್ರಸ್ತಾಪ ಸರ್ಕಾರದ ಮುಂದಿದೆಯೇ ; ಹಾಗಿದ್ದಲ್ಲಿ, ಎಲ್ಲೆಲ್ಲಿ ಪ್ರಾರಂಭಿಸಲಾಗುವುದು ; (ವಿವರ ಒದಗಿಸುವುದು)

(ಇ) ಸ್ತ್ರೀ ಶಕ್ತಿ ಮತ್ತು ಸಹಕಾರ ಸಂಘಗಳಿಗೆ ನ್ಯಾಯಬೆಲೆ ಅಂಗಡಿಗಳನ್ನು ಹಂಚಿಕೆ ಮಾಡುವ ಉದ್ದೇಶ ಸರ್ಕಾರದ ಮುಂದಿದೆಯೇ ; ಹಾಗಿದ್ದಲ್ಲಿ, ಎಲ್ಲೆಲ್ಲಿ ಯಾವಾಗ ಪ್ರಾರಂಭಿಸಲಾಗುವುದು ; (ವಿವರ ಒದಗಿಸುವುದು)

(ಈ) ಆಹಾರ ಧಾನ್ಯವನ್ನು ಗೋದಾಮುಗಳಿಂದ ಸ್ಟಾಕ್ ಪಾಯಿಂಟ್‌ಗಳಿಗೆ ಸಾಗಿಸುವ ವ್ಯವಸ್ಥೆಯಲ್ಲಿ ಬದಲಾವಣೆ ತರುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ; ಹಾಗಿದ್ದಲ್ಲಿ, ಸಾಗಣೆಯಲ್ಲಿ ಆಗುತ್ತಿರುವ ತೊಂದರೆಯನ್ನು ನಿವಾರಿಸಲು ಸರ್ಕಾರ ಕೈಗೊಂಡ ಕ್ರಮಗಳೇನು ? (ವಿವರ ಒದಗಿಸುವುದು)

## ರಾಯಚೂರು ಜಿಲ್ಲೆಯ ವಸತಿ ನಿಲಯಗಳ ಬಗ್ಗೆ

**ಶ್ರೀ ಎನ್. ಎಸ್. ಬೋಸ್‌ರಾಜು (ವಿಧಾನಸಭೆಯಿಂದ ಚುನಾಯಿತರಾದವರು):–**

೧೨೧೪ (೧೪೬೯) ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಯಚೂರು ಜಿಲ್ಲೆಯಲ್ಲಿ ಇರುವ ಒಟ್ಟು ವಸತಿ ನಿಲಯಗಳ ಸಂಖ್ಯೆ ಎಷ್ಟು ; ಎಷ್ಟು ವಸತಿ ನಿಲಯಗಳು ಸ್ವಂತ ಕಟ್ಟಡದಲ್ಲಿವೆ ಮತ್ತು ಎಷ್ಟು ವಸತಿ ನಿಲಯ ಹಾಸ್ಟೆಲ್‌ಗಳು ಖಾಸಗಿ ಕಟ್ಟಡಗಳಲ್ಲಿ ನಡೆಯುತ್ತಿವೆ ; ಖಾಸಗಿ ಕಟ್ಟಡಗಳಲ್ಲಿ ಇರುವ ಹಾಸ್ಟೆಲ್‌ಗಳಿಗೆ ಸ್ವಂತ ಕಟ್ಟಡಗಳನ್ನು ನಿರ್ಮಿಸಲು ಸರ್ಕಾರ ಕೈಗೊಂಡ ಕ್ರಮಗಳೇನು ; (ಪೂರ್ಣ ವಿವರ ಒದಗಿಸುವುದು)

(ಆ) ರಾಯಚೂರು ಜಿಲ್ಲೆಯಲ್ಲಿ ವಿವಿಧ ವಸತಿನಿಲಯಗಳಲ್ಲಿರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು ; ವಿದ್ಯಾರ್ಥಿಗಳಿಗೆ ಅಗತ್ಯ ವಸತಿ ನಿಲಯ ಹಾಸ್ಟೆಲ್ ಸೌಲಭ್ಯ ಕಲ್ಪಿಸಲು ಇಲಾಖೆಯಿಂದ ಡಿಮ್ಯಾಂಡ್ ಸರ್ವೆ ನಡೆಸಲಾಗಿದೆಯೇ ; (ವಿವರ ಒದಗಿಸುವುದು)

(ಇ) ೨೦೧೫-೧೬ನೇ ಸಾಲಿನಲ್ಲಿ ರಾಯಚೂರು ಜಿಲ್ಲೆಯ ರಾಯಚೂರು, ದೇವದುರ್ಗ ಹಾಗೂ ಮಾನ್ವಿ ತಾಲ್ಲೂಕುಗಳಲ್ಲಿ ಹೊಸದಾಗಿ ವಸತಿ ನಿಲಯ ಹಾಸ್ಟೆಲ್‌ಗಳನ್ನು ಪ್ರಾರಂಭಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ; ಹಾಗಿದ್ದಲ್ಲಿ, ಮೇಲ್ಕಂಡ ತಾಲ್ಲೂಕುಗಳಲ್ಲಿ ಎಲ್ಲೆಲ್ಲಿ ವಸತಿನಿಲಯ ಹಾಸ್ಟೆಲ್‌ಗಳನ್ನು ಪ್ರಾರಂಭಿಸಲಾಗುವುದು ? (ವಿವರ ಒದಗಿಸುವುದು)

## ಹೊಸ ಬಸ್‌ಗಳನ್ನು ಹಂಚಿಕೆ ಮಾಡುವ ಬಗ್ಗೆ

**ಶ್ರೀ ಎನ್. ಎಸ್. ಬೋಸ್‌ರಾಜು (ವಿಧಾನಸಭೆಯಿಂದ ಚುನಾಯಿತರಾದವರು):-**

೧೨೧೫ (೧೪೬೮) ಮಾನ್ಯ ಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಯಚೂರು ವಿಭಾಗದಲ್ಲಿಯ ೧೦೦ಕ್ಕೂ ಹೆಚ್ಚು ವೇಗದೂತ ಬಸ್ಸುಗಳು ಅತ್ಯಂತ ಹಳೆಯದಾಗಿದ್ದು ಪ್ರಯಾಣಕ್ಕೆ ಅನಾನುಕೂಲವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ, ಸದರಿ ಬಸ್ಸುಗಳನ್ನು ಬದಲಾಯಿಸಿ ಹೊಸ ಬಸ್ಸುಗಳ ಪ್ರಸ್ತಾಪ ಸರ್ಕಾರದ ಮುಂದಿದೆಯೇ ;

(ಇ) ಹಾಗಿದ್ದಲ್ಲಿ, ಯಾವಾಗ ಒದಗಿಸಲಾಗುವುದು ; (ವಿವರ ಒದಗಿಸುವುದು)

(ಈ) ರಾಯಚೂರು ವಿಭಾಗದಲ್ಲಿ ಇರುವ ಒಟ್ಟು ಹುದ್ದೆಗಳು ಎಷ್ಟು ; ಎಷ್ಟು ಹುದ್ದೆಗಳು ಖಾಲಿ ಇವೆ ; ಅವುಗಳನ್ನು ತುಂಬಲು ಕ್ರಮ ಕೈಗೊಳ್ಳಲಾಗುವುದು ಯಾವಾಗ ; (ವಿವರ ಒದಗಿಸುವುದು)

(ಉ) ರಾಯಚೂರು ಜಿಲ್ಲೆಯ ವಿವಿಧ ತಾಲ್ಲೂಕು ಬಸ್ ನಿಲ್ದಾಣಗಳಲ್ಲಿ ಅಗತ್ಯ ಶೌಚಾಲಯ ಹಾಗೂ ಕುಡಿಯುವ ನೀರಿನ ಸಮಸ್ಯೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಹಾಗಿದ್ದಲ್ಲಿ, ಅಗತ್ಯ ಶೌಚಾಲಯ ಹಾಗೂ ಕುಡಿಯುವ ನೀರಿನ ವ್ಯವಸ್ಥೆಯನ್ನು ಒದಗಿಸಲು ಸರ್ಕಾರ ಕೈಗೊಂಡ ಕ್ರಮಗಳೇನು ? (ವಿವರ ಒದಗಿಸುವುದು)

## ರಿಮ್ಸ್‌ನಲ್ಲಿಯ ಖಾಲಿ ಹುದ್ದೆಯ ಕುರಿತು

**ಶ್ರೀ ಎನ್. ಎಸ್. ಬೋಸ್‌ರಾಜು (ವಿಧಾನಸಭೆಯಿಂದ ಚುನಾಯಿತರಾದವರು):-**

೧೨೧೬ (೧೪೬೭) ಮಾನ್ಯ ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಯಚೂರಿನಲ್ಲಿರುವ ರಿಮ್ಸ್ ಆಸ್ಪತ್ರೆಯಲ್ಲಿ ಮಂಜೂರಾದ ಒಟ್ಟು ಹುದ್ದೆಗಳ ಸಂಖ್ಯೆ ಎಷ್ಟು ; ಪ್ರಸ್ತುತ ಎಷ್ಟು ಹುದ್ದೆಗಳು ಖಾಲಿ ಇವೆ ; ವೈದ್ಯಕೀಯ, ಅರೆವೈದ್ಯಕೀಯ ಮತ್ತಿತರ ಸಿಬ್ಬಂದಿಯ ವಿವರ ಒದಗಿಸುವುದು ;

(ಆ) ಕೇಂದ್ರ ಸರ್ಕಾರದಿಂದ ಕರ್ನಾಟಕದಲ್ಲಿ ಪ್ರಾರಂಭಿಸಲು ಉದ್ದೇಶಿಸಿರುವ ಏಮ್ಸ್ ಶಾಖೆಯನ್ನು ಹಿಂದುಳಿದ ಜಿಲ್ಲೆಯಾದ ರಾಯಚೂರು ಜಿಲ್ಲೆಯಲ್ಲಿ ಪ್ರಾರಂಭಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ? (ವಿವರ ಒದಗಿಸುವುದು)

## ಐ.ಟಿ. ಪಾರ್ಕ್ ಸ್ಥಾಪನೆ ಕುರಿತು

**ಶ್ರೀ ಎನ್. ಎಸ್. ಬೋಸ್‌ರಾಜು (ವಿಧಾನಸಭೆಯಿಂದ ಚುನಾಯಿತರಾದವರು):–**

೧೨೧೭ (೧೪೬೬) ಮಾನ್ಯ ಯೋಜನೆ ಮತ್ತು ಸಾಂಖ್ಯಿಕ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಮತ್ತು ವಿಜ್ಞಾನ ಹಾಗೂ ತಂತ್ರಜ್ಞಾನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಯಚೂರು ಜಿಲ್ಲೆಯಲ್ಲಿ ೨೦೧೪–೧೫ನೇ ಸಾಲಿನಲ್ಲಿ ಐ.ಟಿ. ಪಾರ್ಕ್ ಸ್ಥಾಪಿಸುವ ಯಾವುದಾದರೂ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ;

(ಆ) ಹಾಗಿದ್ದಲ್ಲಿ, ಹಿಂದುಳಿದ ಹೈದ್ರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿಗಾಗಿ ಐ.ಟಿ. ಪಾರ್ಕ್‌ನ್ನು ಸ್ಥಾಪಿಸುವ ಪ್ರಸ್ತಾಪ ಸರ್ಕಾರದ ಮುಂದಿದೆಯೇ ;

(ಇ) ಹಾಗಿದ್ದಲ್ಲಿ, ಎಲ್ಲೆಲ್ಲಿ ಐ.ಟಿ. ಪಾರ್ಕ್‌ಗಳನ್ನು ಸ್ಥಾಪಿಸಲಾಗುವುದು ? (ವಿವರ ಒದಗಿಸುವುದು)

## ರಾಜ್ಯದಲ್ಲಿ ಐ.ಟಿ. ಉದ್ಯಮವನ್ನು ಇತರೆ ಜಿಲ್ಲೆಗಳಲ್ಲಿ ಆರಂಭಿಸುವ ಬಗ್ಗೆ

**ಶ್ರೀ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ) :–**

೧೨೧೮ (೧೪೭೩) ಮಾನ್ಯ ಯೋಜನೆ ಮತ್ತು ಸಾಂಖ್ಯಿಕ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಮತ್ತು ವಿಜ್ಞಾನ ಹಾಗೂ ತಂತ್ರಜ್ಞಾನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಐ.ಟಿ. ಉದ್ಯಮ ಪ್ರತಿಶತ ೯೦ರಷ್ಟು ಬೆಂಗಳೂರಿನಲ್ಲಿ ಕೇಂದ್ರೀಕೃತವಾಗಿದ್ದು, ಇದನ್ನು ರಾಜ್ಯದ ಇತರ ಜಿಲ್ಲಾ ಕೇಂದ್ರಗಳಿಗೆ

ವಿಸ್ತರಿಸಿ ಆಯಾ ಭಾಗದ ನಿರುದ್ಯೋಗಿ ಯುವಕರಿಗೆ ಉದ್ಯೋಗಾವಕಾಶ ಕಲ್ಪಿಸಲು ಹಾಗೂ ಬೆಂಗಳೂರಿನಲ್ಲಿ ಜನದಟ್ಟಣೆಯನ್ನು ಕಡಿಮೆಯಾಗಿಸುವುದರ ಬಗ್ಗೆ ಸರ್ಕಾರ ಯೋಚಿಸಿದೆಯೇ ;

(ಆ) ಹಾಗಿದ್ದಲ್ಲಿ, ಈ ಉದ್ಯಮವನ್ನು ರಾಜ್ಯದ ಯಾವ ಯಾವ ಜಿಲ್ಲೆಗಳಲ್ಲಿ ಆರಂಭಿಸಲು ಈ ಹಣಕಾಸು ವರ್ಷದಲ್ಲಿ ಯೋಜಿಸಲಾಗಿದೆ ;

(ಇ) ಡಾ|| ಡಿ.ಎಂ. ನಂಜುಂಡಪ್ಪ ವರದಿಯನ್ವಯ ರಾಜ್ಯದ ಹಿಂದುಳಿದ ಜಿಲ್ಲಾ ಮತ್ತು ತಾಲ್ಲೂಕುಗಳಲ್ಲಿ ಈ ಉದ್ಯಮವನ್ನು ಆರಂಭಿಸಿ ಪ್ರಾದೇಶಿಕ ತಾರತಮ್ಯ ಹೋಗಲಾಡಿಸಲು ಸರ್ಕಾರ ಏನು ಕ್ರಮ ಕೈಗೊಂಡಿದೆ ;

(ಈ) ಬೆಂಗಳೂರು ನಗರದಲ್ಲಿ ಈಗ ವೈಫೈ ಸೇವೆ ನೀಡುವ ಗುರಿ ಹೊಂದಲಾಗಿದ್ದು, ಈ ಸೇವೆಯನ್ನು ಪ್ರಾಯೋಗಿಕವಾಗಿ ಇತರ ಪ್ರಮುಖ ಜಿಲ್ಲಾ ಕೇಂದ್ರಗಳಿಗೂ ವಿಸ್ತರಿಸುವ ಯೋಜನೆ ಸರ್ಕಾರದ ಮುಂದಿದೆಯೇ ?

## ಭ್ರೂಣ ಲಿಂಗಪತ್ತೆ ಕಾಯಿದೆ ಉಲ್ಲಂಘಿಸಿದ ಪ್ರಕರಣಗಳ ಕುರಿತು

**ಶ್ರೀ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ) :-**

೧೨೯ (೧೪೭೨) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ಚೀನದಿಂದ ಆಮದಾಗಿರುವ ಸ್ಕ್ಯಾನಿಂಗ್ ಯಂತ್ರಗಳ ಮೂಲಕ ಭ್ರೂಣ ಲಿಂಗ ಪತ್ತೆ ಮಾಡುತ್ತಿರುವುದು ಸರ್ಕಾರದ

ಗಮನಕ್ಕೆ ಬಂದಿದೆಯೇ ; ಇದುವರೆಗೆ ಭ್ರೂಣ ಲಿಂಗ ಪತ್ತೆ ಕಾಯಿದೆ ಉಲ್ಲಂಘಿಸಿದ ಎಷ್ಟು ಪ್ರಕರಣಗಳು ದಾಖಲಾಗಿವೆ ; ಎಷ್ಟು ಪ್ರಕರಣಗಳಲ್ಲಿ ಶಿಕ್ಷೆಯಾಗಿದೆ ;

(ಆ) ರಾಜ್ಯದಲ್ಲಿರುವ ಸ್ಕ್ಯಾನಿಂಗ್ ಸೆಂಟರ್‌ಗಳೆಷ್ಟು ; ಅಧಿಕೃತ ಮತ್ತು ಅನಧಿಕೃತ ಸ್ಕ್ಯಾನಿಂಗ್ ಸೆಂಟರ್‌ಗಳ ಜಿಲ್ಲಾವಾರು ಮಾಹಿತಿ ನೀಡುವುದು ;

(ಇ) ಸ್ಕ್ಯಾನಿಂಗ್ ಸೆಂಟರ್‌ಗಳಿಗೆ ಅನುಮತಿ ನೀಡಲು ಇರುವ ನಿಯಮಗಳೇನು ?

## ಬೆಂಗಳೂರಿನಲ್ಲಿರುವ ಕಿದ್ವಾಯಿ ಆಸ್ಪತ್ರೆಗಳನ್ನು ಬೇರೆ ಜಿಲ್ಲಾ ಕೇಂದ್ರಗಳಲ್ಲಿ ಪ್ರಾರಂಭಿಸುವ ಬಗ್ಗೆ

**ಶ್ರೀ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ) :-**

೧೨೨೦ (೧೪೭೧) ಮಾನ್ಯ ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬೆಂಗಳೂರಿನಲ್ಲಿರುವ ಕಿದ್ವಾಯಿ ಆಸ್ಪತ್ರೆಯ ಶಾಖೆಗಳನ್ನು ಹುಬ್ಬಳ್ಳಿ, ಬಳ್ಳಾರಿ, ಬೆಳಗಾವಿ, ಮೈಸೂರು ಮತ್ತು ಕಲಬುರ್ಗಿಯಲ್ಲಿ ಆರಂಭಿಸುವ ಯೋಜನೆ ಸರ್ಕಾರಕ್ಕಿದೆಯೇ ;

(ಆ) ಇದ್ದಲ್ಲಿ, ಇದಕ್ಕಾಗಿ ಈ ಆರ್ಥಿಕ ವರ್ಷದಲ್ಲಿ ಮೀಸಲಿಟ್ಟಿದ್ದ ಹಣವೆಷ್ಟು ; ಹಾಗೂ ಸದರಿ ಹಣವನ್ನು ಯಾವ ಯಾವ ಕಾಮಗಾರಿಗೆ ಖರ್ಚು ಮಾಡಲಾಗಿದೆ ;

(ಇ) ಈ ಶಾಖೆಗಳನ್ನು ಯಾವಾಗ ಆರಂಭ ಮಾಡಲಾಗುವುದು ;

(ಈ) ಈ ಶಾಖೆಗಳ ನಿರ್ವಹಣಾ ವೆಚ್ಚವನ್ನು ಭರಿಸಲು ಕೇಂದ್ರ ಹಾಗೂ ರಾಜ್ಯ ಸರ್ಕಾರದ ಅನುಪಾತವೆಷ್ಟು ?

## ಬೆಂಗಳೂರು ಮತ್ತು ಕಲಬುರಗಿಯ ಇಎಸ್ಐ ವೈದ್ಯಕೀಯ ಮಹಾ ವಿದ್ಯಾಲಯಗಳ ನಿರ್ವಹಣೆ ಕುರಿತು

**ಶ್ರೀ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ) :-**

೧೨೨೧ (೧೪೭೪) ಮಾನ್ಯ ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕೇಂದ್ರ ಸರ್ಕಾರವು ಕಲುಬುರಗಿಯ ಮತ್ತು ಬೆಂಗಳೂರಿನಲ್ಲಿರುವ ಇ.ಎಸ್.ಐ. ವೈದ್ಯಕೀಯ ಮಹಾವಿದ್ಯಾಲಯಗಳ ನಿರ್ವಹಣೆ ಜವಾಬ್ದಾರಿಯನ್ನು ರಾಜ್ಯ ಸರ್ಕಾರಕ್ಕೆ ವರ್ಗಾಯಿಸಲು ನಿರ್ಧರಿಸಿರುವುದು ನಿಜವೇ ;

(ಆ) ಇದ್ದಲ್ಲಿ, ಈ ವೈದ್ಯಕೀಯ ಕಾಲೇಜುಗಳಿಗೆ ಮುಂದಿನ ಶೈಕ್ಷಣಿಕ ವರ್ಷದಿಂದ ಪ್ರವೇಶ ನೀಡವಾಗ ಕೇಂದ್ರ ಮತ್ತು ರಾಜ್ಯ ಸರ್ಕಾರದ ಪಾಲು ಎಷ್ಟು ; ಹಾಗೂ ಪ್ರವೇಶ ನೀಡಲು ಅನುಸರಿಸುವ ಮಾನದಂಡಗಳೇನು ;

(ಇ) ಈ ಕಾಲೇಜುಗಳ ನಿರ್ವಹಣೆಗೆ ಆಗುವ ವೆಚ್ಚವನ್ನು ಯಾವ ಪ್ರಮಾಣದಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಭರಿಸಲಿವೆ ?

## ರಾಜ್ಯದಲ್ಲಿ ಹರಡುತ್ತಿರುವ ಹೆಚ್–೧ ಎನ್–೧ ರೋಗದ ಬಗ್ಗೆ

**ಶ್ರೀ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ) :–**

೧೨೨೨ (೧೪೭೫) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಹೆಚ್–೧ ಎನ್–೧ ಸಾಂಕ್ರಾಮಿಕ ರೋಗ ಹರಡಿರುವುದು ಸರ್ಕಾರದ ಗಮನದಲ್ಲಿದೆಯೇ ;

(ಆ) ಈ ಖಾಯಿಲೆಯ ಚಿಕಿತ್ಸೆಗೆ ಸರ್ಕಾರ ಸ್ಥಾಪಿಸಿರುವ ಚಿಕಿತ್ಸಾ ಕೇಂದ್ರಗಳ ಹಾಗೂ ಲಭ್ಯವಿರುವ ಔಷಧಿಗಳ ವಿವರ ನೀಡುವುದು ;

(ಇ) ರಾಜ್ಯದಲ್ಲಿ ಈ ಖಾಯಿಲೆಯು ಎಷ್ಟು ಜನರಿಗೆ ಹರಡಿರುವ ಬಗ್ಗೆ ಗುರುತಿಸಲಾಗಿದೆ ಹಾಗೂ ಎಷ್ಟು ಮಂದಿ ಸಾವನ್ನಪ್ಪಿದ್ದಾರೆ ? (ಜಿಲ್ಲಾವಾರು ಮಾಹಿತಿ ನೀಡುವುದು)

## ಬಿ.ಪಿ.ಎಲ್. ಕಾರ್ಡ್ ವಿತರಣೆ

**ಶ್ರೀ ವೀರಕುಮಾರ್ ಅಪ್ಪಾಸೊ ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೧೨೨೩ (೧೪೭೭) ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೆಳಗಾವಿ ಜಿಲ್ಲೆಯಲ್ಲಿರುವ ಅಂಗನವಾಡಿ ಮತ್ತು ಆಶಾ ಕಾರ್ಯಕರ್ತೆಯರ ಸಂಖ್ಯೆ ಎಷ್ಟು ;

(ಆ) ಸರ್ಕಾರ ಯೋಜನೆಗಳನ್ನು ಸಮರ್ಪಕವಾಗಿ ಜನತೆಗೆ ಮುಟ್ಟಿಸುವಲ್ಲಿ ಇವರು ಪ್ರಮುಖ ಪಾತ್ರ ವಹಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಹಾಗೂ ಸರ್ಕಾರ ಇವರಿಗೆ ನೀಡುತ್ತಿರುವ ಗೌರವಧನ ಎಷ್ಟು ;

(ಇ) ಎಷ್ಟು ಅಂಗನವಾಡಿ/ಆಶಾ ಕಾರ್ಯಕರ್ತೆಯರಿಗೆ ಬಿ.ಪಿ.ಎಲ್., ಪಡಿತರ ಚೀಟಿ ನೀಡಲು ಸರ್ಕಾರ ಕ್ರಮ ಕೈಗೊಂಡಿದೆ ?

## ಗಂಗಾಕಲ್ಯಾಣ ಯೋಜನೆ

**ಶ್ರೀ ವೀರಕುಮಾರ್ ಅಪ್ಪಾಸೊ ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-**

೧೨೨೪ (೧೪೭೬) ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ೨೦೧೪-೧೫ನೇ ಸಾಲಿನಲ್ಲಿ ಬೆಳಗಾವಿ ಜಿಲ್ಲೆಗೆ ಗಂಗಾ ಕಲ್ಯಾಣ ಯೋಜನೆ ಅಡಿಯಲ್ಲಿ ಎಷ್ಟು ಫಲಾನುಭವಿಗಳಿಗೆ ಯೋಜನೆಯ ಸೌಲಭ್ಯವನ್ನು ನೀಡಲಾಗಿದೆ ; (ತಾಲ್ಲೂಕುವಾರು ವಿವಿಧ ಯೋಜನೆವಾರು ಫಲಾನುಭವಿಗಳ ಹೆಸರುಗಳ ಸಮೇತ ವಿವರ ನೀಡುವುದು)

(ಆ) ಬೆಳಗಾವಿ ಜಿಲ್ಲೆಯ ಪ್ರತಿಯೊಂದು ವಿಧಾನ ಸಭಾ ಕ್ಷೇತ್ರದಲ್ಲಿ ಫಲಾನುಭವಿಗಳ ಸಂಖ್ಯೆ ಹೆಚ್ಚಿದ್ದು ಈ ಯೋಜನೆಯ ಸೌಲಭ್ಯವನ್ನು ಕಡಿಮೆ ಸಂಖ್ಯೆಯಲ್ಲಿ ನೀಡಲಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಮುಂದಿನ ಸಾಲಿನಲ್ಲಿ ಈ ಯೋಜನೆಯ ಗುರಿಯನ್ನು ಹೆಚ್ಚಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ ಹಾಗೂ ಸದರಿ ಯೋಜನೆಯ ಸೌಲಭ್ಯವನ್ನು ಫಲಾನುಭವಿಗಳಿಗೆ ನೀಡಲು ಕಾಲಮಿತಿಯನ್ನು ಸರ್ಕಾರ ನಿಗದಿಪಡಿಸಿದೆಯೇ ; ಹಾಗಿದ್ದಲ್ಲಿ, ನೀಡಿರುವ ಕಾಲಮಿತಿ ಎಷ್ಟು ?

## ಸುವರ್ಣ ಆರೋಗ್ಯ ಚೈತನ್ಯ ಯೋಜನೆ

**ಶ್ರೀ ವೀರಕುಮಾರ್ ಅಪ್ಪಾಸೊ ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-**

೧೨೨೫ (೧೫೭೯) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬೆಳಗಾವಿ ಜಿಲ್ಲೆಯಲ್ಲಿ ಸುವರ್ಣ ಆರೋಗ್ಯ ಚೈತನ್ಯ ಯೋಜನೆಯಡಿಯಲ್ಲಿ ಎಷ್ಟು ಮಕ್ಕಳಿಗೆ ಹಳದಿ ಕಾರ್ಡ್‌ನ್ನು ನೀಡುವ ಗುರಿ ಹೊಂದಲಾಗಿದೆ ;

(ಆ) ಈವರೆಗೆ ಎಷ್ಟು ಮಕ್ಕಳಿಗೆ ಹಳದಿ ಕಾರ್ಡ್‌ನ್ನು ವಿತರಿಸಲಾಗಿದೆ ;

(ಇ) ಬಾಕಿ ಇರುವ ಹಳದಿ ಕಾರ್ಡ್‌ಗಳ ಸಂಖ್ಯೆ ಎಷ್ಟು ; ವಿತರಿಸದೆ ಇರಲು ಕಾರಣಗಳೇನು ? (ತಾಲ್ಲೂಕುವಾರು ವಿವರ ನೀಡುವುದು)

## ಮೊರಾರ್ಜಿ ದೇಸಾಯಿ, ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಗಳಲ್ಲಿನ ಬೋಧಕರ ಖಾಯಮಾತಿ ಬಗ್ಗೆ

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ):-**

೧೨೨೬ (೧೪೭೮) ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಮೊರಾರ್ಜಿ ದೇಸಾಯಿ ಹಾಗೂ ಕಿತ್ತೂರು ರಾಣಿ ಚನ್ನಮ್ಮ ವಸತಿ ಶಾಲೆಗಳಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ನೇಮಕಗೊಂಡು

ಕಾರ್ಯನಿರ್ವಹಿಸುತ್ತಿರುವ ಬೋಧಕ ಖಾಯಂವಾತಿ ಮಾಡಿಕೊಳ್ಳುವಂತೆ ರಾಜ್ಯ ಉಚ್ಚ ನ್ಯಾಯಾಲಯ ಆದೇಶ ನೀಡಿದೆಯೇ ;

(ಆ) ಹಾಗಾದರೆ ಎಷ್ಟು ಮಂದಿ ಬೋಧಕರಿಗೆ ಈ ತೀರ್ಪು ಅನ್ವಯವಾಗುತ್ತದೆ ; (ವಿಷಯವಾರು ಮಾಹಿತಿ ನೀಡುವುದು)

(ಇ) ಸದರಿ ಬೋಧಕರ ಸಕ್ರಮಾತಿಗೆ ನಿಗದಿಪಡಿಸಲಾದ ಮಾನದಂಡಗಳೇನು ;

(ಈ) ಸಕ್ರಮಾತಿ ಸಂಬಂಧ ಶೈಕ್ಷಣಿಕ ಸಾಲುಗಳನ್ನು ನಿಗದಿಪಡಿಸುವಲ್ಲಿ ನಿಯಮಗಳ ಉಲ್ಲಂಘನೆ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಉ) ಸಕ್ರಮಾತಿಗೊಳಿಸುವಲ್ಲಿನ ವಿಳಂಬಕ್ಕೆ ಕಾರಣಗಳೇನು ;

(ಊ) ಯಾವ ಕಾಲಮಿತಿಯಲ್ಲಿ ಸಕ್ರಮಗೊಳಿಸಲಾಗುವುದು ?

## ಗ್ರಾಮೀಣ ಭಾಗಗಳಿಗೆ ಸರ್ಕಾರಿ ಬಸ್ ಸೌಲಭ್ಯ ಕಲ್ಪಿಸುವ ಬಗ್ಗೆ

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ):-**

೧೨೨೭ (೧೪೮೦) ಮಾನ್ಯ ಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಮಂಡ್ಯ, ಮೈಸೂರು, ಹಾಸನ ಮತ್ತು ಚಾಮರಾಜನಗರ ಜಿಲ್ಲೆಗಳ ವ್ಯಾಪ್ತಿಯ ಗ್ರಾಮೀಣ ಭಾಗಗಳಿಗೆ ಸಮರ್ಪಕವಾಗಿ ಸರ್ಕಾರಿ ಬಸ್ಸುಗಳ ಸೌಕರ್ಯ ಇಲ್ಲದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಾದರೆ, ಸದರಿ ಭಾಗಗಳಿಗೆ ಸರ್ಕಾರಿ ಬಸ್ಸುಗಳ ಸೌಕರ್ಯ ಕಲ್ಪಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

## ಮೆಟ್ರಿಕ್ ಪೂರ್ವ ಪರಿಶಿಷ್ಟ ಜಾತಿ/ಪಂಗಡ ಹಾಗೂ ಹಿಂದುಳಿದ ವರ್ಗಗಳ ಖಾಸಗಿ ವಿದ್ಯಾರ್ಥಿನಿಲಯಗಳ ಬಗ್ಗೆ ವಿವರ

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ):–**

೧೨೨೮ (೧೪೮೧) ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ಮೆಟ್ರಿಕ್ ಪೂರ್ವ ಪರಿಶಿಷ್ಟ ಜಾತಿ/ಪಂಗಡಗಳ ಹಾಗೂ ಹಿಂದುಳಿದ ವರ್ಗಗಳ ಖಾಸಗಿ ವಿದ್ಯಾರ್ಥಿನಿಲಯಗಳ ಸಂಖ್ಯೆ ಎಷ್ಟು ; (ವರ್ಗವಾರು ವಿವರ ನೀಡುವುದು)

(ಆ) ಸದರಿ ವಿದ್ಯಾರ್ಥಿನಿಲಯಗಳಲ್ಲಿ ಎಷ್ಟು ವಿದ್ಯಾರ್ಥಿಗಳಿಗೆ ಅವಕಾಶ ಕಲ್ಪಿಸಲಾಗಿದೆ ; (ವರ್ಗವಾರು ವಿವರ ನೀಡುವುದು)

(ಇ) ವಿದ್ಯಾರ್ಥಿನಿಲಯಗಳಲ್ಲಿ ವಿದ್ಯಾರ್ಥಿಗಳಿಗೆ ಮಾಸಿಕ ತಲಾ ಬೋಧನಾ ವೆಚ್ಚವಾಗಿ ಸರ್ಕಾರ ನೀಡುತ್ತಿರುವ ಅನುದಾನವೆಷ್ಟು; (ವರ್ಗವಾರು ನೀಡುವುದು)

(ಈ) ವಿದ್ಯಾರ್ಥಿನಿಲಯಗಳ ವಿದ್ಯಾರ್ಥಿಗಳ ಬೋಧನಾ ವೆಚ್ಚವನ್ನು ಪರಿಷ್ಕರಿಸಲಾಗಿದೆಯೇ ; ಪರಿಷ್ಕರಿಸಲಾಗಿದ್ದಲ್ಲಿ, ಎಂದಿನಿಂದ ಜಾರಿಗೊಳಿಸಲಾಗಿದೆ ? (ವಿವರ ನೀಡುವುದು)

## ಸರ್ಕಾರಿ ಆಸ್ಪತ್ರೆಗಳಲ್ಲಿನ ವೈದ್ಯರ ಕೊರತೆ ಬಗ್ಗೆ

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ):-**

೧೨೨೯ (೧೪೭೯) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಮಂಡ್ಯ, ಮೈಸೂರು, ಹಾಸನ ಮತ್ತು ಚಾಮರಾಜನಗರ ಜಿಲ್ಲೆಗಳ ವ್ಯಾಪ್ತಿಯಲ್ಲಿನ ಸರ್ಕಾರಿ ಆಸ್ಪತ್ರೆಗಳಲ್ಲಿ ವೈದ್ಯರ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಸದರಿ ಜಿಲ್ಲೆಗಳಲ್ಲಿ ಖಾಲಿ ಇರುವ ವೈದ್ಯರ ಹುದ್ದೆಗಳ ಸಂಖ್ಯೆ ಎಷ್ಟು ;

(ಇ) ಸದರಿ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

## ಡಾ॥ ಡಿ.ಎಂ. ನಂಜುಂಡಪ್ಪ ವರದಿಯ ಅನ್ವಯ ಹೈ.ಕ. ಜಿಲ್ಲೆಗಳಲ್ಲಿ S.D.P. ಬಿಡುಗಡೆಯಾಗಿರುವ ಅನುದಾನ

**ಶ್ರೀ ಅಮರನಾಥ ಪಾಟೀಲ್ (ಪದವೀಧರರ ಕ್ಷೇತ್ರ) :-**

೧೨೩೦ (೧೪೮೩) ಮಾನ್ಯ ಯೋಜನೆ ಮತ್ತು ಸಾಂಖ್ಯಿಕ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಮತ್ತು ವಿಜ್ಞಾನ ಹಾಗೂ ತಂತ್ರಜ್ಞಾನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಡಾ॥ ಡಿ.ಎಂ. ನಂಜುಂಡಪ್ಪ ವರದಿ ಆಧರಿಸಿ ಕಳೆದ ೫ ವರ್ಷಗಳಲ್ಲಿ ಹಿಂದುಳಿದ ಹೈದ್ರಾಬಾದ್ ಕರ್ನಾಟಕ ಪ್ರದೇಶಗಳ ಆರು ಜಿಲ್ಲೆಗಳಿಗೆ

ಬಿಡುಗಡೆಯಾದ ವಿಶೇಷ ಅಭಿವೃದ್ಧಿ ಯೋಜನೆ (ಎಸ್.ಡಿ.ಪಿ.) ಅಡಿಯಲ್ಲಿ ಬಿಡುಗಡೆಯಾದ ಅನುದಾನ ಎಷ್ಟು ; (ವರ್ಷವಾರು, ಇಲಾಖೆವಾರು, ಯೋಜನೆವಾರು, ವಿಶೇಷ ಅಭಿವೃದ್ಧಿ ಯೋಜನೆ (ಎಸ್.ಡಿ..ಪಿ.) ಜಿಲ್ಲಾವಾರು ಪ್ರತ್ಯೇಕವಾಗಿ ವಿವರ ನೀಡುವುದು)

(ಆ) ಮೇಲ್ಕಾಣಿಸಿದ ವಿಶೇಷ ಅಭಿವೃದ್ಧಿ (ಎಸ್.ಪಿ.ಡಿ.) ಅಡಿಯಲ್ಲಿ ೨೦೦೯ ರಿಂದ ಇಲ್ಲಿಯವರೆಗೆ ಆದ ಖರ್ಚು ಎಷ್ಟು ; (ವರ್ಷವಾರು, ಇಲಾಖಾವಾರು, ಯೋಜನೆವಾರು, ವಿಶೇಷ ಅಭಿವೃದ್ಧಿ ಯೋಜನೆ (ಎಸ್.ಪಿ.ಡಿ.) ಜಿಲ್ಲಾವಾರು ಪ್ರತ್ಯೇಕವಾಗಿ ವಿವರ ನೀಡುವುದು) ?

## ರಾಜ್ಯದಲ್ಲಿ H1N1 ಮಹಾಮಾರಿ ರೋಗ ಹರಡಿರುವ ಬಗ್ಗೆ

**ಶ್ರೀ ಅಮರನಾಥ ಪಾಟೀಲ್ (ಪದವೀಧರರ ಕ್ಷೇತ್ರ) :-**

೧೨೩೧ (೧೪೮೨) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ಮಹಾಮಾರಿ H1N1 ರೋಗ ಭಯಂಕರವಾಗಿ ಹರಡಿ ಸಾವಿರಾರು ಜನ ಈ ರೋಗದಿಂದ ಬಳಲುತ್ತಿದ್ದು, ಹಾಗೂ ಹಲವಾರು ಜನ ಈ ರೋಗಕ್ಕೆ ಬಲಿಯಾಗಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ ; (ಜಿಲ್ಲಾವಾರು ವಿವರ ನೀಡುವುದು)

(ಆ) ಆರೋಗ್ಯ ಇಲಾಖೆಯಲ್ಲಿ H1N1 ರೋಗ ಪರೀಕ್ಷೆ ಮಾಡಲು ಪ್ರಯೋಗಾಲಯಗಳ ಕೊರತೆ ಇರುವುದು ಸರ್ಕಾರದ ಗಮನಕ್ಕಿದೆಯೇ ; ಇದ್ದರೆ ಈ ರೋಗ ಪತ್ತೆ ಹಚ್ಚಲು ತ್ವರಿತವಾಗಿ ಪ್ರಯೋಗಾಲಯಗಳು ಪ್ರಾರಂಭಿಸಲು ಸರ್ಕಾರ ಕೈಗೊಳ್ಳುವ ಕ್ರಮಗಳೇನು ; ಯಾವ ಕ್ರಮ ಕೈಗೊಂಡಿದೆ ; ಹೈ–ಕ ಜಿಲ್ಲೆಗಳ ಹಾಗೂ ಹರಪನಹಳ್ಳಿಯಲ್ಲಿನ ವ್ಯವಸ್ಥೆಗಳ ಬಗ್ಗೆ ಸಂಪೂರ್ಣ ಮಾಹಿತಿ ನೀಡುವುದು ;

(ಇ) ಈ H1N1 ರೋಗ ನಿಯಂತ್ರಿಸಲು ಆರೋಗ್ಯ ಇಲಾಖೆ ಸಂಪೂರ್ಣ ವಿಫಲವಾಗಿದ್ದು, ರಾಜ್ಯಾದ್ಯಂತ ಮಕ್ಕಳಿಗೆ ಕೊಡುವ ಟಾಮಿಫ್ಲೂನ ಪಿಡಿಯಾಟ್ರಿಕ್‌ಡೋಸ್ ಹಾಗೂ ಸಿರಫ್ ದಾಸ್ತಾನು ಲಭ್ಯ ಇಲ್ಲದಿರುವ ಸಂಗತಿ ಸರ್ಕಾರದ ಗಮನಕ್ಕಿದೆಯೇ ; ಇದ್ದರೆ ಇದನ್ನು ಸರಿಪಡಿಸುವ ನಿಟ್ಟಿನಲ್ಲಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು ? (ಮಾಹಿತಿ ನೀಡುವುದು)

## ಹೈ–ಕರ್ನಾಟಕ ಪ್ರದೇಶದ ಜಿಲ್ಲೆಗಳಲ್ಲಿ ಮಂಜೂರಾದ ಸರ್ಕಾರಿ ವೈದ್ಯಕೀಯ ಮಹಾವಿದ್ಯಾಲಯಗಳು

**ಶ್ರೀ ಅಮರನಾಥ ಪಾಟೀಲ್ (ಪದವೀಧರರ ಕ್ಷೇತ್ರ) :–**

೧೨೩೨ (೧೪೮೪) ಮಾನ್ಯ ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಹೈದ್ರಾಬಾದ್–ಕರ್ನಾಟಕ ಪ್ರದೇಶದ ಜಿಲ್ಲೆಗಳಲ್ಲಿ ಇಲ್ಲಿಯವರೆಗೆ ಮಂಜೂರಾದ ಸರ್ಕಾರಿ ವೈದ್ಯಕೀಯ ಮಹಾವಿದ್ಯಾಲಯಗಳೆಷ್ಟು; (ಜಿಲ್ಲಾವಾರು, ಸಂಸ್ಥೆವಾರು ವಿವರ ನೀಡುವುದು)

(ಆ) ಸದರಿ ಜಿಲ್ಲೆಗಳ ವೈದ್ಯಕೀಯ ಮಹಾವಿದ್ಯಾಲಯಗಳ ಸ್ಥಾಪನೆಗೆ ಅವಶ್ಯಕವಾಗಿರುವ ಅನುಮತಿಗಳು, ಸಿಬ್ಬಂದಿಗಳ ನೇಮಕಾತಿ ಸೌಕರ್ಯಗಳು ಹಾಗೂ ಮೂಲಭೂತ ಸೌಕರ್ಯಗಳನ್ನು ಹೊಂದಿದೆಯೇ ; (ಜಿಲ್ಲಾವಾರು/ಸಂಸ್ಥೆವಾರು/ಹುದ್ದೆವಾರು ವಿವರ ನೀಡುವುದು)

(ಇ) ಸದರಿ ಜಿಲ್ಲೆಗಳ ವೈದ್ಯಕೀಯ ಮಹಾವಿದ್ಯಾಲಯಗಳ ಅಡಿಯಲ್ಲಿ "ಸೂಪರ್ ಸ್ಪೆಷಾಲಿಟಿ" ಆಸ್ಪತ್ರೆಗಳನ್ನು ಪ್ರಾರಂಭಿಸುವ ಪ್ರಸ್ತಾವನೆಗಳು ಸರ್ಕಾರದ ಮುಂದಿವೆಯೇ ? (ಜಿಲ್ಲಾವಾರು/ಸಂಸ್ಥೆವಾರು, ಸ್ಥಿತಿಗತಿಗಳ ಬಗ್ಗೆ ವಿವರ ನೀಡುವುದು).

## ಕಲಬುರಗಿ ಮಹಾನಗರದಲ್ಲಿ ಇ.ಎಸ್.ಐ. ಆಸ್ಪತ್ರೆ ಬಗ್ಗೆ

**ಶ್ರೀ ಅಮರನಾಥ ಪಾಟೀಲ್ (ಪದವೀಧರರ ಕ್ಷೇತ್ರ) :-**

೧೨೩೩ (೧೫೧೧) ಮಾನ್ಯ ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕಲಬುರಗಿ ಮಹಾನಗರದಲ್ಲಿ ಸ್ಥಾಪನೆಯಾಗಿರುವ ಕೇಂದ್ರ ಸರ್ಕಾರದ ಇ.ಎಸ್.ಐ. ಆಸ್ಪತ್ರೆಯ ಸುಸಜ್ಜಿತವಾದ ಬೃಹತ್ ಕಟ್ಟಡದ ಸದ್ಬಳಕೆ ಈವರೆಗೂ ಆಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದರೆ, ಸದರಿ ಆಸ್ಪತ್ರೆಯನ್ನು ಕೇಂದ್ರ ಸರ್ಕಾರದ ಪ್ರತಿಷ್ಠಿತ AIIMS ಸಂಸ್ಥೆಗೆ ವಹಿಸಿಕೊಡಲು ಸರ್ಕಾರ ಕೇಂದ್ರ ಸರ್ಕಾರದ ಮೇಲೆ ಒತ್ತಡ ತರುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

(ವಿವರವಾಗಿ ಮಾಹಿತಿ ನೀಡುವುದು)

(ಇ) ಒಟ್ಟಾರೆ ಸದರಿ, ಇ.ಎಸ್.ಐ. ಆಸ್ಪತ್ರೆಯ ಬೃಹತ್ ಸುಸಜ್ಜಿತ ಕಟ್ಟಡದ ಸದ್ಬಳಕೆಗಾಗಿ ಸರ್ಕಾರದ ಮುಂದಿರುವ ಯೋಜನೆಗಳೇನು ? (ವಿವರ ನೀಡುವುದು)

## ಹೈದ್ರಾಬಾದ್-ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯ ಸದಸ್ಯರ ಅಧಿಕಾರದ ಅವಧಿ ಬಗ್ಗೆ

**ಶ್ರೀ ಅಮರನಾಥ ಪಾಟೀಲ್ (ಪದವೀಧರರ ಕ್ಷೇತ್ರ) :-**

೧೨೩೪ (೧೫೧೦) ಮಾನ್ಯ ಯೋಜನೆ ಮತ್ತು ಸಾಂಖ್ಯಿಕ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಮತ್ತು ವಿಜ್ಞಾನ ಹಾಗೂ ತಂತ್ರಜ್ಞಾನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ೩೭೧(ಜೆ) ಅಡಿಯಲ್ಲಿ ಹೈದ್ರಾಬಾದ್-ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ ಸರ್ಕಾರದ ಅಧಿಸೂಚನೆ ಸಂಖ್ಯೆ : DPAR 06 PLX 2012 ದಿನಾಂಕ: ೦೬-೧೧-೨೦೧೩ರ ಅನ್ವಯ ರಚನೆಯಾಗಿ ಒಂದು ವರ್ಷ ಪೂರ್ಣಗೊಂಡಿದ್ದು, ಮಂಡಳಿಯ ಸದಸ್ಯರ ಅಧಿಕಾರದ ಅವಧಿ ಒಂದು ವರ್ಷ ಪೂರ್ಣಗೊಂಡಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದರೆ, ಅವಧಿ ಪೂರ್ಣಗೊಂಡಿರುವ ಸದಸ್ಯರ ಬದಲಿಗೆ ಉಳಿದ ಸದಸ್ಯರನ್ನು ಸರದಿಯಂತೆ ನೇಮಕ ಮಾಡುವ ಪ್ರಕ್ರಿಯೆಗೆ ಸರ್ಕಾರ ಕೂಡಲೇ ಮುಂದಾಗುವುದೇ ? (ಮಾಹಿತಿ ನೀಡುವುದು)

F-6-B/B

## ರಾಜ್ಯದಲ್ಲಿ ಹೆಚ್ಚುತ್ತಿರುವ ನಕಲಿ ವೈದ್ಯರುಗಳ ಹಾವಳಿಯ ಬಗ್ಗೆ

**ಶ್ರೀ ದಯಾನಂದ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-**

೧೨೩೫ (೧೪೮೫) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ನಕಲಿ ವೈದ್ಯರುಗಳ ಹಾವಳಿಯಿಂದ ರಾಜ್ಯದ ಜನತೆಯು ಮೋಸ ಹೋಗುತ್ತಿರುವುದಲ್ಲದೆ ಹಾಗೂ ಆರೋಗ್ಯದ ಮೇಲೆ ದುಷ್ಪರಿಣಾಮ ಉಂಟು ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಖಾಸಗಿ ಆಸ್ಪತ್ರೆಗಳಲ್ಲಿ ವಿವಿಧ ರೀತಿಯ ವಿಶೇಷ ಚಿಕಿತ್ಸೆಯನ್ನು ಕೊಟ್ಟು ರೋಗ ಮುಕ್ತರನ್ನಾಗಿಸುವ ಆಶ್ವಾಸನೆಯನ್ನು ಕೊಟ್ಟು ಜನತೆಗೆ ಮೋಸ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಕಳೆದ ೦೫ ವರ್ಷಗಳಿಂದ ನಕಲಿ ವೈದ್ಯರುಗಳು ಹಾಗೂ ಸುಳ್ಳು ಆಶ್ವಾಸನೆಯನ್ನು ಕೊಟ್ಟ ನಕಲಿ ಖಾಸಗಿ ಆಸ್ಪತ್ರೆಗಳನ್ನು ಗುರುತಿಸಲಾಗಿದೆಯೇ ; ಗುರುತಿಸಿದ್ದಲ್ಲಿ, ಅಂತಹ ಎಷ್ಟು ವೈದ್ಯರುಗಳನ್ನು ಬಂಧಿಸಲಾಗಿದೆ ; ಹಾಗೂ ನಕಲಿ ಚಿಕಿತ್ಸಾಲಯಗಳ ಮತ್ತು ನಕಲಿ ವೈದ್ಯರುಗಳ ವಿರುದ್ಧ ಸರ್ಕಾರವು ಕೈಗೊಂಡಿರುವ ಕ್ರಮಗಳೇನು ?

## ರಾಜ್ಯದಲ್ಲಿ ದಲಿತ ಹಿಂದುಳಿದ ವರ್ಗದ ಜನತೆಗಳ ಬಗ್ಗೆ

**ಶ್ರೀ ದಯಾನಂದ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೧೨೩೬ (೧೪೮೬) ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ದಲಿತ ಹಿಂದುಳಿದ ವರ್ಗದ ಜನರಿಗಾಗಿ ಡಾ. ಅಂಬೇಡ್ಕರ್, ಜಗಜ್ಜೀವನರಾಮ, ದೇವರಾಜು ಅರಸು, ವಾಲ್ಮೀಕಿ ಮತ್ತು ಲಂಬಾಣಿ ತಾಂಡ ಅಭಿವೃದ್ಧಿ ನಿಗಮಗಳಿಂದ ಯಾವ ಯಾವ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ ; (ವಿವರಗಳನ್ನು ನೀಡುವುದು)

(ಆ) ಕಳೆದ ೦೩ ವರ್ಷಗಳಿಂದ ವಿವಿಧ ರೀತಿಯ ಯೋಜನೆಗಳಲ್ಲಿ ನೇರ ಸಾಲ ಸೌಲಭ್ಯಗಳನ್ನು ಎಷ್ಟು ಫಲಾನುಭವಿಗಳಿಗೆ ನೀಡಲಾಗಿದೆ ; (ವಿವರಗಳನ್ನು ನೀಡುವುದು)

(ಇ) ಹೀಗೆ ನೀಡಿದ ನೇರ ಸಾಲ ಸೌಲಭ್ಯಗಳಿಗೆ ಸರ್ಕಾರದ ಸಹಾಯ ಧನ (ಸಬ್ಸಿಡಿ) ಎಷ್ಟು ;

(ಈ) ಈ ಎಲ್ಲಾ ನಿಗಮಗಳಿಂದ ನೇರ ಸಾಲ ಪಡೆದಿರುವ ಫಲಾನುಭವಿಗಳಿಗೆ ಸಾಲ ಮನ್ನಾ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ?

## ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಸರ್ವತೋಮುಖ ಅಭಿವೃದ್ಧಿ ಬಗ್ಗೆ

**ಶ್ರೀ ಆರ್. ಧರ್ಮಸೇನಾ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೧೨೩೭ (೧೪೮೭) ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕಳೆದ ೦೩ ವರ್ಷಗಳಿಂದ ಮೈಸೂರು ಹಾಗೂ ಚಾಮರಾಜನಗರ ಜಿಲ್ಲೆಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಸರ್ವತೋಮುಖ ಅಭಿವೃದ್ಧಿಗಾಗಿ ಅನುಷ್ಠಾನಗೊಳಿಸುವ ಕಾರ್ಯಕ್ರಮಗಳಾವುವು ;

(ಆ) ಈ ಜನಾಂಗದವರ ಆರ್ಥಿಕ ಸಬಲೀಕರಣಕ್ಕಾಗಿ ಕೈಗೊಂಡ ಕ್ರಮಗಳಾವುವು ; ಈ ಕುರಿತು ಸಂಬಂಧಪಟ್ಟ ನಿಗಮಗಳಿಗೆ ಕಳೆದ ೦೩ ವರ್ಷಗಳಿಂದ ಮಂಜೂರು ಮಾಡಿದ ಅನುದಾನವೆಷ್ಟು ;

(ಇ) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಇರುವ ಉಪಯೋಜನೆಯಡಿ ಶಿಕ್ಷಣ ಸಂಬಂಧಿತ ಕಾರ್ಯಕ್ರಮ, ಉದ್ಯೋಗ ಹೆಚ್ಚಳ, ಜಮೀನು ಖರೀದಿ ಮುಂತಾದವುಗಳಿಗೆ ರಾಜ್ಯ ಸರ್ಕಾರವು ಮೀಸಲಿಟ್ಟ ಅನುದಾನವೆಷ್ಟು ?

## ಪಿ.ಹೆಚ್.ಸಿ/ಪಿ.ಹೆಚ್.ಯು ಗಳ ಆಸ್ಪತ್ರೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳ ಬಗ್ಗೆ

**ಶ್ರೀ ಆರ್. ಧರ್ಮಸೇನಾ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೧೨೩೮ (೧೪೮೮) ಮಾನ್ಯ ಆರೋಗ್ಯ ಮತ್ತು ಕುಟುಂಬ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಮೈಸೂರು ಹಾಗೂ ಚಾಮರಾಜನಗರ ಜಿಲ್ಲೆಗಳಲ್ಲಿರುವ ಪಿ.ಹೆಚ್.ಸಿ/

ಪಿ.ಹೆಚ್.ಯು ಗಳ ಸಂಖ್ಯೆ ಎಷ್ಟು ; ತಾಲ್ಲೂಕು ಮಟ್ಟದಲ್ಲಿರುವ ಆಸ್ಪತ್ರೆಗಳ ಸಂಖ್ಯೆ ಎಷ್ಟು ;

(ಆ) ಈ ಮೇಲಿನ ಆಸ್ಪತ್ರೆಗಳಿಗೆ ಮಂಜೂರಾಗಿರುವ ವೈದ್ಯಕೀಯ, ಅರೆ ವೈದ್ಯಕೀಯ ಮತ್ತು ಇತರೆ ಸಿಬ್ಬಂದಿಗಳ ಸಂಖ್ಯೆ ಎಷ್ಟು ;

(ಇ) ಇವುಗಳಿಗೆ ಭರ್ತಿ ಮಾಡದೇ ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು ; ಈ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರವು ಯಾವ ಕ್ರಮವನ್ನು ಕೈಗೊಂಡಿದೆ ?

## K.S.R.T.C. ಆಯ್ಕೆಯ ಪಟ್ಟಿಯ ಬಗ್ಗೆ

**ಶ್ರೀ ಆರ್. ಚೌಡರೆಡ್ಡಿ ತೂಪಲ್ಲಿ (ಪದವೀಧರರ ಕ್ಷೇತ್ರ) :-**

೧೨೩೯ (೧೪೯೦) ಮಾನ್ಯ ಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ (K.S.R.T.C.) ನಿಗಮದ ಜಾಹಿರಾತು ಸಂಖ್ಯೆ ೩/೨೦೦೭ ದಿನಾಂಕ: ೨೪-೦೫-೨೦೦೭ರ ಅನ್ವಯ ಪಾರುಪತ್ತೆದಾರ ಹುದ್ದೆಯ ತಾತ್ಕಾಲಿಕ ಆಯ್ಕೆ ಪಟ್ಟಿ ಮತ್ತು ಅಂತಿಮ ಆಯ್ಕೆ ಪಟ್ಟಿಯನ್ನು ಯಾವ ದಿನಾಂಕದಂದು ಪ್ರಕಟಿಸಲಾಯಿತು ;

(ಆ) ಅಂತಿಮ ಆಯ್ಕೆ ಪಟ್ಟಿಯಲ್ಲಿ ತಾತ್ಕಾಲಿಕ ಆಯ್ಕೆ ಪಟ್ಟಿಯಲ್ಲಿದ್ದ ಎಷ್ಟು ಅಭ್ಯರ್ಥಿಗಳನ್ನು ಕೈಬಿಡಲಾಗಿದೆ ;

(ಇ) ಅಂತಿಮ ಆಯ್ಕೆ ಪಟ್ಟಿಯಿಂದ ಕೈಬಿಟ್ಟ ಅಭ್ಯರ್ಥಿಗಳಿಗೆ ಕಾರಣಗಳನ್ನು ತಿಳಿಸಲಾಗಿದೆಯೇ ;

(ಈ) ಸದರಿ ದಿನಾಂಕದಂದು ನೇಮಕಗೊಂಡ ಒಬ್ಬ ಅಭ್ಯರ್ಥಿಯು

ಹಾಲಿ ಈಗ ಯಾವ ಹುದ್ದೆಯಲ್ಲಿ ಮುಂಬಡ್ತಿ ಹೊಂದಿರುತ್ತಾನೆ ; ಅವನ ವೇತನ ಶ್ರೇಣಿ ಏನು ; ಹಾಲಿ ಅವನು ಈಗ ಪಡೆಯುತ್ತಿರುವ ತಿಂಗಳು ಒಟ್ಟು ವೇತನ ಎಷ್ಟು ? (ವಿವರವಾದ ಮಾಹಿತಿ ಕೊಡುವುದು)

## ಹಾಸನ ವೈದ್ಯಕೀಯ ಕಾಲೇಜಿನಲ್ಲಿ ಗುತ್ತಿಗೆ ನೇಮಕಾತಿ ಬಗ್ಗೆ

**ಶ್ರೀ ಆರ್. ಚೌಡರೆಡ್ಡಿ ತೂಪಲ್ಲಿ (ಪದವೀಧರರ ಕ್ಷೇತ್ರ) :-**

೧೨೪೦ (೧೪೯೧) ಮಾನ್ಯ ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಹಾಸನ ವೈದ್ಯಕೀಯ ಕಾಲೇಜಿನಲ್ಲಿ ವೃಂದ ಮತ್ತು ನೇಮಕಾತಿಗಳ ಅನ್ವಯ ಎಷ್ಟು ಹುದ್ದೆಗಳು ಮಂಜೂರು ಆಗಿವೆ ; (ವಿವರವಾದ ಮಾಹಿತಿ ಕೊಡುವುದು) ;

(ಆ) ಸದರಿ ಹುದ್ದೆಗಳಿಗೆ ಗುತ್ತಿಗೆ ಆಧಾರದ ಮೇಲೆ ಅಭ್ಯರ್ಥಿಗಳನ್ನು ನೇಮಕ ಮಾಡಿಕೊಳ್ಳಲಾಗಿದೆಯೇ ; ಹಾಗಿದ್ದಲ್ಲಿ ಹುದ್ದೆವಾರು ಮಾಹಿತಿ ಕೊಡುವುದು ;

(ಇ) ಗುತ್ತಿಗೆಯಡಿ ಕಾರ್ಯನಿರ್ವಹಿಸುತ್ತಿದ್ದ ನೌಕರರನ್ನು ಖಾಯಂ ಮಾಡಲಾಗಿದೆಯೇ ; ಖಾಯಂ ಮಾಡಿದ್ದರೆ ಅಭ್ಯರ್ಥಿಯ ಹೆಸರು, ಹುದ್ದೆಯ ಪದನಾಮ, ವೇತನ ಶ್ರೇಣಿಗಳನ್ನು ಒಳಗೊಂಡಂತೆ ವಿವರವಾದ ಮಾಹಿತಿ ನೀಡುವುದು ?

## ಕೇಂದ್ರ ಸರ್ಕಾರದ ಅನುದಾನ ಯೋಜನೆಗಳ ಬಗ್ಗೆ

**ಶ್ರೀ ಆರ್. ಚೌಡರೆಡ್ಡಿ ತೂಪಲ್ಲಿ (ಪದವೀಧರರ ಕ್ಷೇತ್ರ) :-**

೧೨೪೧ (೧೪೯೨) ಮಾನ್ಯ ಯೋಜನೆ ಮತ್ತು ಸಾಂಖ್ಯಿಕ, ಮಾಹಿತಿ

ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಮತ್ತು ವಿಜ್ಞಾನ ಹಾಗೂ ತಂತ್ರಜ್ಞಾನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕೇಂದ್ರ ಸರ್ಕಾರದ ಅನುದಾನದಿಂದ ರಾಜ್ಯದಲ್ಲಿ ಅನುಷ್ಠಾನಗೊಳ್ಳುತ್ತಿರುವ ಯೋಜನೆಗಳ ಸಂಖ್ಯೆ ಎಷ್ಟು ; ಅವು ಯಾವುವು ; (ಇಲಾಖಾವಾರು, ಯೋಜನಾವಾರು ವಿವರವಾದ ಮಾಹಿತಿ ನೀಡುವುದು)

(ಆ) ಕೇಂದ್ರ ಮತ್ತು ರಾಜ್ಯ ಸರ್ಕಾರದ ಜಂಟಿ ಅನುದಾನದಲ್ಲಿ ಜಾರಿಯಲ್ಲಿರುವ ಯೋಜನೆಗಳು ಎಷ್ಟು ; (ಇಲಾಖಾವಾರು, ಯೋಜನಾವಾರು ವಿವರವಾದ ಮಾಹಿತಿ ಕೊಡುವುದು)

(ಇ) ಕೇಂದ್ರ ಸರ್ಕಾರವು ೨೦೧೫-೧೬ನೇ ಸಾಲಿಗೆ ಎಲ್ಲಾ ಯೋಜನೆಗಳನ್ನು ಮುಂದುವರೆಸಿದೆಯೇ ; ಮುಂದುವರೆಸಿದ್ದರೆ, ಒದಗಿಸಲಾಗಿರುವ ಅನುದಾನ ಎಷ್ಟು ?

## ನಿಗಮ ಮಂಡಳಿಗಳ ಬಗ್ಗೆ

**ಶ್ರೀ ಆರ್. ಚೌಡರೆಡ್ಡಿ ತೂಪಲ್ಲಿ (ಪದವೀಧರರ ಕ್ಷೇತ್ರ) :-**

೧೨೪೨ (೧೪೯೩) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಡಿ ಬರುವ ನಿಗಮ, ಮಂಡಳಿ, ಪ್ರಾಧಿಕಾರ, ಸಂಸ್ಥೆ ಮತ್ತು ಅಂಗಸಂಸ್ಥೆಗಳು ಯಾವುವು ; (ಕೇಂದ್ರ ಕಛೇರಿ ವಿಳಾಸ, ದೂರವಾಣಿ, ಇವುಗಳನ್ನು ಒಳಗೊಂಡಂತೆ ಮಾಹಿತಿ ನೀಡುವುದು)

(ಆ) ಸದರಿ ಸಂಸ್ಥೆಗಳಿಂದ ಯಾವ ಯಾವ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ ; (ಮಾಹಿತಿ ನೀಡುವುದು)

(ಇ) ಗ್ರಾಮೀಣ ಪ್ರದೇಶದಲ್ಲಿ ಕಿರಿಯ ಆರೋಗ್ಯ ಕೇಂದ್ರ ಸ್ಥಾಪಿಸಲು ಸರ್ಕಾರ ವಿಧಿಸಿರುವ ಮಾನದಂಡಗಳೇನು ? (ಮಾಹಿತಿ ಒದಗಿಸುವುದು)

## ಬಯಲುಸೀಮೆ ಅಭಿವೃದ್ಧಿ ಮಂಡಳಿಯ ಅನುದಾನ ಹಂಚಿಕೆ ಬಗ್ಗೆ

**ಶ್ರೀ ಆರ್. ಚೌಡರೆಡ್ಡಿ ತೂಪಲ್ಲಿ (ಪದವೀಧರರ ಕ್ಷೇತ್ರ) :–**

೧೨೪೩ (೧೪೮೯) ಮಾನ್ಯ ಯೋಜನೆ ಮತ್ತು ಸಾಂಖ್ಯಿಕ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಮತ್ತು ವಿಜ್ಞಾನ ಹಾಗೂ ತಂತ್ರಜ್ಞಾನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬಯಲುಸೀಮೆ ಅಭಿವೃದ್ಧಿ ಮಂಡಳಿ ಚಿತ್ರದುರ್ಗ ಇದರ ವ್ಯಾಪ್ತಿಗೆ ಒಟ್ಟು ಎಷ್ಟು ಹಾಗೂ ಯಾವ ಯಾವ ವಿಧಾನ ಸಭಾ ಕ್ಷೇತ್ರಗಳು ಬರುತ್ತವೆ ; (ಜಿಲ್ಲಾವಾರು ಮಾಹಿತಿ ಕೊಡುವುದು)

(ಆ) ಸದರಿ ಮಂಡಳಿಗೆ ಸರ್ಕಾರ ೨೦೧೪–೧೫ನೇ ಸಾಲಿನಲ್ಲಿ ಒದಗಿಸಿದ ಅನುದಾನವೆಷ್ಟು ;

(ಇ) ಒದಗಿಸಿದ ಅನುದಾನದಲ್ಲಿ ಯಾವ ಯಾವ ಕ್ಷೇತ್ರಕ್ಕೆ ಎಷ್ಟು ಹಂಚಿಕೆ ಮಾಡಲಾಗಿದೆ ; (ವಿವರವಾದ ಮಾಹಿತಿ ಕೊಡುವುದು)

(ಈ) ದಿನಾಂಕ : ೨೮–೦೨–೨೦೧೫ಕ್ಕೆ ಎಷ್ಟು ಜನ ಶಾಸಕರು ಅನುದಾನ ಕೋರಿ ಪತ್ರವನ್ನು ನೀಡಿರುತ್ತಾರೆ ; ಬಾಕಿ ಉಳಿದಿರುವ ಪತ್ರಗಳ ಸಂಖ್ಯೆ ಎಷ್ಟು ; (ವಿವರವಾದ ಮಾಹಿತಿ ಕೊಡುವುದು)

(ಉ) ವಿಧಾನ ಸಭಾ ಸದಸ್ಯರಿಗೆ ಹಂಚಿಕೆ ಮಾಡಿದಂತೆ ಬಯಲು ಸೀಮೆ ವ್ಯಾಪ್ತಿಯಲ್ಲಿ ಬರುವ ವಿಧಾನ ಪರಿಷತ್ತು ಸದಸ್ಯರಿಗೂ ಕೂಡ ಅನುದಾನವನ್ನು ಹಂಚಿಕೆ ಮಾಡದಿರಲು ಕಾರಣವೇನು ;

(ಊ) ಒಟ್ಟು ಅನುದಾನದಲ್ಲಿ ಖರ್ಚಾದ ಅನುದಾನವೆಷ್ಟು ; ಉಳಿದ ಅನುದಾನವೆಷ್ಟು ? (ವಿವರವಾದ ಮಾಹಿತಿ ಕೊಡುವುದು)

## ಸಾರಿಗೆ ಕಛೇರಿಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿ/ ಸಿಬ್ಬಂದಿಗಳ ಮಾಹಿತಿ

**ಶ್ರೀ ಟಿ.ಎ. ಶರವಣ (ವಿಧಾನಸಭೆಯಿಂದ ಚುನಾಯಿತರಾದವರು) :-**

೧೨೪೪ (೧೫೧೪) ಮಾನ್ಯ ಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದ ಪ್ರಾದೇಶಿಕ ಸಾರಿಗೆ ಕಛೇರಿಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿ/ಸಿಬ್ಬಂದಿಗಳ ಸಂಖ್ಯೆ ಎಷ್ಟು ; (ವೃಂದವಾರು ಮಾಹಿತಿ ನೀಡುವುದು)

(ಆ) ಸಾರಿಗೆ ಅಧಿಕಾರಿ ಮತ್ತು ಸಿಬ್ಬಂಧಿಯವರುಗಳ ಕಾರ್ಯಾಪಾಲನೆ ಮತ್ತು ಜವಾಬ್ದಾರಿಗಳೇನು ; (ವೃಂದವಾರು, ಜಿಲ್ಲಾವಾರು ಸಂಪೂರ್ಣ ವಿವರಗಳನ್ನು ನೀಡುವುದು)

(ಇ) ಸಾರಿಗೆ ಕಛೇರಿಗಳಲ್ಲಿ ಸಾರ್ವಜನಿಕರ ಕೆಲಸ ಕಾರ್ಯಗಳಿಗೆ ಮಧ್ಯವರ್ತಿಗಳು ಸಾರ್ವಜನಿಕರಿಂದ ಹಣ ವಸೂಲಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

F-7-B/B

(ಈ) ಹಾಗಿದ್ದಲ್ಲಿ, ಸಾರ್ವಜನಿಕರ ಕೆಲಸ ಕಾರ್ಯಗಳನ್ನು ಸರಳೀಕರಣಗೊಳಿಸಲು ಸರ್ಕಾರ ರೂಪಿಸಿರುವ ಮಾರ್ಗೋಪಾಯಗಳೇನು ? (ಸಂಪೂರ್ಣ ವಿವರ ನೀಡುವುದು)

**ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಲ್ದಾಣವನ್ನು ಸ್ಥಳಾಂತರಿಸಿರುವುದು**

**ಶ್ರೀ ಟಿ.ಎ. ಶರವಣ (ವಿಧಾನಸಭೆಯಿಂದ ಚುನಾಯಿತರಾದವರು) :-**

೧೨೪೫ (೧೪೯೪) ಮಾನ್ಯ ಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಲ್ದಾಣವನ್ನು ಪೀಣ್ಯಕ್ಕೆ ಸ್ಥಳಾಂತರಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ, ಈ ನಿಲ್ದಾಣವನ್ನು ಮತ್ತೆ ಕೆಂಪೇಗೌಡ ಬಸ್ ನಿಲ್ದಾಣಕ್ಕೆ ಸ್ಥಳಾಂತರಿಸುತ್ತಿರುವುದು ನಿಜವೇ ; ಹಾಗಿದ್ದಲ್ಲಿ, ಕಾರಣಗಳೇನು ? (ಮಾಹಿತಿ ನೀಡುವುದು)

**ಬಿ.ಬಿ.ಎಂ.ಪಿ. ವ್ಯಾಪ್ತಿಯ ಪ್ರಾಥಮಿಕ ಆರೋಗ್ಯ ಕೇಂದ್ರ ಹಾಗೂ ಹೆರಿಗೆ ಆಸ್ಪತ್ರೆ**

**ಶ್ರೀ ಟಿ.ಎ. ಶರವಣ (ವಿಧಾನಸಭೆಯಿಂದ ಚುನಾಯಿತರಾದವರು) :-**

೧೨೪೬ (೧೪೯೫) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬಿ.ಬಿ.ಎಂ.ಪಿ. ವ್ಯಾಪ್ತಿಯಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳು, ಹೆರಿಗೆ ಆಸ್ಪತ್ರೆ ಹಾಗೂ ೫೦ ಹಾಸಿಗೆಗಳುಳ್ಳ ಆಸ್ಪತ್ರೆಗಳ ಸಂಖ್ಯೆ

ಎಷ್ಟು (ಮಾಹಿತಿ ನೀಡುವುದು)

(ಆ) ಈ ಆರೋಗ್ಯ ಕೇಂದ್ರಗಳನ್ನು ಮತ್ತು ಆಸ್ಪತ್ರೆಗಳನ್ನು ಹೈಟೆಕ್ ವ್ಯವಸ್ಥೆಗೊಳಿಸುವ ಪ್ರಸ್ತಾವ ಸರ್ಕಾರದ ಮುಂದಿದೆಯೇ ;

(ಇ) ಹಾಗಿದ್ದಲ್ಲಿ, ಸರ್ಕಾರ ಕೈಗೊಂಡಿರುವ ಕ್ರಮಗಳೇನು ? (ಮಾಹಿತಿ ನೀಡುವುದು)

## ರಾಜ್ಯದಲ್ಲಿ ಬಸ್ ಮತ್ತು ಖಾಸಗಿ ಬಸ್ ಅಗ್ನಿ ಅನಾಹುತಗಳು

**ಶ್ರೀ ಟಿ.ಎ. ಶರವಣ (ವಿಧಾನಸಭೆಯಿಂದ ಚುನಾಯಿತರಾದವರು)** :-

೧೨೪೭ (೧೫೧೨) ಮಾನ್ಯ ಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ರಾಜ್ಯದಲ್ಲಿ ಇತ್ತೀಚೆಗೆ ಬಸ್‌ಗಳಲ್ಲಿ ಅಗ್ನಿ ಅನಾಹುತ ಸಂಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ರಾಜ್ಯದ ಎಲ್ಲಾ ಖಾಸಗಿ ಮತ್ತು ಸರ್ಕಾರಿ ಬಸ್ಸುಗಳಲ್ಲಿ ಅಗ್ನಿ ಶಾಮಕ ಅನಿಲದ ಸಿಲಿಂಡರ್‌ನ್ನು ಕಡ್ಡಾಯವಾಗಿ ಅಳವಡಿಸಲು ಕ್ರಮ ತೆಗೆದುಕೊಳ್ಳಲಾಗುವುದೇ ; (ವಿವರಣೆ ನೀಡುವುದು)

(ಇ) ಹಾಗಿದ್ದಲ್ಲಿ, ಅನಿರೀಕ್ಷಿತವಾಗಿ ಬಸ್‌ಗಳಲ್ಲಿ ಸಂಭವಿಸುವ ಅಗ್ನಿ ಅನಾಹುತಗಳಿಗೆ ತತ್‌ಕ್ಷಣ ಕ್ರಮ ಕೈಗೊಳ್ಳುವ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು ? (ವಿವರ ನೀಡುವುದು)

## ರಾಜ್ಯದಲ್ಲಿ ವಿಜ್ಞಾನ ಪಾರ್ಕ್‌ನ್ನು ಪ್ರಾರಂಭಿಸುವ ಕುರಿತು

**ಶ್ರೀ ಎಸ್.ವ್ಹಿ. ಸಂಕನೂರ (ಪದವೀಧರರ ಕ್ಷೇತ್ರ) :–**

೧೨೪೮ (೧೪೯೮) ಮಾನ್ಯ ಯೋಜನೆ ಮತ್ತು ಸಾಂಖ್ಯಿಕ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಮತ್ತು ವಿಜ್ಞಾನ ಹಾಗೂ ತಂತ್ರಜ್ಞಾನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ವಿಜ್ಞಾನ ಪಾರ್ಕ್‌ನ್ನು ಪ್ರಾರಂಭಿಸುವ ಉದ್ದೇಶ ಸರ್ಕಾರಕ್ಕೆ ಇದೆಯೇ ;

(ಆ) ಉದ್ದೇಶಿಸಿದ್ದಲ್ಲಿ, ಎಲ್ಲಿ ಸ್ಥಾಪಿಸಲು ನಿರ್ಧಾರಿಸಲಾಗಿದೆ ;

(ಇ) ಈ ಯೋಜನೆ ಯಾವಾಗ ಪ್ರಾರಂಭಗೊಳ್ಳಲಿರುವುದು ಹಾಗೂ ಈ ಪಾರ್ಕ್‌ಗೆ ನಿಗಧಿಪಡಿಸಿರುವ ಅನುದಾನವೆಷ್ಟು ?

## ಪ್ರಾದೇಶಿಕ ವಿಜ್ಞಾನ ಕೇಂದ್ರಗಳ ಕುರಿತು

**ಶ್ರೀ ಎಸ್.ವ್ಹಿ. ಸಂಕನೂರ (ಪದವೀಧರರ ಕ್ಷೇತ್ರ) :–**

೧೨೪೯ (೧೫೦೦) ಮಾನ್ಯ ಯೋಜನೆ ಮತ್ತು ಸಾಂಖ್ಯಿಕ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಮತ್ತು ವಿಜ್ಞಾನ ಹಾಗೂ ತಂತ್ರಜ್ಞಾನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಸ್ಥಾಪಿಸಲಾಗಿರುವ ಪ್ರಾದೇಶಿಕ ವಿಜ್ಞಾನ ಕೇಂದ್ರಗಳ ಸಂಖ್ಯೆ ಎಷ್ಟು ; ಅವುಗಳನ್ನು ಎಲ್ಲಿ ಸ್ಥಾಪಿಸಲು ಉದ್ದೇಶಿಸಲಾಗಿದೆ ; ಇದಕ್ಕೆ ಬಿಡುಗಡೆ ಮಾಡಿರುವ ಅನುದಾನದ ಮೊತ್ತ ಎಷ್ಟು ;

(ಆ) ೨೦೧೪-೧೫ ರಲ್ಲಿ ಹೊಸದಾಗಿ ಪ್ರಾದೇಶಿಕ ವಿಜ್ಞಾನ ಕೇಂದ್ರ ಸ್ಥಾಪನೆ ಮಾಡುವ ಉದ್ದೇಶ ಸರ್ಕಾರಕ್ಕೆ ಇದೆಯೆ ; ಉದ್ದೇಶಿಸಿದ್ದಲ್ಲಿ, ಯಾವ ಜಿಲ್ಲೆಯಲ್ಲಿ ಸ್ಥಾಪನೆ ಮಾಡಲಾಗುವುದು ;

(ಇ) ರಾಜ್ಯದಲ್ಲಿ ಎಷ್ಟು ಜಿಲ್ಲೆಯಲ್ಲಿ ಉಪಪ್ರಾದೇಶಿಕ ವಿಜ್ಞಾನ ಕೇಂದ್ರವನ್ನು ಸ್ಥಾಪಿಸಲಾಗಿದೆ ; ೨೦೧೪-೧೫ ರಲ್ಲಿ ಹೊಸದಾಗಿ ಎಷ್ಟು ಜಿಲ್ಲೆಗಳಲ್ಲಿ ಉಪಪ್ರಾದೇಶಿಕ ವಿಜ್ಞಾನ ಕೇಂದ್ರಗಳನ್ನು ಸ್ಥಾಪನೆ ಮಾಡುವ ಉದ್ದೇಶವಿದೆ ? (ಜಿಲ್ಲಾವಾರು ಮಾಹಿತಿ ನೀಡುವುದು)

## ಗ್ರಾಮೀಣ ವಿಜ್ಞಾನ ಕೇಂದ್ರಗಳು.

**ಶ್ರೀ ಎಸ್.ವಿ ಸಂಕನೂರ (ಪದವೀಧರರ ಕ್ಷೇತ್ರ) :-**

೧೨೫೦ (೧೪೪೯) ಮಾನ್ಯ ಯೋಜನೆ ಮತ್ತು ಸಾಂಖ್ಯಿಕ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಮತ್ತು ವಿಜ್ಞಾನ ಹಾಗೂ ತಂತ್ರಜ್ಞಾನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ಹಾಲಿ ಕಾರ್ಯನಿರ್ವಹಿಸುತ್ತಿರುವ ಗ್ರಾಮೀಣ ವಿಜ್ಞಾನ ಕೇಂದ್ರಗಲ ಸಂಖ್ಯೆ ಎಷ್ಟು ; (ಜಿಲ್ಲಾವಾರು ವಿವರ ನೀಡುವುದು).

(ಆ) ಈ ಗ್ರಾಮೀಣ ವಿಜ್ಞಾನ ಕೇಂದ್ರಗಳಿಗೆ ಕಾರ್ಯಕ್ರಮ ಏರ್ಪಡಿಸಲು ಪ್ರತಿ ವರ್ಷ ಅನುದಾನ ನೀಡಲಾಗುತ್ತಿದೆಯೇ ;

(ಇ) ಬರುವ ಆರ್ಥಿಕ ವರ್ಷದಲ್ಲಿ ಹೊಸದಾಗಿ ಗ್ರಾಮೀಣ ಶಾಲಾ ವಿಜ್ಞಾನ ಕೇಂದ್ರಗಳನ್ನು ಸ್ಥಾಪಿಸುವ ಹಾಗೂ ವಿಜ್ಞಾನ ಕಿಟ್ ವಿತರಣೆ ಮಾಡುವ ಯೋಜನೆ ಸರ್ಕಾರದ ಮುಂದಿದೆಯೇ ?

F-8-B/B

## ರಾಜ್ಯದಲ್ಲಿರುವ ಸರ್ಕಾರಿ ಹಾಗೂ ಖಾಸಗಿ ವೈದ್ಯಕೀಯ ಕಾಲೇಜುಗಳ ಕುರಿತು

**ಶ್ರೀ ಎಸ್.ವ್ಹಿ. ಸಂಕನೂರ (ಪದವೀಧರರ ಕ್ಷೇತ್ರ) :-**

೧೨೫೧ (೧೪೯೭) ಮಾನ್ಯ ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿರುವ ಸರಕಾರಿ ಹಾಗೂ ಖಾಸಗಿ ವೈದ್ಯಕೀಯ ಕಾಲೇಜುಗಳ ಸಂಖ್ಯೆ ಎಷ್ಟು ; (ಜಿಲ್ಲಾವಾರು, ಕಾಲೇಜುವಾರು ಮಾಹಿತಿ ನೀಡುವುದು).

(ಆ) ಸದ್ಯ ಕಾರ್ಯನಿರ್ವಹಿಸುತ್ತಿರುವ ಸರಕಾರಿ ವೈದ್ಯಕೀಯ ಮಹಾವಿದ್ಯಾಲಯಗಳಲ್ಲಿ ಎಮ್.ಸಿ.ಐ.ನಿಯಮದಡಿ ಬೋಧಕರ ಮತ್ತು ವೈದ್ಯರ ಕೊರತೆ ಇದೆಯೇ ; ಇದ್ದಲ್ಲಿ ಬರುವ ಶೈಕ್ಷಣಿಕ ವರ್ಷ (ಕಾಲೇಜುವಾರು ವಿವರ ನೀಡುವುದು) ೨೦೧೫-೧೬ ರಲ್ಲಿ ಎಷ್ಟು ಪ್ರಾಧ್ಯಾಪಕ ಹಾಗೂ ವೈದ್ಯರನ್ನು ನೇಮಕ ಮಾಡಿಕೊಳ್ಳುವ ಯೋಜನೆ ಹೊಂದಿದ್ದೀರಿ ? (ಕಾಲೇಜುವಾರು ಪ್ರತ್ಯೇಕವಾದ ವಿವರ ನೀಡುವುದು).

## ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಗಳಲ್ಲಿ, ಚಿತ್ರಕಲಾ ಶಿಕ್ಷಕರ ನೇಮಕ ಕುರಿತು.

**ಶ್ರೀ ಎಸ್.ವ್ಹಿ. ಸಂಕನೂರ (ಪದವೀಧರರ ಕ್ಷೇತ್ರ) :-**

೧೨೫೨ (೧೪೯೬) ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಮುರಾರ್ಜಿ ದೇಸಾಯಿ ಹಾಗೂ ಕಿತ್ತೂರು ರಾಣಿ ಚೆನ್ನಮ್ಮ ವಸತಿ

ಶಾಲೆಗಳಲ್ಲಿ, ಚಿತ್ರಕಲಾ ಶಿಕ್ಷಕರ ಹುದ್ದೆಗಳನ್ನು ನೇಮಕ ಮಾಡಲು ೨೭-೦೪-೨೦೧೧ ರಂದು ಅಧಿಸೂಚನೆ ಹೊರಡಿಸಿ, ೫ ವರ್ಷ ಕಳೆದರೂ ಆಯ್ಕೆ ಪಟ್ಟಿ ಮಾಡದೆ ಇರಲು ಕಾರಣಗಳೇನು ;

(ಆ) ನೇಮಕಾತಿ ಆದೇಶ ಪ್ರಕಟಿಸುವಲ್ಲಿ ಇರುವ ಸಮಸ್ಯೆಗಳಿಗೆ ಸರ್ಕಾರ ಪರಿಹಾರ ಕಂಡುಹಿಡಿದಿದೆಯೇ ; ಇದಕ್ಕೆ ಸಂಬಂಧಿಸಿದಂತೆ ಯಾವ ನಿರ್ಣಯ ಕೈಗೊಂಡಿದೆ ;

(ಇ) ಚಿತ್ರಕಲಾ ಶಿಕ್ಷಕರ ನೇಮಕಾತಿ ಪ್ರಕ್ರಿಯೆಯನ್ನು ಯಾವಾಗ ಮುಕ್ತಾಯಗೊಳಿಸಲಾಗುವುದು ?

## ಬಳ್ಳಾರಿ ಘೋಷ ಆಸ್ಪತ್ರೆಯಲ್ಲಿ ಅವಶ್ಯಕ ಉಪಕರಣಗಳ ಕೊರತೆ.

**ಶ್ರೀ ಮೃತ್ಯುಂಜಯ ಜಿನಗಾ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೧೨೫೩ (೧೫೦೨) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬಳ್ಳಾರಿಯ ಘೋಷ ಆಸ್ಪತ್ರೆಯು ಹೊಸ ಕಟ್ಟಡದಲ್ಲಿ ಕಾರ್ಯ ನಿರ್ವಹಿಸುತ್ತಿದ್ದು, ಶಸ್ತ್ರ ಚಿಕಿತ್ಸಾ ಘಟಕದಲ್ಲಿ ಸೂಕ್ತವಾದ ಉಪಕರಣಗಳಿಲ್ಲದೇ ಇರುವುದರಿಂದ ಗರ್ಭಿಣಿಯರಿಗೆ ಚಿಕಿತ್ಸೆ ನೀಡಲು ಸಾಕಷ್ಟು ತೊಂದರೆಯಾಗುತ್ತಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಪ್ರಸ್ತುತ ಈ ಆಸ್ಪತ್ರೆಯಲ್ಲಿ ಯಾವ ಯಾವ ಉಪಕರಣಗಳು ಲಭ್ಯವಿಲ್ಲ ; (ವಿವರ ನೀಡುವುದು)

(ಇ) ಅವಶ್ಯಕ ಉಪಕರಣಗಳನ್ನು ಶೀಘ್ರವಾಗಿ ಈ ಆಸ್ಪತ್ರೆಗೆ ಪೂರೈಸಲು ಸರ್ಕಾರ ಕ್ರಮ ಕೈಗೊಳ್ಳುವುದೇ ?

## ಐ.ಟಿ. ಮತ್ತು ಬಿ.ಟಿ. ಇಲಾಖೆಯಿಂದ ಗ್ರಾಮೀಣ ಪ್ರದೇಶ ನಿರುದ್ಯೋಗಿ ಯುವಕರಿಗೆ ಹಮ್ಮಿಕೊಳ್ಳಲಾದ ಯೋಜನೆಗಳ ಕುರಿತು.

**ಶ್ರೀ ಮೃತ್ಯುಂಜಯ ಜಿನಗಾ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೧೨೫೪ (೧೫೦೧) ಮಾನ್ಯ ಯೋಜನೆ ಮತ್ತು ಸಾಂಖ್ಯಿಕ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಮತ್ತು ವಿಜ್ಞಾನ ಹಾಗೂ ತಂತ್ರಜ್ಞಾನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಗ್ರಾಮೀಣ ಪ್ರದೇಶದಲ್ಲಿರುವ ವಿದ್ಯಾವಂತ ನಿರುದ್ಯೋಗಿ ಯುವಕರಿಗೆ ಮಾಹಿತಿ ಮತ್ತು ತಂತ್ರಜ್ಞಾನ ಇಲಾಖೆಯಿಂದ ಯಾವ ಯಾವ ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ ;

(ಆ) ಕಳೆದ ಎರಡು ವರ್ಷಗಳಲ್ಲಿ ಈ ಯೋಜನೆಗಳಿಂದ ಎಷ್ಟು ನಿರುದ್ಯೋಗಿ ಯುವಕರಿಗೆ ಅನುಕೂಲವಾಗಿದೆ ;

(ಇ) ಬಳ್ಳಾರಿ ಜಿಲ್ಲೆಯಲ್ಲಿ ಈ ಯೋಜನೆಗಳಿಂದ ಎಷ್ಟು ನಿರುದ್ಯೋಗಿ ಯುವಕರು ಇದರ ಪ್ರಯೋಜನ ಪಡೆದಿದ್ದಾರೆ ?

**ಸ್ಮಾರ್ಟ್‌ಕಾರ್ಡ್ ವಿತರಣೆ ಕಾರ್ಯ ವಿಳಂಬವಾಗುತ್ತಿರುವ ಕುರಿತು.**

**ಶ್ರೀ ಮೃತ್ಯುಂಜಯ ಜಿನಗಾ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೧೨೫೫ (೧೫೦೩) ಮಾನ್ಯ ಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಆರ್.ಟಿ.ಓ. ಕಛೇರಿಯಲ್ಲಿ ಸ್ಮಾರ್ಟ್‌ಕಾರ್ಡ್ ವಿತರಣೆ ಕಾರ್ಯ ತುಂಬಾ ವಿಳಂಬವಾಗುತ್ತಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ಶೀಘ್ರವಾಗಿ ಸ್ಮಾರ್ಟ್‌ಕಾರ್ಡ್ ವಿತರಣೆ ಮಾಡಲು ಸರ್ಕಾರ ಏನಾದರೂ ಪರ್ಯಾಯ ವ್ಯವಸ್ಥೆ ಕಲ್ಪಿಸುವುದೇ ;

(ಇ) ಈ ಪರ್ಯಾಯ ವ್ಯವಸ್ಥೆಯಿಂದ ಸ್ಮಾರ್ಟ್‌ಕಾರ್ಡ್ ವಿತರಣೆಗೆ ಹೆಚ್ಚಿನ ಶುಲ್ಕವನ್ನೇನಾದರು ತುಂಬಬೇಕೆ ?

**ಬಿ.ಪಿ.ಎಲ್. ಕಾರ್ಡ್ ವಿತರಣೆ ಕಾರ್ಯ ವಿಳಂಬವಾಗುತ್ತಿರುವುದು.**

**ಶ್ರೀ ಮೃತ್ಯುಂಜಯ ಜಿನಗಾ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೧೨೫೬ (೧೫೦೫) ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬಳ್ಳಾರಿ ಜಿಲ್ಲೆಯಲ್ಲಿ ಬಿ.ಪಿ.ಎಲ್. ಕಾರ್ಡ್ ವಿತರಣೆ ಕಾರ್ಯ ತುಂಬಾ ವಿಳಂಬವಾಗುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ೩೫ ವಾರ್ಡ್‌ಗಳಿರುವ ಬಳ್ಳಾರಿ ಮಹಾನಗರದಲ್ಲಿ ಎರಡು ಕಡೆ ಮಾತ್ರ ಬಿ.ಪಿ.ಎಲ್. ಕಾರ್ಡ್ ವಿತರಣೆ ಮಾಡಲು ಕ್ರಮ ಕೈಗೊಂಡಿರುವುದರಿಂದ ವಿತರಣಾ ಕಾರ್ಯ ವಿಳಂಬವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಸರ್ಕಾರ ಪರ್ಯಾಯ ವ್ಯವಸ್ಥೆ ಮಾಡುವುದೇ ;

(ಇ) ಪ್ರತಿ ವಾರ್ಡ್‌ಗೆ ಒಂದರಂತೆ ಬಿ.ಪಿ.ಎಲ್. ಕಾರ್ಡ್ ವಿತರಣೆ ಕೇಂದ್ರ ಸ್ಥಾಪಿಸಿ ಸಾರ್ವಜನಿಕರಿಗೆ ಸಮರ್ಪಕವಾಗಿ ವಿತರಣೆ ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೇ ?

## ರಾಜ್ಯದಲ್ಲಿನ ಗಿರಿಜನ ವಾಸಿಗಳನ್ನು ಸಮಾಜದ ಮುಖ್ಯವಾಹಿನಿಗೆ ತರುವ ಬಗ್ಗೆ.

**ಶ್ರೀ ಎಂ. ಶ್ರೀನಿವಾಸ್ (ವಿಧಾನಸಭೆಯಿಂದ ಚುನಾಯಿತರಾದವರು) :-**

೧೨೫೭(೧೫೨೪) ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ಗಿರಿಜನರು ಹೆಚ್ಚಾಗಿ ವಾಸ ಮಾಡುತ್ತಿರುವ ಪ್ರದೇಶಗಳು/ ಕಾಡು ಪ್ರದೇಶಗಳು ಯಾವುವು ; ಇಲ್ಲಿರುವ ಗಿರಿಜನರ ಅಂದಾಜು ಜನಸಂಖ್ಯೆ ಎಷ್ಟು ; (ಪ್ರತ್ಯೇಕ ಮಾಹಿತಿ ಒದಗಿಸುವುದು)

(ಆ) ಕಾಡಿನಲ್ಲಿ ಇನ್ನೂ ವಾಸಿಸುತ್ತಿರುವ ಗಿರಿಜನರನ್ನು ಸಮಾಜದ ಮುಖ್ಯವಾಹಿನಿಗೆ ತರುವ ನಿಟ್ಟಿನಲ್ಲಿ ಸರ್ಕಾರವು ರೂಪಿಸಿರುವ ಯೋಜನೆಗಳು ಯಾವುವು ;

(ಇ) ಈ ಯೋಜನೆಗಳಿಗಾಗಿ ಕಳೆದ ३ ವರ್ಷಗಳಲ್ಲಿ ಒದಗಿಸಿರುವ ವಿವಿಧ ರೂಪದಲ್ಲಿನ ಅನುದಾನ ಎಷ್ಟು ;

(ಈ) ಈ ನಿಟ್ಟಿನಲ್ಲಿ ಸರ್ಕಾರವು ಪ್ರಗತಿ ಸಾಧಿಸಲು ಸಾಧ್ಯವಾಗಿದೆಯೇ : (ಯೋಜನಾವಾರು ಮಾಹಿತಿ ಒದಗಿಸುವುದು)

(ಉ) ಕೆಲವು ಸ್ವಯಂ ಸೇವಾ ಸಂಸ್ಥೆಗಳು, ಸಂಘಟನೆಗಳು (ಎನ್.ಜಿ.ಓ) ಗಿರಿಜನರನ್ನು ಮುಖ್ಯವಾಹಿನಿಗೆ ತರುವಲ್ಲಿ ಅಡಚಣೆಯಾಗಿರುವುದು ನಿಜವೇ ; ಹಾಗಿದ್ದಲ್ಲಿ, ಅಂತಹ ಸಂಸ್ಥೆಗಳು ಸರ್ಕಾರದಿಂದ, ವಿದೇಶದಿಂದ ಪಡೆಯುತ್ತಿರುವ ದೇಣಿಗೆ/ಅನುದಾನದ ಬಗ್ಗೆ ಸರ್ಕಾರಕ್ಕೆ ಮಾಹಿತಿ ಇದೆಯೇ ?

## ರಾಜೀವ್‌ಗಾಂಧಿ ಆರೋಗ್ಯಶ್ರೀ ಯೋಜನೆ ಕುರಿತು

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೧೨೫೮ (೧೫೦೮) ಮಾನ್ಯ ಆರೋಗ್ಯ ಮತ್ತು ಕುಟುಂಬ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ "ರಾಜೀವ್‌ಗಾಂಧಿ ಆರೋಗ್ಯಶ್ರೀ" ಯೋಜನೆಯನ್ನು ಜಾರಿಗೊಳಿಸಲಾಗಿದೆಯೇ ; ರಾಜ್ಯಾದ್ಯಂತ ಈ ಯೋಜನೆಯಡಿ ಎಷ್ಟು ಜನರು ಪ್ರಯೋಜನ ಪಡೆದಿದ್ದಾರೆ ;

(ಆ) ಬೆಳಗಾವಿ ಜಿಲ್ಲೆಯಲ್ಲಿ ಈ ಯೋಜನೆಯಡಿ ಎಷ್ಟು ಜನರು ಪ್ರಯೋಜನೆ ಪಡೆದಿದ್ದಾರೆ ; (ತಾಲ್ಲೂಕುವಾರು ವಿವರ ನೀಡುವುದು)

(ಇ) ಬೆಳಗಾವಿ ಜಿಲ್ಲೆಯಲ್ಲಿ ರೋಗಿಗಳ ಚಿಕಿತ್ಸೆಗಾಗಿ ಎಷ್ಟು ಖಾಸಗಿ ಆಸ್ಪತ್ರೆಗಳನ್ನು ಗುರುತಿಸಲಾಗಿದೆ ; (ತಾಲ್ಲೂಕುವಾರು ಮಾಹಿತಿ ನೀಡುವುದು)

(ಈ) ಈ ಯೋಜನೆಯಡಿ ಉಪಯೋಗವನ್ನು ಪಡೆದುಕೊಳ್ಳಲು ಇರುವ ಮಾನದಂಡಗಳೇನು ? (ವಿವರ ನೀಡುವುದು)

## ಅನ್ನಭಾಗ್ಯ ಯೋಜನೆಯಡಿ ಬೇರೆ ಬೇರೆ ದವಸಧಾನ್ಯಗಳನ್ನು ವಿತರಿಸುವ ಬಗ್ಗೆ.

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೧೨೫೯(೧೫೦೭) ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ನಮ್ಮ ರಾಜ್ಯದಲ್ಲಿ ಕಡುಬಡವರ ಮಹತ್ವಕಾಂಕ್ಷೆಯ ಯೋಜನೆಯಾದ "ಅನ್ನಭಾಗ್ಯ" ಯೋಜನೆಯಡಿ ಅಕ್ಕಿಯನ್ನು ಹೊರತುಪಡಿಸಿ ಇನ್ನೂ ಯಾವ ಯಾವ ದವಸಧಾನ್ಯಗಳನ್ನು ನೀಡಲು ಸರ್ಕಾರ ಕ್ರಮ ಕೈಗೊಂಡಿದೆ ;

(ಆ) ಹಾಗಿದ್ದಲ್ಲಿ, ರಾಜ್ಯದ ಯಾವ ಯಾವ ಭಾಗಗಳಲ್ಲಿ ಯಾವ ಯಾವ ದವಸಧಾನ್ಯಗಳನ್ನು ನೀಡಲಾಗುತ್ತಿದೆ ;

(ಇ) ಬೆಳಗಾವಿ ಜಿಲ್ಲೆಯಲ್ಲಿ ಅನ್ನಭಾಗ್ಯ ಯೋಜನೆಯಡಿ ಎಷ್ಟು ಕುಟುಂಬಗಳಿಗೆ ಅಕ್ಕಿ ನೀಡಲಾಗುತ್ತಿದೆ ; ಈ ಯೋಜನೆಯಡಿ ಎಷ್ಟು ಬಿ.ಪಿ.ಎಲ್. ಕಾರ್ಡುದಾರರು ಒಳಪಡುತ್ತಾರೆ ; ಪಡಿತರ ಚೀಟಿಗಾಗಿ ಅರ್ಜಿ ಸಲ್ಲಿಸಿದವರಿಗೆ ಕಾರ್ಡುಗಳ

ವಿತರಣೆಯಾಗಿದೆಯೇ ; ಇಲ್ಲವಾದಲ್ಲಿ ಯಾವ ಕಾಲಮಿತಿಯಲ್ಲಿ ವಿತರಿಸಲಾಗುವುದು ;

(ಈ) ಅನ್ನಭಾಗ್ಯ ಯೋಜನೆಯಡಿ ಎ.ಪಿ.ಎಲ್. ಕಾರ್ಡುದಾರರಿಗೂ ಅಕ್ಕಿ ನೀಡಲಾಗುತ್ತಿದೆಯೇ ; ಇಲ್ಲವಾದಲ್ಲಿ ನೀಡುವ ವಿಚಾರ ಸರ್ಕಾರದ ಮುಂದೆ ಇದೆಯೇ ?

## ಪ್ರತಿ ಜಿಲ್ಲೆಯಲ್ಲಿ ಡಯಾಲಿಸಸ್ ಕೇಂದ್ರಗಳ ಸ್ಥಾಪನೆ

**ಶ್ರೀ ಅಶ್ವತನಾರಾಯಣ (ವಿಧಾನಸಭೆಯಿಂದ ಚುನಾಯಿತರಾದವರು) :-**

೧೨೬೦ (೧೫೧೭) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಪ್ರತಿ ಜಿಲ್ಲೆಗ ಒಂದರಂತೆ ಸರ್ಕಾರಿ ಆಸ್ಪತ್ರೆಯಲ್ಲಿ ಡಯಾಲಿಸಸ್ ಕೇಂದ್ರಗಳನ್ನು ಸ್ಥಾಪಿಸಲಾಗುವುದೆಂದು ಹೇಳಲಾದ ರೀತ್ಯಾ ೨೦೧೪-೧೫ರಲ್ಲಿ ತೆರೆಯಲಾದ ಡಯಾಲಿಸಸ್ ಕೇಂದ್ರಗಳ ಸಂಖ್ಯೆ ಎಷ್ಟು ; ಜಿಲ್ಲಾವಾರು ತೆರೆದಿರುವ ಕೇಂದ್ರಗಳು ಮತ್ತು ಅಳವಡಿಸಿರುವ ಯಂತ್ರಗಳ ಸಂಖ್ಯೆ ಎಷ್ಟು ; (ವಿವರ ನೀಡುವುದು)

(ಆ) ೨೦೧೪-೧೫ರಲ್ಲಿ ಜೆನರಿಕ್ ಔಷಧಿ ಮಳಿಗೆಗಳನ್ನು ತೆರೆಯಲಾಗಿದೆಯೇ ; ತೆರೆದಿದ್ದರೆ, ಯಾವ ಯಾವ ಆಸ್ಪತ್ರೆಗಳಲ್ಲಿ ತೆರೆಯಲಾಗಿದೆ ? (ಜಿಲ್ಲಾವಾರು ವಿವರ ನೀಡುವುದು)

•

## ವಸತಿ ಶಾಲೆಗಳ ಬಗ್ಗೆ

**ಶ್ರೀ ಅಶ್ವತ್‌ನಾರಾಯಣ (ವಿಧಾನಸಭೆಯಿಂದ ಚುನಾಯಿತರಾದವರು) :-**

೧೨೬೧ (೧೫೧೫) ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಪ್ರತಿಭಾವಂತ ಬಡ ವಿದ್ಯಾರ್ಥಿಗಳಿಗಾಗಿ ೨೦೧೪-೧೫ನೇ ಸಾಲಿನಲ್ಲಿ ಎಷ್ಟು ವಸತಿ ಶಾಲೆಗಳನ್ನು ನಿರ್ಮಾಣ ಮಾಡಲಾಗಿದೆ ; ನಿರ್ಮಿಸಿದ್ದರೆ, ಇದಕ್ಕಾಗಿ ಬಿಡುಗಡೆ ಮಾಡಿದ ಹಣವೆಷ್ಟು ;

(ಆ) ಎಲ್ಲೆಲ್ಲಿ ವಸತಿ ಶಾಲೆಗಳನ್ನು ಪ್ರಾರಂಭಿಸಲಾಗಿದೆ ; ಇದರ ಅನುಕೂಲ ಪಡೆದ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು ; (ಜಿಲ್ಲಾವಾರು ಮಾಹಿತಿ ನೀಡುವುದು)

(ಇ) ಬೆಂಗಳೂರು, ಮೈಸೂರು, ಬೆಳಗಾವಿ, ದಾವಣಗೆರೆ, ಮಂಗಳೂರು, ಧಾರವಾಡ, ಕಲಬುರಗಿ ಇತರೆ ಕೇಂದ್ರಗಳಿಗೆ ಎಷ್ಟು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿನಿಲಯಗಳನ್ನು ಸ್ಥಾಪಿಸಲಾಗಿದೆ ; ಇದರಿಂದ ಅನುಕೂಲ ಪಡೆದ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು ;

(ಈ) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಉಪ ಯೋಜನೆಯುಡಿಯುಲ್ಲಿ ಸಂಬಂಧಿಸಿದ ಇಲಾಖೆಗಳಿಂದ

ಇಂಜಿನಿಯರಿಂಗ್, ಮೆಡಿಕಲ್, ಪಿ.ಹೆಚ್.ಡಿ ಮತ್ತು ಪತ್ರಿಕೋದ್ಯಮ ಕೋರ್ಸ್ ವಿದ್ಯಾರ್ಥಿಗಳಿಗೆ ಉಚಿತ ಲ್ಯಾಪ್‌ಟಾಪ್ ಒದಗಿಸಲಾಗಿದೆಯೇ ೨೦೧೪-೧೫ರಲ್ಲಿ ಈ ಸೌಲಭ್ಯ ಪಡೆದ ಫಲಾನುಭವಿಗಳ ಸಂಖ್ಯೆ ಎಷ್ಟು ? (ಜಿಲ್ಲಾವಾರು ಮಾಹಿತಿ ನೀಡುವುದು)

## ವಸತಿ ಶಾಲೆಗಳ ಬಗ್ಗೆ

**ಶ್ರೀ ಅಶ್ವತ್‌ನಾರಾಯಣ (ವಿಧಾನಸಭೆಯಿಂದ ಚುನಾಯಿತರಾದವರು) :-**

೧೨೬೨ (೧೫೧೬) ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಸಾಂಪ್ರದಾಯಿಕ ವೃತ್ತಿಗಳಲ್ಲಿ ಜೀವನ ನಡೆಸುತ್ತಿರುವ ಧೋಬಿ ಸಮಾಜ, ಸವಿತ ಸಮಾಜ, ತಿಗಳ ಸಮಾಜದವರಿಗೆ ವೃತ್ತಿ ಕೌಶಲ್ಯ ಅಭಿವೃದ್ಧಿಗಾಗಿ ಹಾಗೂ ಆಧುನಿಕ ಉಪಕರಣಗಳನ್ನು ಕೊಳ್ಳಲು ಎಷ್ಟು ಫಲಾನುಭವಿಗಳಿಗೆ ಸಾಲ ಸೌಲಭ್ಯ ಒದಗಿಸಲಾಗಿದೆ ; ೨೦೧೪-೧೫ರಲ್ಲಿ ಸಾಲ ಸೌಲಭ್ಯ ಪಡೆದಿರುವ ಫಲಾನುಭವಿಗಳ ಸಂಖ್ಯೆ ಎಷ್ಟು ; (ಜಾತಿವಾರು ಜಿಲ್ಲಾವಾರು ವಿವರ ನೀಡುವುದು)

(ಆ) ವಿಶ್ವಕರ್ಮ ಸಮುದಾಯದವರು ಕೈಗೊಳ್ಳುವ ಕೆಲಸ ಕಂಚು, ಚಿನ್ನ, ಬೆಳ್ಳಿ, ಬಡಗಿ ವೃತ್ತಿ ಮತ್ತು ಕಬ್ಬಿಣದ ಹಾರೆ, ಗುದ್ದಲಿ,

ಚನಕೆ ಹಾಗೂ ಇನ್ನಿತರ ಕೃಷಿ ಉಪಕರಣ ತಯಾರಿಸುವವರಿಗೆ ಆರ್ಥಿಕ ನೆರವು ನೀಡಲಾಗುತ್ತಿದೆಯೇ ; ಹಾಗಿದ್ದಲ್ಲಿ, ಜಿಲ್ಲಾವಾರು ಎಷ್ಟು ಹಣ ಬಿಡುಗಡೆ ಮಾಡಲಾಗಿದೆ ; ಇದರ ಫಲಾನುಭವಿಗಳ ಸಂಖ್ಯೆ ಎಷ್ಟು ? (ವಿವರ ನೀಡುವುದು)

## ಉನ್ನತಾಧಿಕಾರಿಗಳ ಸಮಿತಿ ಬಗ್ಗೆ

**ಶ್ರೀಮತಿ ಮೋಟಮ್ಮ (ವಿಧಾನಸಭೆಯಿಂದ ಚುನಾಯಿತರಾದವರು) :-**

೧೨೬೩ (೧೬೮೬) ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ವರ್ಗದ ನೌಕರರ ನೇಮಕ ಹಾಗೂ ಮುಂಬಡ್ತಿಯಲ್ಲಿ ಅನ್ಯಾಯವಾಗದಂತೆ ರಕ್ಷಣೆ ಮಾಡಲು ಉನ್ನತಾಧಿಕಾರಿಗಳ ಸಮಿತಿ (High power committe)ರಚನೆ ಮಾಡಿ ಎಷ್ಟು ವರ್ಷಗಳಾಗಿದೆ ;

(ಆ) ಈ ಬಗ್ಗೆ ಪರಿಶೀಲಿಸಲು ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಇತ್ತೀಚಿನ ೨ ವರ್ಷದಲ್ಲಿ ಎಷ್ಟು ಸಾರಿ ಸಭೆ ಸೇರಿದೆ ;

(ಇ) ಉನ್ನತ ಶಿಕ್ಷಣ ಹಾಗೂ ಗೃಹ ಇಲಾಖೆಯಲ್ಲಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ವರ್ಗದ ನೌಕರರಿಗೆ ಕೊಡುವ ಮುಂಬಡ್ತಿಯಲ್ಲಿ ಅನ್ಯಾಯವಾಗಿರುವುದು ಉನ್ನತಾಧಿಕಾರಿಗಳ ಸಮಿತಿ (High power committe) ಗಮನಕ್ಕೆ ಬಂದಿದೆಯೇ ;

(ಈ) ಮಾನಿಟರ್ ಸೆಲ್ ಈ ಬಗ್ಗೆ ಏಕೆ ಗಮನ ಹರಿಸುತ್ತಿಲ್ಲ ?

## ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಹಾಜರಾಗುವ ಅಭ್ಯರ್ಥಿಗಳಿಗೆ ಪರೀಕ್ಷಾ ಪೂರ್ವ ತರಬೇತಿ

**ಶ್ರೀಮತಿ ಮೋಟಮ್ಮ (ವಿಧಾನಸಭೆಯಿಂದ ಚುನಾಯಿತರಾದವರು) :-**

೧೨೬೪ (೧೬೮೫) ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಸಮಾಜ ಕಲ್ಯಾಣ ಇಲಾಖೆಯಿಂದ ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಹಾಜರಾಗುವ ಅಭ್ಯರ್ಥಿಗಳಿಗೆ ಪರೀಕ್ಷಾ ಪೂರ್ವ ತರಬೇತಿಯನ್ನು ನೀಡುವ ಯೋಜನೆಯನ್ನು ಯಾವಾಗಿನಿಂದ ಆರಂಭಿಸಲಾಯಿತು ;

(ಆ) ಈ ಯೋಜನೆಯಡಿ ಪ್ರತಿ ವರ್ಷ ಯಾವ ಯಾವ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಹಾಜರಾಗುವ ಅಭ್ಯರ್ಥಿಗಳಿಗೆ ತರಬೇತಿ ನೀಡಲಾಗುತ್ತಿದೆ ;

(ಇ) ಇಲ್ಲಿಯವರೆಗೆ ಎಷ್ಟು ಅಭ್ಯರ್ಥಿಗಳು ತರಬೇತಿ ಪಡೆದಿದ್ದಾರೆ ; (ವರ್ಷವಾರು ಹಾಗೂ ಪರೀಕ್ಷಾವಾರು ಮಾಹಿತಿ ನೀಡುವುದು)

(ಈ) ತರಬೇತಿ ಪಡೆದಿರುವವರಲ್ಲಿ ಎಷ್ಟು ಜನರು ನೇಮಕಾತಿ ಹೊಂದುವಲ್ಲಿ ಯಶಸ್ವಿಯಾಗಿದ್ದಾರೆ ; (ವಿವರವಾದ ಮಾಹಿತಿ ನೀಡುವುದು)

(ಉ) ಈ ತರಬೇತಿಗಾಗಿ ಪ್ರತಿ ವರ್ಷ ಒದಗಿಸಲಾದ ಅನುದಾನ ಎಷ್ಟು ?

**ಬಿ.ಪಿ.ಎಲ್ ಕಾರ್ಡ್‌ಗಳನ್ನು ಆನ್‌ಲೈನ್ ಮುಖಾಂತರ ನವೀಕರಣ.**

**ಶ್ರೀಮತಿ ಮೋಟಮ್ಮ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೨೬೫ (೧೬೮೪) ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬಿ.ಪಿ.ಎಲ್ ಕಾರ್ಡ್ ನವೀಕರಿಸಲು ಆನ್‌ಲೈನ್ ವ್ಯವಸ್ಥೆ ಮಾಡಿರುವುದರಿಂದ ಗ್ರಾಮೀಣ ಜನರಿಗೆ ಮಾಹಿತಿ ಕೊರತೆ ಉಂಟಾಗಿರುವುದು ನಿಜವೇ ;

(ಆ) ಗ್ರಾಮೀಣ ಜನರಿಗೆ ಮಾಹಿತಿ ನೀಡಲು ಸರ್ಕಾರ ಕೈಗೊಂಡ ಕ್ರಮಗಳೇನು ;

(ಇ) ಬಿ.ಪಿ.ಎಲ್ ಕಾರ್ಡಿಗೆ ಆನ್‌ಲೈನ್ ಮೂಲಕ ಬಂದ ಅರ್ಜಿಗಳ ಸಂಖ್ಯೆ ಎಷ್ಟು ; ಇದರಲ್ಲಿ ಗ್ರಾಮೀಣ ಪ್ರದೇಶದಿಂದ ಬಂದ ಅರ್ಜಿಗಳ ಸಂಖ್ಯೆ ಎಷ್ಟು ;

(ಈ) ಅವಿದ್ಯಾವಂತ ಬಡಜನರಿಗೆ ಬಿ.ಪಿ.ಎಲ್ ಕಾರ್ಡ್ ಒದಗಿಸಲು ಗ್ರಾಮೀಣ ಪ್ರದೇಶದ ಜನರಿಗೆ ಅಧಿಕಾರಿಗಳಿಂದಾಗುತ್ತಿರುವ ಅಲೆದಾಟ ತಪ್ಪಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ? (ವಿವರ ನೀಡುವುದು)

## ಕೊಳವೆ ಬಾವಿಗಳು.

**ಶ್ರೀಮತಿ ಮೋಟಮ್ಮ (ವಿಧಾನಸಭೆಯಿಂದ ಚುನಾಯಿತರಾದವರು) :-**

೧೨೬೬ (೧೬೮೭) ಮಾನ್ಯ ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕಳೆದ ಮೂರು ವರ್ಷಗಳಲ್ಲಿ ಚಿಕ್ಕಮಗಳೂರು ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗಗಳ ನಿಗಮದ ವತಿಯಿಂದ ಗಂಗಾಕಲ್ಯಾಣ ಯೋಜನೆಯಡಿಯಲ್ಲಿ ಮಂಜೂರಾದ ಕೊಳವೆ ಬಾವಿಗಳ ಸಂಖ್ಯೆ ಎಷ್ಟು ; (ವರ್ಷವಾರು ಫಲಾನುಭವಿಗಳ ಸಂಪೂರ್ಣ ವಿವರಗಳನ್ನು ನೀಡುವುದು)

(ಆ) ಹಾಗಿದ್ದಲ್ಲಿ, ಯೋಜನೆಯಲ್ಲಿ ಮಂಜೂರಾದ ಫಲಾನುಭವಿಗಳಿಗೆ ಕೊಳವೆ ಬಾವಿಗಳನ್ನು ಕೊರೆಸಲಾಗಿದೆಯೇ ; (ವರ್ಷವಾರು ಫಲಾನುಭವಿಗಳ ವಿವರ ನೀಡುವುದು)

(ಇ) ಸದರಿ ಕೆಲಸ ವಿಳಂಬವಾಗಲು ಕಾರಣಗಳೇನು ? (ಮಾಹಿತಿ ನೀಡುವುದು)

## ಕಲಬುರಗಿ ಜಿಲ್ಲೆಯ ಬಸ್ ನಿಲ್ದಾಣಗಳನ್ನು ಮೇಲ್ದರ್ಜೆಗೇರಿಸುವ ಬಗ್ಗೆ.

**ಶ್ರೀ ಇಕ್ಬಾಲ್ ಅಹ್ಮದ್ ಸರಡಗಿ (ನಾಮನಿರ್ದೇಶನ ಹೊಂದಿದವರು):-**

೧೨೬೭ (೧೩೯೨) ಮಾನ್ಯ ಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕಲಬುರಗಿ ಜಿಲ್ಲೆಯಲ್ಲಿರುವ ಕ.ರಾ.ರ.ಸಾರಿಗೆ ಸಂಸ್ಥೆಯಲ್ಲಿ ಬಸ್ ನಿಲ್ದಾಣಗಳನ್ನು ಮೇಲ್ದರ್ಜೆಗೇರಿಸುವ ಪ್ರಸ್ತಾವನೆ ಸರ್ಕಾರದ

ಮುಂದಿದೆಯೇ ; ಇದ್ದಲ್ಲಿ ಈ ಬಗ್ಗೆ ಕೈಗೊಂಡಿರುವ ಕ್ರಮಗಳೇನು ; (ವಿವರ ಒದಗಿಸುವುದು)

(ಆ) ಜಿಲ್ಲೆಯಲ್ಲಿ ಹೊಸದಾಗಿ ಯಾವ ಯಾವ ಬಸ್ ನಿಲ್ದಾಣಗಳನ್ನು ಸ್ಥಾಪಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆ ? (ವಿವರ ಒದಗಿಸುವುದು)

ವಿ. ಶ್ರೀಶ್

ಕಾರ್ಯದರ್ಶಿ

ಕರ್ನಾಟಕ ವಿಧಾನ ಪರಿಷತ್ತು

ಸರ್ಕಾರಿ ಕೇಂದ್ರ ಮುದ್ರಣಾಲಯ, ಘಟಕ-2, ಬೆಂಗಳೂರು-59/ಶಾ.ಸೂ.03509/ 1200 ಪ್ರತಿಗಳು/10-03-15